॥ ಪ್ರಸೀದತು ಶ್ರೀ ವೀರಾಂಜನೇಯಃ ॥

# ಹೇಮಪುರ

ಶ್ರೀಕ್ಷೇತ್ರ ಬಂಗಾರಮಕ್ಕಿಯಿಂದ ಹೊರಬರುವ ಧಾರ್ಮಿಕ, ಪಾರಮಾರ್ಥಿಕ, ನೈತಿಕ ಹಾಗೂ ಲೋಕ ಹಿತಚಿಂತನೆಗಳ ಮಾಸಪತ್ರಿಕೆ

# HEMAPURA

**Shri Kshethra Bangaramakki**
**Post Gerasoppa - 581 384**
**Honnavara Taluk, Uttara Kannada Dist.**



ಗೌರವ ಸಂಪಾದಕರು:
**ಪ.ಪೂ. ಶ್ರೀ ಮಾರುತಿ ಗುರೂಜಿಯವರು**
ಧರ್ಮಾಧಿಕಾರಿಗಳು
ಶ್ರೀಕ್ಷೇತ್ರ ಬಂಗಾರಮಕ್ಕಿ

ಸಂಪಾದಕರು:
**ತೇಜಸ್ವಿ**

ಸಲಹೆಗಾರರು:
**ಶ್ರೀ ರಾಮಚಂದ್ರ ಭಟ್ಟರು, ಶ್ರೀಕ್ಷೇತ್ರ ಬಂಗಾರಮಕ್ಕಿ**
**ಶ್ರೀ ರವೀಶ, ವಕೀಲರು, ಸಾಗರ**
**ಶ್ರೀ ನಾಗರಾಜ್ ನಾಯಕ್, ವಕೀಲರು, ಕಾರವಾರ**
**ಶ್ರೀ ನಾಗರಾಜ್ ಶೇಟ್, ಶಿರಸಿ**
**ಶ್ರೀ ಭೋಗಾನಂದ, ಶಿವಮೊಗ್ಗ**
**ಶ್ರೀ ಪ್ರವೀಣ್, ಬೆಂಗಳೂರು**
**ಶ್ರೀ ಜಿ.ಎಚ್. ನಾಯ್ಕ್, ಹೊನ್ನಾವರ**
**ಶ್ರೀ ಕೆ. ಮನೋಹರ್, ಬೆಂಗಳೂರು**
**ಶ್ರೀ ಡಿ.ಎಂ. ಸತೀಶ್, ತುಮಕೂರು**

ವಿನ್ಯಾಸ, ಅಕ್ಷರ ಜೋಡಣೆ ಮತ್ತು ಸಲಹೆಗಾರರು:
**ಶ್ರೀ ವೀರಾಂಜನೇಯ ಪ್ರಕಾಶನ**
ಶ್ರೀಕ್ಷೇತ್ರ ಬಂಗಾರಮಕ್ಕಿ, ಪೋ: ಗೇರಸೊಪ್ಪಾ-581 384.
ತಾ: ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ.
ದೂ: 08387-268544, 268333, 268545

ಮುದ್ರಕರು:
**ಸಾಯಿನಾಥ ಗ್ರಾಫಿಕ್ಸ್, ಬೆಂಗಳೂರು**


## ಒಳಪುಟಗಳಲ್ಲಿ


ಸಚ್ಚಿಂತನ ........ 2
ಸಂಪಾದಕೀಯ ........ 3
ಯಶಸ್ವೀ ಬದುಕಿನ ಮಾರ್ಗ ಮಿಂಚು ........ 4
ಶ್ರೀಧರ ಸ್ಮರಣೆ ........ 5
ಶ್ರೀರಾಮ ಕಥಾಸಾರ ........ 5
ಸಂಪ್ರದಾಯ ........ 7
ಪರಮೇಶ್ವರನ ಇಪ್ಪತ್ತೈದು ಲೀಲೆಗಳು ........ 8
ಮಹಾಕ್ಷತ್ರಿಯ ........ 11
ಬದುಕಲೊಂದಿಷ್ಟು ಆಪ್ತಮಾತುಗಳು ........ 13
ಕಗ್ಗದ ಬೆಳಕಿನಲ್ಲಿ ........ 14
ವಚನಭಾಗವತ ........ 16
ಧರೆಗಿಳಿದ ದಿವ್ಯತೇಜ ........ 17
ಆನೋ ಭದ್ರಾಃ ಕೃತವೋಯಂತು ವಿಶ್ವತಃ ........ 19
ಔಷಧೀಯ ಸಸ್ಯ ಸಂಪತ್ತು ........ 20
ಸ್ವಾತಂತ್ರ್ಯದಿನಾಚರಣೆ ವರದಿ ........ 21
ಯಕ್ಷಪೂರ್ಣಿಮೆ 2019 ಆಮಂತ್ರಣ ........ 22
ಸುಂದರಕಾಂಡದ ಸೌಂದರ್ಯ ........ 20
ಕವನ – 'ಶ್ರೀ ಬಂಗಾರಮಕ್ಕಿ ಕ್ಷೇತ್ರ ಮಹಾತ್ಮೆ' ........ 23
ಕವನ – 'ಶರಣೆನ್ನುವೆ' ........ 24
ಪದಬಂಧ-48 ........ 24


### ಹೇಮಪುರ ಘನ ಗಂಭೀರ

ಘನವಂತ ಬಲವಂತ ಇಷ್ಟಾರ್ಥ ದಾತ
ಭಕ್ತವತ್ಸಲನೆಂಬ ಬಿರುದು ಹೊತ್ತಾತ
ವೀರಾಂಜನೇಯನಿವ ತನ್ನ ಸೇವಿಸುವ
ಭಕ್ತರನು ಉದ್ಧರಿಸಿ ಗುರಿಯ ಮುಟ್ಟಿಸುವ.

ದರ್ಶನದ ಲಾಭವಿದೆ ತಾಪಕಿದೆ ಪರಿಹಾರ
ಹರ್ಷವೇ ಮೈವೆತ್ತಿ ನರ್ತಿಸುವುದಿಲ್ಲಿ
ಆಕರ್ಷಣೀಯವಹ ಲೋಕಹಿತ ಕಾರ್ಯಗಳ
ವರ್ಷದುದ್ದಕು ನಡೆಸುತಿಹನು ಮಾರುತಿಯು

**ಪ್ರಕಟಣೆ: ಪತ್ರಿಕೆಯು ಪ್ರಕಟವಾದ ಒಂದು ವಾರದಲ್ಲಿ ನಮ್ಮ ಅಂತರ್ಜಾಲದಲ್ಲೂ ಲಭ್ಯ www.bangaramakki.org**



ಭಾರತದ ಪ್ರಮುಖ ಬಂದರು – ಮುಂಬಯಿ & ಕಲ್ಕತ್ತಾ

# ಜೀವನ್ಮುಕ್ತರ ಮುಕ್ತಿಯ ಪಥ



ಈ ಪ್ರಪಂಚದಲ್ಲಿ ಎಲ್ಲ ಮತಗಳೂ ಉನ್ನತ ಆಧ್ಯಾತ್ಮಿಕ ಅನುಭವಗಳ ಸಾಧ್ಯತೆಯನ್ನು ಗುರುತಿಸುತ್ತವೆ. ಆದರೆ ದೇವತಾಶಾಸ್ತ್ರಜ್ಞರು ಅದರ ಪ್ರಾಮುಖ್ಯತೆಯನ್ನು ಕಡೆಗಣಿಸುತ್ತಾರೆ. ಕ್ರೈಸ್ತಮತದ ಪ್ರಕಾರ ಪೂರ್ಣಭಗವದೈಕ್ಯ ಸಾವಿನ ನಂತರ ಮಾತ್ರ ಸಾಧ್ಯ. ಇಸ್ಲಾಂ ಮತದ ದೃಷ್ಟಿಯೂ ಹೆಚ್ಚು ಕಡಿಮೆ ಇದೇ ಆಗಿದೆ. ಆದರೂ ಈ ಮತಗಳಿಗೆ ಸೇರಿದ ಅನೇಕ ಅನುಭಾವಿಗಳು ಜೀವಿಸಿರುವಾಗಲೇ ಭಗವದೈಕ್ಯದ ಮಹೋನ್ನತ ಅನುಭವಗಳನ್ನು ಪಡೆದಿರುವರು. ಆದರೆ ಹಿಂದೂ ಧರ್ಮದಲ್ಲಿ ಜೀವನ್ಮುಕ್ತನ ಸ್ಥಿತಿಯನ್ನು ವರ್ಣಿಸುತ್ತಾ 'ಜೀವನ್ಮುಕ್ತಿ'ಯೇ ಅತ್ಯುನ್ನತ ಆದರ್ಶವೆಂದು ಹೇಳಿದೆ.

ಸತ್ಯಾನುಭವದಲ್ಲಿ ನೆಲೆಸುವವನೇ ಜೀವನ್ಮುಕ್ತ. ಅವನ ಆನಂದ ಅಗಣಿತವಾದುದು. ಅವನಿಗೆ ಈ ತೋರಿಕೆಯ ಜಗತ್ತು ಇದ್ದೂ ಇಲ್ಲದಂತೆ. ಅವನ ಮನಸ್ಸು ಬ್ರಹ್ಮನಿಂದ ತುಂಬಿಹೋಗಿದ್ದರೂ ಅವನು ಪೂರ್ಣ ಎಚ್ಚರದಿಂದಿರುತ್ತಾನೆ. ಜಾಗ್ರತ ಜೀವನದಿಂದ ಅಜ್ಞಾನದಿಂದ ಮುಕ್ತನಾಗಿರುತ್ತಾನೆ. ಅತ್ಯಾಶೆಯಿಂದ ಮುಕ್ತನಾಗಿ ಪೂರ್ಣಪ್ರಜ್ಞೆಯುಳ್ಳವನಾಗುತ್ತಾನೆ. ಅವನ ಪಾಲಿಗೆ ಜಗತ್ತಿನ ದುಃಖವೆಂಬುದಿಲ್ಲ. ಮನುಷ್ಯದೇಹ ಪಡೆದಿದ್ದರೂ ಅನಂತದೊಡನೆ ಒಂದಾಗಿರುತ್ತಾನೆ. ಅಂಥ ವ್ಯಕ್ತಿ ಈ ಜೀವನದಲ್ಲೇ ಮುಕ್ತ. ಒಳಿತು ಕೆಡುಕು ಇರುವಂತೆ ಕಾಣುತ್ತವೆ, ವ್ಯಕ್ತಿ ಮತ್ತು ವಸ್ತುಗಳು ಬೇರೆ ಬೇರೆಯಾಗಿ ತೋರುತ್ತವೆ. ಆದರೂ ಅವನಿಗೆ ಗೊತ್ತು ಮಾನವಕೋಟಿಗೂ ಪರಮಸತ್ಯಕ್ಕೂ ಯಾವ ವ್ಯತ್ಯಾಸವೂ ಇಲ್ಲ, ಏಕೆಂದರೆ ಬ್ರಹ್ಮನಲ್ಲಿ ಎಲ್ಲರೂ ಒಂದೇ-ಅವನು ಯಾವ ವ್ಯತ್ಯಾಸವನ್ನೂ ಕಾಣುವುದಿಲ್ಲ. ಇದರ ಮೂಲಕ ಜೀವನ್ಮುಕ್ತನನ್ನು ಗುರುತಿಸುತ್ತೇವೆ. ಜನ ಅವನನ್ನು ಗೌರವಿಸಬಹುದು, ನಿಂದಿಸಬಹುದು-ಅವನು ಮಾತ್ರ ಶಾಂತನಾಗಿರುತ್ತಾನೆ. ಸಮುದ್ರಕ್ಕೆ ಎಷ್ಟು ನದಿಗಳು ಪ್ರವೇಶಿಸಿದರೂ ಸಮುದ್ರವು ಶಾಂತವಾಗಿಯೇ ಇರುವಂತೆ, ಅವನ ಮನಸ್ಸನ್ನು ಇಂದ್ರಿಯ ವಸ್ತುಗಳು ಪ್ರವೇಶಿಸಿದರೂ ಅಲ್ಲಿ ಯಾವ ಪ್ರತಿಕ್ರಿಯೆಗಳೂ ಉಂಟಾಗುವುದಿಲ್ಲ. ಏಕೆಂದರೆ ಅವನು ಅಖಂಡ ಸತ್ಯದ ಪ್ರಜ್ಞೆಯಲ್ಲಿ ನೆಲೆಸಿರುವನು. ಇಂಥ ವ್ಯಕ್ತಿಯೇ 'ಜೀವನ್ಮುಕ್ತ'.

ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ನೆಲೆನಿಂತವನು ಮಾನವ ಜೀವನದಲ್ಲಿ ಅನಿವಾರ್ಯವಾದ ನೈತಿಕ ಸಂಘರ್ಷಗಳಿಂದ ಪಾರಾಗುತ್ತಾನೆ. ಆಧ್ಯಾತ್ಮಿಕ ಸಾಧನೆಗಳ ಮೂಲಕ ಕೆಟ್ಟ ಆಲೋಚನೆಗಳಿಂದ, ಆಸೆಗಳಿಂದ ಮುಕ್ತನಾಗುತ್ತಾನೆ. ಪರಮಜ್ಞಾನಪ್ರಾಪ್ತಿಗೆ ಮುಂಚೆ ಉಳಿದಿದ್ದ ಉತ್ತಮ ಆಸೆಗಳು ಮಾತ್ರ ಅವನಲ್ಲಿ ಉಳಿದಿರುತ್ತವೆ. ಅಥವಾ ಎಲ್ಲ ಪ್ರಾಪಂಚಿಕ ಒಳಿತು ಕೆಡುಕುಗಳ ಭಾವನೆಗಳಿಗೆ ಉದಾಸೀನನಾಗಿ ಪ್ರಜ್ಞಾತೀತ ಅವಸ್ಥೆಯಲ್ಲಿ ಅವನು ಉಳಿಯಬಹುದು. ಇಂಥವರಲ್ಲಿ ಕೆಲವರು ಭಗವದಿಚ್ಛೆಯಿಂದ ದಯಾಪೂರ್ಣರಾಗಿ ಪ್ರಾಕೃತಿಕ ಸ್ಥಿತಿಗೆ ಹಿಂತಿರುಗಿ ಮಾನವಕೋಟಿಗೆ ಗುರುವಾಗಿ ಪರಿಣಮಿಸಬಹುದು.

ಅವರು ನಿರಂತರವಾಗಿ ಪರಮ ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಪ್ರತಿಷ್ಠಿತರಾಗಿರುತ್ತಾರೆ. ಎಣ್ಣೆ ಮುಗಿದ ದೀಪದಂತೆ ಶಾಂತರಾಗಿರುತ್ತಾರೆ. ಯಾವ ಸ್ವಾರ್ಥ ಉದ್ದೇಶವೂ ಇಲ್ಲದ ಪ್ರೀತಿಯ ಸಾಗರ ಅವರು. ನಮ್ರತೆಯಿಂದ ತಮ್ಮ ಜವಾಬ್ದಾರಿಯನ್ನು ಅವರ ಮೇಲೆ ವಹಿಸುವ ಉತ್ತಮರಿಗೆ ಅವರು ಬಂಧುಗಳು. ವಸಂತಾಗಮನದಂತೆ ಜನತೆಗೆ ಒಳಿತನ್ನು ತರುತ್ತಾರೆ. ತಾವೇ ಈ ಭಯಾನಕ ಸಂಸಾರ ಸಾಗರವನ್ನು ದಾಟಿದವರಾಗಿ ಇತರರಿಗೂ ಈ ಭವಸಾಗರವನ್ನು ದಾಟಲು ಸಹಾಯ ಮಾಡುತ್ತಾರೆ. ತಾವಾಗಿಯೇ ಇತರರ ದುಃಖವನ್ನು ನಿವಾರಿಸುವುದು ಅವರ ಸ್ವಭಾವ. ಸೂರ್ಯನ ತಾಪದಿಂದ ಸುಟ್ಟುಹೋಗುತ್ತಿರುವ ಭೂಮಿಯನ್ನು ಚಂದ್ರನು ತಂಪನ್ನೆರೆದು ತಣಿಸುವಂತೆ ಇಂಥ ಶ್ರೇಷ್ಠ ವ್ಯಕ್ತಿಗಳು ನೊಂದ ಜನರಿಗೆ ಸಹಾಯ ಮಾಡುತ್ತಿರುತ್ತಾರೆ. 'ಪದ್ಮಪತ್ರಮಿವಾಂಚಕ' ಎಂಬಂತೆ ಜೀವನ್ಮುಕ್ತ ವ್ಯಕ್ತಿಗಳು ಈ ಸಂಸಾರ ಸಾಗರದಲ್ಲಿ ಏನನ್ನೂ ಅಂಟಿಸಿಕೊಳ್ಳದೇ, ಕಮಲಪತ್ರವು ನೀರಿನಲ್ಲಿಯೇ ಇದ್ದು ಹೇಗೆ ನೀರನ್ನು ಅಂಟಿಸಿಕೊಳ್ಳುವುದಿಲ್ಲವೋ ಹಾಗೆ 'ಜೀವನ್ಮುಕ್ತ'ರಾಗಿ ಇತರರನ್ನು ತನ್ನ ಮಾರ್ಗದೆಡೆಗೆ ಆಕರ್ಷಿಸುತ್ತಿರುತ್ತಾರೆ. ಹಾಗೆಯೇ ನಾವೆಲ್ಲರೂ ಅಂಥಹ ಜೀವನ್ಮುಕ್ತರ ಮಾರ್ಗದಲ್ಲಿ ನಡೆದು ಜೀವನ್ಮುಕ್ತಿಯ ಆನಂದವನ್ನು ಅನುಭವಿಸೋಣ.

**ಶ್ರೀ ರಾಮಸ್ಮರಣಂ**

**ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು**

**ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಬಂಗಾರಮಕ್ಕಿ.**



ಇಂಡೋನೇಷ್ಯಾದ ಪ್ರಮುಖ ಬಂದರು – ಜಕಾರ್ತ

# ಮಾನವತಾ ಧರ್ಮಕ್ಕೊಂದು ಕಿವಿಮಾತು

ಅಹಿಂಸಾ ಸತ್ಯಮಸ್ತೇಯಂ ಶೌಚಮಿಂದ್ರಿಯ ನಿಗ್ರಹಃ
ಏತಂ ಸಮಾಸಿಕಂ ಧರ್ಮಂ ಚಾತುರ್ವರ್ಣ್ಯೇಽಬ್ರವೀನ್ಮನುಃ

ಮನುಸ್ಮೃತಿ

ಅಹಿಂಸೆ ಸತ್ಯ ಅಸ್ತೇಯ (ಅನ್ಯರಾಸ್ತಿಗೆ ನಿಷೇಧ) ಶುಚಿತ್ವ ಮತ್ತು ಇಂದ್ರಿಯ ನಿಗ್ರಹ ಇವು ಸರ್ವರ ಮೂಲಭೂತ ಧರ್ಮ. ಮನುವಿನ ವಾಣಿಯಿದು.

ಅಹಿಂಸೆ ಎಂದರೆ ಹಿಂಸೆ ಮಾಡದಿರುವುದು. ಅಹಿಂಸೆ ಎನ್ನುವ ಶಬ್ಧ ತನ್ನ ತನವನ್ನು ಕಳೆದುಕೊಳ್ಳುತ್ತಿದೆಯೆ? ಅಂದರೆ ಪರಸ್ಪರ ಸಣ್ಣ ಮಾತಿನಿಂದಾಗಿ ವೈರಿಗಳಾದವರು ಅನೇಕರು. ಆಸ್ತೇಯ ಆಸೆಗಾಗಿ ನಿಂದೆ ಮಾಡುತ್ತಾ ತದನಂತರ ಕೊಲೆಯಲ್ಲಿ ಪರ್ಯಾವಸಾನಗೊಂಡ ಸಂಗತಿಗಳು ಅನೇಕ. ಹೀಗೆ ಅನ್ಯರಿಗೆ ತೊಂದರೆ ಕೊಡದೆ ತಾನು ತನ್ನ ಕರ್ತವ್ಯದಲ್ಲಿ ಪಡೆದದ್ದಕ್ಕೆ ತೃಪ್ತಿಪಟ್ಟು ಹಿಂಸಾ ಮಾರ್ಗದಿಂದ ದೂರವಿದ್ದು ಅಹಿಂಸೆಯೇ ಪರಮ ಧರ್ಮ ಎನ್ನುವ ಜೀವಿತದ ಚಿಂತನೆ ಅದೊಂದು ತಪಸ್ಸು ತಾನೆ? ಅಂತಹ ಸರ್ವರ ಸುಖ ತನ್ನ ಸುಖ–ಅನ್ಯರ ದುಃಖದಲ್ಲಿ ನಾನು ಸಹ ಭಾಗಿ ಎನ್ನುವ ಅಹಿಂಸಾಧರ್ಮ ಜೀವನದ ಒಂದು ಅಂಗವಾದರೆ ಆಗ ತಾನೆ ಸಾಧ್ಯ, ಅಹಿಂಸಾ ಧರ್ಮದ ಕಲ್ಪನೆ. ಇನ್ನು ಸತ್ಯವನ್ನು ನುಡಿಯಲು ಮನ ಅಂಜುತ್ತದೆ. ಅಂದರೆ ಸತ್ಯ ನುಡಿಯುವುದರಿಂದ ನಮ್ಮ ಅಂತರಂಗ ಬಹಿರಂಗವಾಗುತ್ತದೆ. ಒಳ್ಳೆಯ ನಡೆ–ನುಡಿ ಬಹಿರಂಗಗೊಂಡರೆ ಅಲ್ಲಿ ಯಾವ ಲಜ್ಜೆಯೂ ಇಲ್ಲ.

ಸತ್ಯ ನುಡಿಯಲು ತೊಂದರೆಯೂ ಇಲ್ಲ. ಅಂದರೆ ನಮ್ಮಂತ ರಂಗದಲ್ಲಿ ಎಲ್ಲರಿಗೂ ಕೇಳಿಸುವಂತ ಕೃತಿ, ವಾಣಿ ಇದ್ದರೆ ಆಗ ಸತ್ಯವೇ ಅಚ್ಚು ಮೆಚ್ಚಾಗಿ ಜೀವನ ತೆರೆದ ಕನ್ನಡಿಯಾಗುತ್ತದೆ. ಅಂತಹ ನೇರ ನಡೆ, ನುಡಿ, ಕ್ರಿಯಾಚರಣೆ ನಮ್ಮದಾಗುವ ಮೂಲಕ ಸತ್ಯ ನಮ್ಮ ದೃಢಸಂಕಲ್ಪವಾಗುವುದು ಸಾಧ್ಯ. ಅಸ್ತೇಯ ಎಂದರೆ ಅನ್ಯರ ಸೊತ್ತನ್ನು ಕಂಡರೆ ಬಹಳ ಪ್ರೀತಿ. ಅಷ್ಟೇ ಅಲ್ಲ, ನಾನು ಯಾಕೆ ಅಂತಹ ಸಂಪತ್ತು ಗಳಿಸಬಾರದು. ಅಥವಾ ಅನ್ಯರಿಗೆ ತಿಳಿಯದೇ ಅಥವಾ ಮೋಸ ಮಾಡಿ ಯಾಕೆ ಅನ್ಯರ ಆಸ್ತಿ ನಮ್ಮ ಆಸ್ತಿ ಆಗಬಾರದು ಹೀಗೆ ಅಸ್ತೇಯ ಚಿಂತನೆ, ಅಂತಹ ಧರ್ಮಪಾಲನೆ, ಅಂತಹ ದೃಢಸಂಕಲ್ಪ ನಮ್ಮದಾಗಲು ಸಾಧ್ಯವೆ? ಶುಚಿತ್ವ ಎನ್ನುವ ಕಲ್ಪನೆ ವಿಶಾಲವಾದದ್ದು. ಗೀತೆಯಲ್ಲಿ ಶ್ರೀಕೃಷ್ಣನ ನುಡಿಯಂತೆ ಅಶುಚಿತ್ವ ಅಂತರಂಗಕ್ಕೂ ಬರದೆ, ನಿಷ್ಕಳಂಕವಾದ ಚಿಂತನೆ, ಶುದ್ಧ ಮನಸ್ಸು, ಶುದ್ಧ ಶರೀರ, ಶುದ್ಧ ವ್ಯವಹಾರ ಎಲ್ಲವೂ ಶುಚಿತ್ವದಿಂದ ಕೂಡಲು ಸಾಧ್ಯವೆ? ಇಂದ್ರಿಯ ನಿಗ್ರಹ ಅತ್ಯಂತ ಮಹತ್ವದ್ದು. ಪಂಚೇಂದ್ರಿಯಗಳ ನಿಗ್ರಹ ಸುಲಭಸಾಧ್ಯವಲ್ಲ. ಇಂದ್ರಿಯ ನಿಗ್ರಹಣದಿಂದ ಪ್ರಪಂಚ ಗೆಲ್ಲಬಹುದು ಎನ್ನುವ ಚಿಂತನೆ ಬಹು ಮುಖ್ಯವಾದದ್ದು. ಅಂದರೆ ಚಂಚಲತೆಯನ್ನು ಮೆಟ್ಟಿನಿಲ್ಲುವ ಸುದೃಢ ಮನಸ್ಸು ಒಳಿತು. ಕೆಟ್ಟದ್ದನ್ನು ವಿಮರ್ಶಾತ್ಮಕ ರೀತಿಯಲ್ಲಿ ಚಿಂತಿಸುತ್ತ ಕೆಟ್ಟದ್ದನ್ನು ನಿಗ್ರಹಿಸಿ, ಒಳಿತನ್ನು ಗ್ರಹಿಸುವ ಸತ್ ಸಂಕಲ್ಪವೇ ಇಂದ್ರಿಯಗಳ ನಿಗ್ರಹ. ಇಂತಹ ಕ್ರಿಯೆಗಳು ಮಾನವ ಜೀವಿತಕ್ಕೆ ಒರೆಗಲ್ಲು ಹಚ್ಚುವ ಸಂಗತಿಗಳು ತಾನೆ?

ಅಹಿಂಸೆಯಿಂದ ಸ್ವಾತಂತ್ರ್ಯ ಸಂಗ್ರಾಮದ ಚುಕ್ಕಾಣಿ ಹಿಡಿದ ಗಾಂಧೀಜಿ, ಅಹಿಂಸೆಯೇ ಪರಮ ಧರ್ಮ, ಆ ಮೂಲಕ ಗೆಲ್ಲುತ್ತೇವೆ ಎಂದು ಗೆದ್ದು ತೋರಿಸಿದರು. ಹರಿಶ್ಚಂದ್ರ ಸತ್ಯಕ್ಕೆ ಹೆಸರಾದರೆ, ಸುಳ್ಳು ನಮಗೆ ಬೇಡ, ಪ್ರಾಮಾಣಿಕವಾಗಿ ದುಡಿದು ನಮ್ಮ ಅನ್ನ ನಮಗೆ ಎನ್ನುವ ರಿಕ್ಷ ಚಾಲಕರಿದ್ದಾರೆ, ಐ.ಎ.ಎಸ್. ಅಧಿಕಾರಿಗಳಿದ್ದಾರೆ. ಎಲ್ಲ ಕ್ಷೇತ್ರಗಳಲ್ಲೂ ಅನೇಕರಿದ್ದಾರೆ. ಅನ್ಯರ ಆಸ್ತಿ ಕಬಳಿಸುವವರ ವಿರುದ್ಧ ಸದಾ ಸಮರ ಇದ್ದೇ ಇದೆ. ಇರುವ ಆಸ್ತಿಯನ್ನು ದೀನ ದಲಿತರಿಗಾಗಿ ಕೊಡುವ ದಾನಿಗಳ ಸಂಖ್ಯೆ ಮರೆಯುವಂತಿಲ್ಲ. ಅಂತರಂಗ–ಬಹಿರಂಗ ಶುಚಿತ್ವ ಸಾಧಿಸಿರುವ ಗೌರವಾನ್ವಿತರ ಸಾನಿಧ್ಯಕ್ಕೆ ತಲೆಬಾಗುವ ಸಮೂಹವೇ ಇದೆ. ಅದೇ ರೀತಿ ಶುಚಿತ್ವ ಕಾಪಿಟ್ಟುಕೊಳ್ಳದ ಅಜ್ಞಾನಿಗಳ ಸಮೂಹ ಕಡಿಮೆ ಏನಿಲ್ಲ. ಇಂದ್ರಿಯ ನಿಗ್ರಹ ಎನ್ನುವ ಮಹಾಮಾಯೆಗೆ ಒಳಪಡದೆ ಒದ್ದಾಡುವವರು ಇದ್ದಾರೆ. ಇಂದ್ರಿಯ ನಿಗ್ರಹದಿಂದ ಪವಾಡ ಸೃಷ್ಟಿಸಿದ, ಸೃಷ್ಟಿಸುತ್ತಿರುವ ಮಹಿಮಾನ್ವಿತರ ಗೌರವ ಅನ್ಯರಿಗೆ ಪ್ರೇರಣೆಯಾಗಿದೆ. ಇಂತಹ ಮೂಲಭೂತ ಚಿಂತನೆ ಮಾನವನಿಗೆ ಆಭರಣವಲ್ಲದೆ ಮತ್ತೇನು?

ಶ್ರಾವಣ ಕಳೆದು ಭಾದ್ರಪದದತ್ತ ತಿರುಗಿಹ ನಮ್ಮೆಡೆಗೆ ವಿಘ್ನನಿವಾರಕ ಗಣೇಶ ಬರುತ್ತಿದ್ದಾನೆ. ಕೇವಲ ಹಬ್ಬವಾಗದೆ ಅದು ಎಲ್ಲರ ಪಾಲಿಗೆ ಅನುಗ್ರಹ, ಚಿಂತನಯಜ್ಞ, ಸುಸಂಸ್ಕೃತ ಮನರಂಜನೆ, ಸರ್ವವಿಧ ಸಾಹಿತ್ಯ ಶ್ರವಣ, ಪರಸ್ಪರ ಪ್ರೀತಿ ವಿಶ್ವಾಸ, ಸಾಮೂಹಿಕ ಸಂಘಟನಾತ್ಮಕ ಚಿಂತನೆಗಳ ಮಹಾಪೂರವಾಗಿ ಸುಖ ಸಮೃದ್ಧಿಯ ಧನ್ಯತೆಯ ಭಾವ ಮೂಡಿ ಬರಲಿ.

ಇಂದ್ರಿಯ ನಿಗ್ರಹವದು ಮಾನವನ ಅಂತರಂಗ ಸತ್ಯ
ಅನ್ಯರ ಆಸ್ತಿಗಾಗಿ ಆಸೆಗೊಳ್ಳುವ ಮನ ಒಪ್ಪದಿರಲಿ ನಿತ್ಯ
ಜೀವನ ಸಾರ್ಥಕತೆಯದು ಹಿಂಸೆಯ ತೊರೆದು ಇರಲಿ ಶುಚಿತ್ವ
ಮಾನವತಾ ಧರ್ಮಕ್ಕೊಂದು ಕಿವಿಮಾತು ಸರ್ವಸಮ್ಮಿಲನ ಸರಳ ತತ್ವ

**ಸಂಪಾದಕೀಯ**



ಕೆನಡಾದ ಪ್ರಮುಖ ಬಂದರು – ವ್ಯಾಂಕೊವರ್

ಯಶಸ್ವೀ ಬದುಕಿನ ಮಾರ್ಗ ಮಿಂಚು

ಲೇ ॥ ಶ್ರೀ ವನರಾಗ ಶರ್ಮ

# ಚಿಂತೆ-ಚಿಂತನೆ

ಚಿಂತೆಯೆಂದರೆ : ದುಗುಡ ; ದುಮ್ಮಾನ. ಅನಾರೋಗ್ಯವೋ ಭಯವೋ ಇನ್ನಾವುದೋ ಕಾರಣಕ್ಕೆ ಅದನ್ನೇ ನೆನೆಯುತ್ತ ದುಃಖಿಸುತ್ತಿರುವದು ಚಿಂತೆ. ಚಿಂತೆಯೆಂದರೆ ಯಾವುದೇ ಒಂದು ವಿಷಯದ ಮೇಲೆ ವಿಚಾರ ವಿಮರ್ಶೆ ನಡೆಸುವುದು, ಸಮಸ್ಯೆಯ ಮೇಲೆ ಬೆಳಕು ಚೆಲ್ಲುವುದು. ಮಂಥನದ ಮೂಲಕ ಹೊಸತರ ಅನ್ವೇಷಣೆ ಚಿಂತನೆಯ ಗುರಿ.

ಚಿಂತೆ ನಿಷೇಧಾತ್ಮಕ ಆಲೋಚನೆಯ ಕೂಸು. ಚಿಂತನೆ ಸಕಾರಾತ್ಮಕ ಆಲೋಚನೆಯ ಬೆಳಸು. ಅಂದರೆ ಚಿಂತೆ ಮತ್ತು ಚಿಂತನೆ ಎರಡೂ ವಿರುದ್ಧ ದಿಕ್ಕಿನಲ್ಲಿ ಸಾಗುವ ಮನೋಜನ್ಯ ರೇಖೆಗಳು. ನಿಷೇಧಾತ್ಮಕ ಆಲೋಚನೆ ಬದುಕಿನ ಶತ್ರು ; ಸಕಾರಾತ್ಮಕ ಯೋಚನೆ ಬಾಳಿನ ಮಿತ್ರ.

ಚಿಂತೆ; ಮುಪ್ಪು, ಸಾವು; ಅದು ವಿಷ. ಚಿಂತನೆಯಿಂದ ಯೌವನ, ಉತ್ಸಾಹಪೂರ್ಣ ಜೀವನ,; ಅದು ಅಮೃತ. ಚಿಂತನೆಯಲ್ಲಿ ಸದ್ಭಾವನೆಗಳು ಸಾಯುತ್ತವೆ. ವಿಷಾಂಕುರಗಳು ಮೊಳೆಯುತ್ತವೆ. ಆಲೋಚನೆಗಳು ಆಘಾತಕಾರಿಯಾಗುತ್ತವೆ. ಅದು ದುರಂತದತ್ತ ನಮ್ಮನ್ನು ಕೊಂಡೊಯ್ಯುತ್ತದೆ. ಚಿಂತನೆಯಲ್ಲಿ ಭಾವನೆಗಳು  ಅರುಳುತ್ತವೆ. ಬುದ್ಧಿ ವಿಕಾಸ ಹೊಂದುತ್ತದೆ. ಅಲ್ಲಿ ಆತ್ಮೋನ್ನತಿ ಸಿದ್ಧಿಸುತ್ತದೆ.

ಚಿಂತೆ ಕಡ್ಡಿಯಂತಹ ಸಮಸ್ಯೆಯನ್ನು ಗುಡ್ಡ ಮಾಡುತ್ತದೆ. ಚಿಂತನೆ ಗುಡ್ಡದಂತಹ ಸಮಸ್ಯೆಯನ್ನು ಹೂವಿನಷ್ಟು ಹಗುರಾಗಿಸುತ್ತದೆ. ಚಿಂತೆ ಸುಖ ಶಾಂತಿಯ ಬಾಗಿಲನ್ನು ಮುಚ್ಚುತ್ತದೆ. ಅಶಾಂತಿಯ, ದುಃಖದ ಮಡುವಿಗೆ ತಳ್ಳುತ್ತದೆ. ಚಿಂತೆಗೂ ಚಿತೆಗೂ ಬಿಂದು ಮಾತ್ರ ವ್ಯತ್ಯಾಸ, ಚಿತೆ ನಿರ್ಜೀವಿಯನ್ನು ದಹಿಸುತ್ತದೆ; ಚಿತೆ ಸಜೀವಿಯನ್ನೇ ದಹಿಸುತ್ತದೆ ಎಂದು ಸುಭಾಷಿತ ಸಾರುತ್ತದೆ, (ಚಿತಾ ದಹತಿ ನಿರ್ಜೀವಂ ಚಿಂತಾ ತು ಸಜೀವಿನಮ್) ಚಿಂತನೆ ಸುಖ ಶಾಂತಿಯ ಬಾಗಿಲನ್ನು ತೆರೆಯುತ್ತದೆ; ಬೆಳಕಿನ ಹೆದ್ದೆರೆಯಲ್ಲಿ ತೇಲಿಸುತ್ತದೆ. ಜೀವನ ಗಿಡಕ್ಕೆ ನೀರೆರೆಯುತ್ತದೆ ಅದು ಸಮೃದ್ಧವಾಗುವಂತೆ ನವ ಚೈತನ್ಯವನ್ನು ನೀಡುತ್ತದೆ. ನಿರ್ಜೀವಿಯನ್ನೂ ಸಜೀವಿಯನ್ನಾಗಿಸುತ್ತದೆ.

ಚಿಂತೆಯಲ್ಲಿ ಬುದ್ಧಿ ಹಿಂದಕ್ಕೆ ಸರಿಯುತ್ತದೆ; ಮನಸ್ಸನ್ನು ಚಂಚಲತೆ ಆಳುತ್ತದೆ. ಜೀವನ ನರಳುತ್ತದೆ. ದುರ್ಭಾವನೆಯ ಸರ್ಪ ಘೂತ್ಕರಿಸುತ್ತದೆ. ಚಿಂತನೆಯಲ್ಲಿ ಬುದ್ಧಿ ಕೌಶಲ್ಯವನ್ನು ಮೆರೆಯುತ್ತದೆ. ವಿವೇಕ ನಿರ್ಣಯ ಹೇಳುತ್ತದೆ. ಪ್ರಜ್ಞೆಯ ಜಾಗೃತಿಯುಂಟಾಗುತ್ತದೆ. ಸುಖದ ಅರುಣೋದಯವಾಗುತ್ತದೆ.

ಚಿಂತೆಯಿಂದ ಯಾವುದೇ ಸಮಸ್ಯೆ ಪರಿಹಾರವಾಗುವುದಿಲ್ಲ. ಬದಲಿಗೆ ಅದು ಇನ್ನುಷ್ಟು ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಅದು ಮುಳ್ಳಿನ ಪುದೆಯಿದ್ದಂತೆ. ದಾರಿಯಲ್ಲಿ ಹೆಬ್ಬಂಡೆ ಅಡ್ಡಲಾದಂತೆ. ಚಿಂತನೆ ಅದನ್ನು ಕಿತ್ತೆಸೆದು ಗುರಿ ತಲುಪಲಿಕ್ಕೆ ಕಂಡು ಹಿಡಿಯುತ್ತದೆ. ಆದ್ದರಿಂದ ಯಾವುದಕ್ಕೇ ಆಗಲಿ ಚಿಂತಿಸುತ್ತ ಕೂರುವುದರಲ್ಲಿ ಅರ್ಥವಿಲ್ಲ. ಸಮಸ್ಯೆಯ ಬಗ್ಗೆ ಚಿಂತನ-ಮಂಥನ ನಡೆಸಬೇಕು. ಅಮೃತವನ್ನು ಪಡೆಯಬೇಕು.

ಅದಾಗ್ಯೂ ಚಿಂತೆ ನಮ್ಮ ಮೇಲೆ ಎರಗಿಯೇ ಎರಗುತ್ತದೆ. ಕೊಳೆಯನ್ನು ಹೊರತೆಗೆಯುವ ಔಷಧದಂತೆ ಅದೂ ಬೇಕು.- ಎಂದು ಡಿ.ವಿ.ಜಿ.ಯವರು ತಮ್ಮ ಕಗ್ಗದಲ್ಲಿ ಸುಂದರವಾಗಿ ಹೇಳಿದ್ದಾರೆ.

ಚಿಂತೆ ಸಚಿತಾಪಗಳು ಮನಸ್ಸಿಗೆ ವಿರೇಚಕವೋ ।
ಸಂತಸೋತ್ಸಾಹಗಳೆ ಪಥ್ಯದುಪಚಾರ ॥
ಇಂತುಮಂತುಂ ನಡೆಯುತಿರುವುದಾತ್ಮ ಚಿಕಿತ್ಸೆ।
ಎಚಿತಾದೊಡಂತೆ ಸರಿ-ಮಂಕುತಿಮ್ಮ ॥

ಆತ್ಮ ಚಿಕಿತ್ಸೆಗೆ ಚಿಂತೆಯೂ ಚಿಂತನೆಯೂ ಎರಡೂ ಅಗತ್ಯ . ರಾಕೆಟ್ಟು ಮೇಲೇರುವಾಗ ಬೂಸ್ಟರುಗಳನ್ನು ಕಳಚಿಕೊಳ್ಳುತ್ತ ಹೋಗುವಂತೆ ಇವೆಲ್ಲವನ್ನೂ ಕಳಚಿಕೊಂಡಾಗ ಅಲ್ಲಿ ಚಿಂತೆಯೂ ಇಲ್ಲ: ಚಿಂತನೆಯೂ ಇಲ್ಲ ಎಲ್ಲ ಬಟಾ ಬಯಲು-ನಿರ್ವಾತ, ಶೂನ್ಯ.

**ಹೇಮಪುರ ಪತ್ರಿಕೆಯ ಚಂದಾವಿವರ**

* ಬಿಡಿ ಪತ್ರಿಕೆ - ರೂ.20/- * ವಾರ್ಷಿಕ ಚಂದಾ - ರೂ.200/- * ಪಂಚವಾರ್ಷಿಕ ಚಂದಾ - ರೂ.1000/-
* ಆಜೀವ ಸದಸ್ಯತ್ವ - ರೂ.5000/-

**ವಿವರಗಳಿಗೆ ಸಂಪರ್ಕಿಸಿ :** ಫೋನ್ ನಂ: 08387-268333, 268545, 268544. ಮೊಬೈಲ್ ನಂಬರ್ : 9449109299

**ಈಗಾಗಲೇ ತಮ್ಮ ಚಂದಾ ಅವಧಿ ಮುಗಿದಿದಲ್ಲಿ ನವೀಕರಿಸಿಕೊಳ್ಳಬೇಕಾಗಿ ವಿನಂತಿ**



ಪಾಕಿಸ್ತಾನದ ಪ್ರಮುಖ ಬಂದರು – ಕರಾಚಿ

ಶ್ರೀಧರ ಸ್ಮರಣೆ

ಲೇ॥ ಶ್ರೀ ಜಿ. ಟಿ ಶ್ರೀಧರಶರ್ಮ

# ಸಾಕ್ಷಾತ್ ಭಗವಂತನೇ ಅವರಾಗಿದ್ದರು

ಶ್ರೀಧರಸ್ವಾಮಿಗಳ ಕುರಿತಾಗಿ ಬಂದಿರುವ ಚರಿತ್ರೆಗಳನ್ನೆಲ್ಲ ಓದುತ್ತಾ, ಮನೆಗೆ ಬಂದು ಕೇಳಿದರೆ ಹೇಳುತ್ತಲೇ ಇರುವ ಸಾಧಕರೊಬ್ಬರಿದ್ದಾರೆ. ಅವರೇ ಸಾಗರ ತಾಲೂಕಿನ ಸಾಲೇಕೊಪ್ಪದ ರಾಮಭಟ್ಟರು. ಈ ಎರಡೂ ಘಟನೆಗಳು ಶ್ರೀಧರರು ಸಜ್ಜನಗಡದಲ್ಲಿದ್ದಾಗ ನಡೆದಂಥವು.

ಒಂದು ದಿನ ಕಾಶೀಬಾಯಿ ಎಂಬ ಪುಟ್ಟ ಹುಡುಗಿಯು ಮರದ ಮೇಲಿರುವ ಸಂಪಿಗೆ ಹೂವುಗಳನ್ನು ತನಗೆ ಕೊಯ್ದುಕೊಡಲು ಶ್ರೀಧರಸ್ವಾಮಿಗಳನ್ನು ಪ್ರಾರ್ಥಿಸಿದಳು. ಆ ಕೂಡಲೇ ಶ್ರೀಧರರು ಸಂಪಿಗೆಮರವನ್ನು ಹತ್ತಿದರು. ಕಾಶೀಬಾಯಿಗೆ ಬೇಕಾಗಿದ್ದ ಹೂವುಗಳನ್ನು ಸಂಗ್ರಹಿಸಿ ಕೆಳಗಿಳಿಯುತ್ತಿದ್ದರು. ನಾಗಸರ್ಪವೊಂದು ಬುಸುಗುಡುತ್ತ ಶ್ರೀಧರರತ್ತಲೇ ಹರಿದು ಬಂದು ಮುಂದೆ ಹೋಯಿತು. ಅದು ಶ್ರೀಧರರ ಕಾಲುಗಳ ಮೇಲೆಯೇ ಹರಿದುಹೋದುದನ್ನು ಕಂಡು ಕಾಶೀಬಾಯಿ ಜೋರಾಗಿ ಚೀರಿದರೆ ಶ್ರೀಧರರು ಮಾತ್ರ ಏನೂ ಆಗದವರಂತೆ ಧೈರ್ಯವಾಗಿ ಇದ್ದಂತೆಯೇ ಇದ್ದರು !.

ಸಜ್ಜನಗಡದ ಮೇಲಿನ ದೇವೀ ಮಂದಿರದಲ್ಲಿ ಒಮ್ಮೆ ಸರ್ಪವೊಂದು ಅಂಗಾಯಿದೇವಿಯ ಪ್ರಭಾವಳಿಯ ಹಿಂಬದಿಯಲ್ಲಿತ್ತು. ಅದು ಮೂರು ದಿನಗಳವರೆಗೂ ಅಲ್ಲಿಯೇ ಇತ್ತು. ಇದರಿಂದ ಭಯಭೀತರಾದ ಯಾರೂ ಪೂಜೆಗೆ ಹೋಗಲು ಒಪ್ಪಲಿಲ್ಲ. ಮಂತ್ರಿ ಪಾರುಪತ್ತೇಗಾರರು ಈ ವಿಷಯವನ್ನು ಶ್ರೀಧರರ ಗಮನಕ್ಕೆ ತಂದರು. ನಿತ್ಯಪೂಜೆಯು ನಿಲ್ಲಬಾರದೆಂದು ಭಾವಿಸಿದ ಶ್ರೀಧರರು ತಾವೇ ಶ್ರದ್ಧಾಭಕ್ತಿಯಿಂದ ಆ ಮೂರೂ ದಿನಗಳೂ ದೇವಿಯ ಪೂಜೆ ಮಾಡಿಯೇ ಬಂದರು. ಪೂಜೆ ನಡೆಯುತ್ತಿರುವಾಗ ಆ ಸರ್ಪ ಮಾತ್ರ ತನ್ನ ಮೈಮುದುಡಿಕೊಂಡು ಸುಮ್ಮನೆ ಮಲಗಿರುತ್ತಿತ್ತು. ಶ್ರೀಧರರ ಪೂಜೆಗೆ ಭಂಗ ತರದ ಆ ಸರ್ಪ ಪೂಜೆಗೂ ಸಾಕ್ಷಿಯಾಯಿತೇನೋ!

ಈ ಘಟನೆಗಳನ್ನು ಮತ್ತೆ ಮತ್ತೆ ಸ್ಮರಿಸುವ ರಾಮಭಟ್ಟರು “ಶ್ರೀಧರಸ್ವಾಮಿಗಳಿಗೆ ಸರ್ಪಗಳೂ ತೊಂದರೆ ಕೊಡಲಿಲ್ಲ. ಸಾಕ್ಷಾತ್ ಭಗವಂತನೇ ಅವರಾಗಿದ್ದರು.” ಎನ್ನುತ್ತಾರೆ.

ಶ್ರೀರಾಮ ಕಥಾಸಾರ...

ಲೇ: ಬಸ್ತಿ ಸದಾನಂದ ಪೈ

# ಅಶೋಕ ವನದಲ್ಲಿ ಸೀತೆ

ಕೊಳೆಯಾದ ಬಟ್ಟೆಯನ್ನುಟ್ಟ ರಾಕ್ಷಸಿಯರಿಂದ ಸುತ್ತುವರಿಯಲ್ಪಟ್ಟ ಅಡಿಗಡಿಗೂ ನಿಟ್ಟುಸಿರು ಬಿಡುತ್ತಾ ಒಂಟಿ ವಸ್ತ್ರವನ್ನುಟ್ಟ, ಅಲಂಕಾರ ರಹಿತಳಾದ ತಪಸ್ವಿನಿಯಂತಿದ್ದ ಸೀತೆಯನ್ನು ಹನುಮಂತನು ಅಶೋಕವನದಲ್ಲಿ ಕಾಣುತ್ತಾನೆ. ಆಕೆಯ ಮೈಮೇಲಿರಬೇಕಾದ ಆಭರಣಗಳೆಲ್ಲವೂ ಮರದ ಕೊಂಬೆಯಲ್ಲಿ ನೇತಾಡುತ್ತಿದ್ದವು. ಬಹಳ ಕಾಲದಿಂದ ಧರಿಸದ ಕಾರಣ ಅವುಗಳೆಲ್ಲ ಕಪ್ಪಾಗಿದ್ದವು. ರಾಕ್ಷಸನು ಹೊತ್ತುಕೊಂಡು ಹೋಗುತ್ತಿದ್ದಾಗ ಕೆಳಗೆ ಬೀಳಿಸಿದ ಆಭರಣಗಳು ಅದರಲ್ಲಿ ಇದ್ದಿಲ್ಲ. ಆಗ ಕೆಳಗೆ ಬೀಳಿಸಿದ್ದ ಬಟ್ಟೆಯು ಕೂಡಾ ಇದೇ ಪ್ರಭೆಯುಳ್ಳದ್ದು. ಕೃಶಾಂಗಿಯಾದರೂ ಪ್ರಭೆಯಿಂದ ಕೂಡಿದವಳಾಗಿರುವುದರಿಂದ ಆಕೆಯೇ ಸೀತೆ ಎಂದು ಕಷ್ಟದಿಂದ ಗುರುತು ಹಿಡಿಯುತ್ತಾನೆ.

ಈಗ ಸೀತೆಯಿಂದಾಗಿ ವಾಲಿಯು ಮರಣ ಹೊಂದಿದನು. ರಾವಣನಿಗೆ ಸಮಾನನಾದ ಶೌರ್ಯವುಳ್ಳ ಕಬಂಧನೂ ಹತನನಾದನು. ಭಯಂಕರ ಪ್ರತಾಪಿಯಾಗಿದ್ದ ರಾಕ್ಷಸನಾದ ವಿರೂಢನೂ ಯುಧ್ಧದಲ್ಲಿ ಮಡಿದನು. ಭಯಂಕರ ಕೃತ್ಯಗಳನ್ನೆಸಗುತ್ತಿದ್ದ ಹದಿನಾಲ್ಕು ಸಾವಿರ ರಾಕ್ಷಸರು ಜನಸ್ಥಾನದಲ್ಲಿ ಅಗ್ನಿಜ್ವಾಲೆಗೆ ಸಮಾನವಾದ ರಾಮನ ಬಾಣಗಳಿಂದ ಹತರಾದರು. ರಾಮನಿಂದ ಖರ ದೂಷಣ ತ್ರಿಶೂರರೂ ಹತರಾದರು. ಈಕೆಯ ನಿಮಿತ್ತದಿಂದ ಮಹದೈಶ್ವರ್ಯವುಳ್ಳ ರಾಜ್ಯವನ್ನು ಸುಗ್ರೀವನು ಸಲುವಾಗಿ ನಾನು ನದಿ ನದಿಗಳನ್ನು ದಾಟಿ ವಿಶಾಲವಾದ ಸಮುದ್ರವನ್ನು ಹಾರಿ ಇಲ್ಲಿಗೆ ಬಂದೆನು. ಹೀಗಿರುವಾಗ ಸೀತೆಗಾಗಿ ಇಡೀ ಭೂಮಂಡಲವನ್ನೇ ರಾಮನು ತಲೆ ಕೆಳಗು ಮಾಡಿದರು ಆಶ್ಚರ್ಯವಿಲ್ಲ. ಮೂರು ಲೋಕಗಳ ಒಡೆತನವು ಸೀತೆಯ ಹದಿನಾರನೆಯ ಒಂದು ಭಾಗಕ್ಕೂ ನಿಲುಕದಷ್ಟು ಹೆಚ್ಚು. ದಶರಥನ ಹಿರಿಯ ಸೊಸೆ, ಧರ್ಮಜ್ಞನೂ, ಆತ್ಮಜ್ಞಾನಿಯೂ ಆದ ರಾಮನ ಪ್ರೇಮ ಪತ್ನಿ. ಈಗ ರಾಕ್ಷಸಿಯರಿಂದ ಸುತ್ತುವರಿಯಲ್ಪಟ್ಟು ಸಕಲ ಭೋಗಭಾಗ್ಯಗಳಿಂದ ವಂಚಿತಳಾಗಿದ್ದಾಳೆ. ಪತಿಯ ಮೇಲಿನ ಪ್ರೇಮದಿಂದಾಗಿ ಎಲ್ಲಾ ದುಃಖಗಳನ್ನೂ ಲೆಕ್ಕಿಸದೇ ಅರಣ್ಯಕ್ಕೆ ಬಂದಳು. ಸುಖಾರ್ಹಳಾಗಿರಬೇಕಾಗಿದ್ದ ಈಕೆಯ ಸಂಕಟವನ್ನು ನೋಡಲಾಗುವುದಿಲ್ಲ ಎಂದು ಪರಿತಪಿಸುತ್ತಾನೆ. ಕತ್ತಲ ರಾತ್ರಿಯಲ್ಲಿ ಪೂರ್ಣಚಂದಿರನು ಸೀತೆಯ ಗುರುತು ಹಿಡಿಯಲು ಬೆಳದಿಂಗಳನ್ನು ಪಸರಿಸುತ್ತಾನೆ.

ಸೀತೆಯನ್ನು ಸುತ್ತುವರಿದ ಭಯಂಕರ ರಾಕ್ಷಸಿಯರು ವಿಕಾರ ರೂಪಿಗಳು, ಮದ್ಯವನ್ನು ಸೇವಿಸುತ್ತಾ ರಕ್ತ ಮಾಂಸಗಳನ್ನು ಭುಜಿಸುವವರಾಗಿದ್ದರು. ಕೆಲವರು ಒಂಟಿಕಣ್ಣಿನವರು ಅಗಲವಾದ ಕಿವಿಗಳುಳ್ಳವರು, ಉದ್ದವಾದ ಹೊಟ್ಟೆ, ಸ್ತನಗಳುಳ್ಳವರು, ಕೋಪಿಷ್ಠರು, ಹಂದಿ, ಜಿಂಕೆ, ಹುಲಿ, ಎಮ್ಮೆ, ಆಡು, ನರಿಗಳಂತೆ ಮುಖವುಳ್ಳವರು. ಆನೆಯಂತೆ, ಒಂಟೆಯಂತೆ, ಕುದುರೆಯಂತೆ ಕಾಲುಗಳುಳ್ಳವರು, ಕೆಲವರಿಗೆ ಒಂದೇ ಕೈ, ಕೆಲವರಿಗೆ ಒಂದೇ ಕಾಲು, ಕೆಲವರಿಗೆ ಮೂಗೇ ಇಲ್ಲ. ಕೆಲವರಿಗೆ ಬಹಳ ದೊಡ್ಡ ಮೂಗು, ಹಣೆಯಲ್ಲಿ



ಇಂಗ್ಲೆಂಡ್‌ನ ಪ್ರಮುಖ ಬಂದರು – ಲಂಡನ್

ಉಸಿರಾಡುವ ಮೂಗು, ಕೆಂಪು ಮಿಶ್ರಿತ ಕೂದಲಿನಿಂದ ಕೂಡಿ, ಶೂಲ, ಮುದ್ಗರಗಳನ್ನು ಕೈಯಲ್ಲಿ ಹಿಡಿದು ಅಶೋಕ ವೃಕ್ಷವನ್ನು ಸುತ್ತುವರಿದು ಕುಳಿತಿರುವುದನ್ನು ಕಾಣುತ್ತಾನೆ.

ಹೆಣ್ಣು ಜಿಂಕೆಯಂತೆ ಹೆದರಿ ಸುತ್ತಲೂ ನೋಡುತ್ತಾ ತನ್ನ ಬಿಸಿಯುಸಿರಿನಿಂದ ಚಿಗುರಿದ ಮರಗಳನ್ನು ಸುಟ್ಟುಬಿಡುವವಳಂತೆ ದುಃಖಿಸುತ್ತಾ ಇರುವ ಮೈಥಿಲಿಯನ್ನು ಕಂಡು, ಆನಂದ ಬಾಷ್ಪವನ್ನು ಸುರಿಸುತ್ತಾ ರಾಮನನ್ನು ನೆನಿಸಿಕೊಡು ಕೈ ಮುಗಿಯುತ್ತಾನೆ. ಸೀತೆಯನ್ನು ಕಂಡು ಹಿಡಿದ ಕಾರ್ಯಸಾಧನೆಯಾದ ಬಗ್ಗೆ ಸಂತೋಷಪಡುತ್ತಾನೆ.

ನಸುಕು ಹರಿಯುತ್ತಿದಂತೆ ವೇದಗಳನ್ನು, ಷಡಂಗಗಳನ್ನು ಬಲ್ಲವರಾದ ಬ್ರಹ್ಮರಾಕ್ಷಸರಿಂದ ವೇದ ಘೋಷಗಳು ಕೇಳಿಬಂದವು. ಅದನ್ನು ಕೇಳಿದ ರಾಕ್ಷಸ ರಾಜನಾದ ರಾವಣನು ಎಚ್ಚೆತ್ತನು. ಮದವೇರಿದ ರಾಕ್ಷಸನು ಕಾಮಭಾವವನ್ನು ಅಡಗಿಸಿಕೊಳ್ಳಲಾಗದೇ ಅಶೋಕವನಕ್ಕೆ ಬಂದನು. ಕೆಲವರು ಚಾಮರಗಳನ್ನು ಬೀಸಿದರು. ಕೆಲವರು ಬೀಸಣಿಗೆ ಹಿಡಿದರು. ಕೆಲವರು ಸುವರ್ಣ ಕುಂಭಗಳಲ್ಲಿ ತೀರ್ಥವನ್ನು ಹಿಡಿದು ಹಿಂದೆಯೇ ಬಂದರು. ರಾವಣನ ಉತ್ತಮಾಂಗನೆಯರು ವೀರನಾದ ತಮ್ಮ ಪತಿಯನ್ನನುಸರಿಸಿ ಬಂದರು. ಮಹಾದ್ವಾರ ಪ್ರದೇಶಕ್ಕೆ ಬಂದುದನ್ನು ಮರದಲ್ಲಿ ಮರೆಯಾಗಿದ್ದ ಹನುಮಂತನು ನೋಡುತ್ತಾನೆ. ಉತ್ತಮ ಭವನದಲ್ಲಿ ಮಲಗಿದ್ದವನು ಈತನೇ, ಇವನೇ ರಾವಣನಿರಬೇಕೆಂದು ಸ್ವಲ್ಪ ಕೆಳಕ್ಕೆ ಇಳಿದು ಮರೆಯಲ್ಲಿ ಕುಳಿತುಕೊಳ್ಳುತ್ತಾನೆ.

ಸೀತೆಯನ್ನು ಕಂಡು ರಾವಣನು ತನ್ನ ಮನೋಭಿಲಾಷೆಯನ್ನು ಅರುಹುತ್ತಾನೆ. ಎಲೈ ಪ್ರಿಯಳೇ ನಾನು ನಿನ್ನನ್ನು ಬಯಸುತ್ತಿದ್ದೇನೆ. ನನ್ನನ್ನು ಗೌರವಿಸು. ಇಲ್ಲಿ ಮನುಷ್ಯರಾಗಲೀ, ರಾಕ್ಷಸರಾಗಲೀ ಯಾರೂ ಇಲ್ಲ. ನನ್ನಿಂದ ಭಯಪಡಬೇಡ. ರಾಕ್ಷಸರು ಪರಸ್ತ್ರೀಯರನ್ನು ಅಪಹರಿಸುವುದು, ಪರಸ್ತ್ರೀಗಮನವೂ ಸಹಜ ಪ್ರವೃತ್ತಿಯಾಗಿದೆ. ಆದರೂ ನೀನಾಗಿ ಕಾಮಿಸದ ಹೊರತು ನಿನ್ನನ್ನು ಮುಟ್ಟುವುದಿಲ್ಲ. ಯಥಾರ್ಥವಾಗಿ ನನ್ನನ್ನು ಪ್ರೀತಿಸು ಎನ್ನುತ್ತಾನೆ.

ನನ್ನ ಕಣ್ಣುಗಳು ನಿನ್ನಲ್ಲೇ ನೆಟ್ಟಿರುವವು. ನಾನು ಅಪಹರಿಸಿ ತಂದಿರುವ ಎಲ್ಲಾ ಸ್ತ್ರೀಯರಿಗೂ ನೀನು ಅರಸಿಯಾಗು. ರಾಜ್ಯವೂ ನಿನ್ನದೇ. ಇಡೀ ಭೂಮಂಡಲವನ್ನು ಗೆದ್ದು ನಿನಗಾಗಿ ನಿನ್ನ ತಂದೆಗೆ ಕೊಡುವೆನು. ದೇವಾಸುರರು ಸಹಿತ ನನ್ನಲ್ಲಿ ಯುದ್ಧಮಾಡಿ ಅನೇಕ ಬಾರಿ ಸೋತುಹೋಗಿದ್ದಾರೆ. ನೀನು ಚೆನ್ನಾಗಿ ಅಲಂಕರಿಸಿಕೊಂಡು ನನ್ನನ್ನು ನಂಬಿ ಪ್ರೀತಿಸು. ರಾಮನಿಗೆ ನಿನ್ನನ್ನು ನೋಡಲು ಕೂಡಾ ಆಗದು. ನನ್ನ ಕೈಯಿಂದ  ಬಿಡಿಸಿಕೊಂಡು ರಾಮನು ಇನ್ನು ನಿನ್ನನ್ನು ಪಡೆಯಲಾರನು ಎಂದು ನಾನಾವಿಧವಾಗಿ ಬೋಧಿಸುತ್ತಾನೆ. ಕೆಲವು ಬಾರಿ ಹೊಗಳುತ್ತಾನೆ. ಹಾಗೆಯೇ ತನ್ನ ಪರಾಕ್ರಮವನ್ನು ಹೇಳಿಕೊಂಡು ಭೀತಿಯನ್ನು ಹುಟ್ಟಿಸುತ್ತಾನೆ. ಜೊತೆಗೆ ಧನ  ಕನಕ ರಾಜ್ಯಗಳ ಆಮಿಷವನ್ನು ತೋರಿಸಿ ತನ್ನ ವಶಳಾಗಬೇಕೆಂದು ಕೇಳಿಕೊಳ್ಳುತ್ತಾನೆ.

ರಾವಣನ ಮಾತುಗಳನ್ನು ಕೇಳಿ ಸೀತೆಯು ಅಳುತ್ತಾ ರಾಮನನ್ನು ಧ್ಯಾನಿಸುತ್ತಾ ಒಂದು ಹುಲ್ಲು ಕಡ್ಡಿಯನ್ನು ನಡುವೆ ಇಟ್ಟು ಪ್ರತ್ಯುತ್ತರ ನೀಡುತ್ತಾಳೆ. ನನ್ನ ಮೋಹವನ್ನು ಬಿಡು. ಒಳ್ಳೆಯ ವಂಶದಲ್ಲಿ ಹುಟ್ಟಿ ಪುಣ್ಯಕರವಾದ ವಂಶಕ್ಕೆ ಸೇರಿ ಒಬ್ಬನೇ ಪತಿಯುಳ್ಳ ನಾನು ನಿಂದಿತವಾದ ಕೆಟ್ಟ ಕೆಲಸಗಳನ್ನು ಮಾಡುವುದಿಲ್ಲ. ಇನ್ನೊಬ್ಬನ ಭಾರ್ಯೆಯಾದ ನಾನು ನಿನ್ನ ಭಾರ್ಯೆಯಾಗುವುದಿಲ್ಲ. ನಿನ್ನ ಭಾರ್ಯೆಯರನ್ನು ರಕ್ಷಿಸುವಂತೆ ಇತರರ ಭಾರ್ಯೆಯರನ್ನು ನೀನು ರಕ್ಷಿಸಬೇಕು. ರತ್ನ ರಾಶಿಗಳಿಂದ ಸಮೃದ್ಧವಾಗಿರುವ ಈ ಲಂಕೆಯು ನಿನ್ನೊಬ್ಬನ ಅಪರಾಧದಿಂದ ತೊಡೆದುಹೋಗುವುದು ಎನ್ನುತ್ತಾಳೆ. ರಾವಣಾ, ನೀನು ಈ ಹುಲ್ಲು ಕಡ್ಡಿಗೆ ಸಮಾನ ಎಂಬುದನ್ನು ಹುಲ್ಲು ಕಡ್ಡಿಯನ್ನು ಮುಂದಿಟ್ಟು ಕೊಟ್ಟ ಉತ್ತರದಿಂದ ಅವಳು ಸೂಚ್ಯವಾಗಿ ಹೇಳುತ್ತಾಳೆ.

ನಿನಗೆ ಬದುಕಿರಲು ಇಷ್ಟವಿದ್ದರೆ ರಾಮನೊಡನೆ ಸಖ್ಯ ಮಾಡಕೊಂಡು ನನ್ನನ್ನು ಅವನಿಗೆ ಒಪ್ಪಿಸು. ಅವನು ಶರಣಾಗತ ವತ್ಸಲ. ಅದನ್ನು ನೀನು ಬೇರೆ ತೆರನಾಗಿ ವರ್ತಿಸಿದರೆ ಪ್ರಯೋಗಿಸಲ್ಪಡುವ ವಜ್ರಾಯುಧವು ನಿನ್ನನ್ನು ಬಿಟ್ಟರೂ ಬಿಡಬಹುದು. ಯಮನೂ ನಿನ್ನನ್ನು ಕೆಲಕಾಲ ಬಿಡಬಹುದು ಆದರೆ ರಾಮನು ಕೋಪಗೊಂಡರೆ ಕ್ಷಣಮಾತ್ರದಲ್ಲಿ ನಿನ್ನನ್ನು ಕೊಲ್ಲುವನು. ಶತ್ರು ಸಂಹಾರಕನಾದ ನನ್ನ ಪತಿಯು ಬೇಗನೆ ನನ್ನನ್ನು ಇಲ್ಲಿಂದ ಬಿಡಿಸಿಕೊಂಡು ಹೋಗುವನು. ನೀನು ಕೈಲಾಸಕ್ಕೆ ಓಡಿ ಹೋದರೂ ರಾಮ ಲಕ್ಷ್ಮಣರು ನಿನ್ನನ್ನು ಬಿಡುವುದಿಲ್ಲ ಎಂದು ಹಿತೋಪದೇಶ ಮಾಡುತ್ತಾಳೆ.

ಸೀತೆಯ ಬಿರುನುಡಿಗಳನ್ನು ಕೇಳಿ ರಾವಣನು ಸಿಟ್ಟಾಗುತ್ತಾನೆ. ಮನುಷ್ಯರಿಗೆ ಕಾಮವು ಕೆಟ್ಟದ್ದು. ನಿನ್ನಲ್ಲಿ ನನಗೆ ಎದ್ದಿರುವ ಕಾಮವು ನನ್ನ ಕೋಪವನ್ನು ತಡೆಯುತ್ತಿದೆ. ಆದ್ದರಿಂದ ನಿನ್ನನ್ನು ಕೊಲ್ಲದೇ ಬಿಟ್ಟಿರುವೆನು. ನಿನ್ನ ಪ್ರತಿಯೊಂದು ಮಾತೂ ನಿನ್ನನ್ನು ವಧಿಸಲರ್ಹವಾದುದು. ಆದರೂ ನಿನಗೆ ಕೊಟ್ಟಿರುವ ಕಾಲಾವಧಿ ಇನ್ನು ಎರಡು ತಿಂಗಳು ಬಾಕಿ ಇದೆ. ನಂತರವೂ ನನ್ನನ್ನು ಪತಿಯಾಗಿ ಸ್ವೀಕರಿಸಲು ನೀನು ಇಚ್ಚಿಸದಿದ್ದಲ್ಲಿ ನನ್ನ ಅಡುಗೆ ಮನೆಯಲ್ಲಿ ಬೆಳಗ್ಗಿನ ಉಪಹಾರಕ್ಕೆ ನಿನ್ನನ್ನು ಸಿದ್ಧಪಡಿಸುವಂತೆ ಹೇಳುತ್ತೇನೆ ಎನ್ನುತ್ತಾನೆ. ಅಲ್ಲಿದ್ದ ದೇವ ಗಂಧರ್ವ ಸ್ತ್ರೀಯರು ತುಟಿಗಳ ಚಲನೆಯಿಂದ ಸೀತೆಯನ್ನು ಸಮಾಧಾನಪಡಿಸುತ್ತಾರೆ.

ನಿನಗೆ ಒಳಿತನ್ನು ಕೋರಿ ನಿನ್ನ ಈ ಹೀನ ಕಾರ್ಯದಿಂದ ವಿಮುಖನನ್ನಾಗಿಸುವವರು ಇಲ್ಲಿ ಯಾರೂ ಇಲ್ಲವೆಂದು ತೋರುತ್ತದೆ. ಅಮಿತ ಪರಾಕ್ರಮಿಯಾದ ರಾಮನ ಮಡದಿಗೆ ಪಾಪಕರವಾದ ಮಾತನ್ನು ಹೇಳಿದ ನೀನು ಎಲ್ಲಿ ಹೋದರೂ ಅವನು ಬಿಡಲಾರ. ರಾವಣ ನೀನು ಬೂದಿಯಾಗಲು ಅರ್ಹನು. ಆದರೆ ರಾಮನ ಅಪ್ಪಣೆ ಇಲ್ಲದೇ ಮತ್ತು ನನ್ನ ತಪಸ್ಸಿನ ಪ್ರಭಾವವನ್ನು ಉಳಿಸಿಕೊಳ್ಳಲೋಸುಗ ನಿನ್ನನ್ನು ಭಸ್ಮಮಾಡಿಲ್ಲ ಎನ್ನುತ್ತಾಳೆ.

ಸೀತೆಯ ಮಾತನ್ನು ಕೇಳಿ ಮತ್ತಿಷ್ಟುಕೋಪಾವಿಷ್ಠನಾಗಿ ಅಲ್ಲಿದ್ದ ರಾಕ್ಷಸ ಸ್ತ್ರೀಯರಿಗೆ ಇವಳನ್ನು ಬೇಗನೆ ನನ್ನ ವಶಳಾಗುವಂತೆ ಮಾಡಿರಿ. ನಯ, ಭಯ ಸಾಮ ದಾನಗಳಿಂದ ಬೆದರಿಸಿ ಬೇಕಾದರೆ ದಂಡ ಪ್ರಯೋಗ ಮಾಡಿರಿ. ಹೇಗಾದರೂ ಇವಳನ್ನು ವಶಪಡಿಸಿಕೊಳ್ಳಿರಿ ಎಂದು ಆಜ್ಞಾಪಿಸುತ್ತಾನೆ.

ಧ್ಯಾನ ಮಾಲಿನಿ ಎಂಬ ರಕ್ಕಸಿಯೂ ಮುಂದೆ ಬಂದು ರಾವಣನನ್ನು ಆಲಂಗಿಸಿಕೊಂಡು ರಾಕ್ಷಸೇಶ್ವಾರಾ ನನ್ನೊಡನೆ ವಿಹರಿಸು. ಬ್ರಹ್ಮನು ನಿನ್ನ ಬಾಹುಬಲಗಳಿಂದ ಗಳಿಸಲ್ಪಟ್ಟ ದಿವ್ಯವಾದ ಉತ್ತಮ ಭೋಗವನ್ನು ಈಕೆಗೆ ವಿಧಿಸಿಲ್ಲ. ಇಚ್ಚೆಯಿಲ್ಲದವಳನ್ನು ಕಾಮಿಸುವುದರಿಂದ ದೇಹವು ಕಂದಿಹೋಗುತ್ತದೆ. ಎಂದು ರಾವಣನನ್ನು ಅತ್ತ ಕಡೆಗೆ ಎಳೆದುಕೊಂಡು ಹೋದಳು.

ರಾವಣನ ಬಂಧಿಯಾಗಿ ರಾಕ್ಷಸಿಯರಿಂದ ಸುತ್ತುವರಿದಿರುವ ಸೀತೆ ದುಃಖಿತಳಾಗಿದ್ದರೂ, ತನ್ನ ಪಾತಿವ್ರತ್ಯದ ದೆಸೆಯಿಂದ ರಾವಣನನ್ನು ಲೆಕ್ಕಿಸುವುದಿಲ್ಲ. ಕೆಟ್ಟ ನಡತೆಯಿಂದ ವಿಮುಖನಾಗುವಂತೆ ಹಿತವಚನ ಹೇಳುತ್ತಾಳೆ. ರಾಮನ ಶೌರ್ಯವನ್ನು ತಿಳಿಸುತ್ತಾಳೆ. ದೃಢಮನಸ್ಸಿನಿಂದ ರಾವಣನ ಎಲ್ಲಾ ಕೋರಿಕೆಗಳನ್ನು ತಿರಸ್ಕರಿಸುತ್ತಾಳೆ. ಇದು ಎಂತಹ ಕಷ್ಟ ಬಂದರೂ ಧರ್ಮವನ್ನು ತ್ಯಜಿಸಬಾರದು. ಸಾಂದರ್ಭಿಕ ನಿಲುವು ಹೊಂದಬಾರದು. ಬೆದರಿಕೆಗಳಿಗೆ ಮಣಿಯಬಾರದು. ಎಂಬುದನ್ನು ತಿಳಿಸುತ್ತದೆ. ಸ್ತ್ರೀಯರು ಚಂಚಲ ಮನಸ್ಸಿನಿಂದ ಆಮಿಷಗಳಿಗೆ ಬಲಿಯಾಗಕೂಡದು. ತನ್ನ ತನವನ್ನು ಕಾಪಾಡಿಕೊಳ್ಳಬೇಕು ಎನ್ನುವುದನ್ನು ಸಾರುತ್ತಾಳೆ. ಅಂತಹ ಭೀಕರ ಸನ್ನಿವೇಶದಲ್ಲಿಯೂ ರಾವಣನಿಗೆ ಹಿತವಚನ ಹೇಳಿರುವುದು ಅವಳ ಸುಸಂಸ್ಕೃತ ಮನಸ್ಸಿನ ಸಾಕ್ಷಿ. ಅಂತಹ ಭೀಕರ ಸನ್ನಿವೇಶದಲ್ಲಿಯೂ ರಾವಣನಿಗೆ ಹಿತವಚನ ಹೇಳಿರುವುದು ಅವಳ ಸುಸಂಸ್ಕೃತ ಮನಸ್ಸಿನ ಸಾಕ್ಷಿ. ಅಂತಹ ನಡುವಳಿಕೆಯಿಂದ ನಮ್ಮ ಮನೆ, ನಮ್ಮ ಸಂಸಾರಗಳು ಸುಖವಾಗಿರಬಲ್ಲವು. ಇಲ್ಲವಾದಲ್ಲಿ ಅಪಾರವಾದ ಕಷ್ಟ ನಷ್ಟಗಳಿಗೆ ಬಲಿಯಾಗಿ ಎಲ್ಲರಿಂದಲೂ ತಿರಸ್ಕಾರಕ್ಕೆ ಗುರಿಯಾಗಿ ನಿಂದೆಯನ್ನು ಕೇಳಬೇಕಾಗುತ್ತದೆಂಬುದು ಇದರ ಮುಖ್ಯ ಅಂಶ. ಇದನ್ನು ಎಲ್ಲಾ ಸ್ತ್ರೀಯರ ಮನಃಪೂರ್ವಕ ವಿವೇಚನೆಯಿಂದ ತಿಳಿಯಬೇಕು.

---

ಸಂಪ್ರದಾಯ

ಲೇ॥ ಜಿ.ವಿ. ಶರ್ಮಾಪಂಡಿತ್

# ಕುಳಿತುಕೊಂಡು ಕಾಲುಗಳನ್ನು ಅಲ್ಲಾಡಿಸಬಾರದೇ?

ಕುರ್ಚಿಯಲ್ಲಿ ಅಥವಾ ಕಟ್ಟೆಯ ಮೇಲೇ ಅಥವಾ ಮಂಚದ ಮೇಲೆ ಕೂಳಿತುಕೊಂಡು ಕಾಲುಗಳನ್ನು ಅಲ್ಲಾಡಿಸಬಾರದು. ಹೀಗೆ ಮಾಡಿದರೇ ತನ್ನ ಮನೆಗೂ ತನ್ನ ಬಂಧುಗಳ ಮನೆಗೂ ದೂರವಾಗುತ್ತಾರೆಂದೂ, ಮನೆಯ ಹಿರಿಯರಿಗೆ ಅಶುಭವಾಗುತ್ತದೆ ಎಂದೂ ಪ್ರಾಚೀನರ ನಂಬಿಕೆಯಾಗಿತ್ತು.

ಶುಭಗಳ ವಿಷಯ ಹೇಗೇ ಇರಲೀ, ಕಾಲುಗಳು ಅಲ್ಲಾಡಿಸುವುದು ಮಾತ್ರ ಅನಿಷ್ಟ ದುರಾಭ್ಯಾಸ. ಮಕ್ಕಳಿಗೆ ಇಂಥಾ ಅಭ್ಯಾಸಗಳಿದ್ದರೇ ಕೂಡಲೇ ಬಿಡಿಸಬೇಕು. ಕಾಲು ಅಲ್ಲಾಡಿಸುವ ಅಭ್ಯಾಸ ಹೆಣ್ಣುಮಕ್ಕಳಿಗೆ ಎಂದೂ ಇರಬಾರದು. ಬಲಕಾಲಿನ ಮೇಲೆ ಎಡಕಾಲನ್ನಿಟ್ಟು ಪಾದವನ್ನು ಅಲ್ಲಾಡಿಸುವ ಹೆಣ್ಣು ಗಂಡನನ್ನು ತೊಗಲಿನ ಗೊಂಬೆಯಂತೆ ಆಡಿಸುವ ಜಾಣೆಯಾಗಿರುತ್ತಾಳೆ. ಇದೇ ರೀತಿ ಎಡಗಾಲಿನ ಮೇಲೆ ಬಲಗಾಲನ್ನು ಹಾಕಿ ಅಲ್ಲಾಡಿಸುವ ಗಂಡಸರು ಸಮಯ ಸಾಧಕರಾಗಿರುತ್ತಾರೆ. ಯಾವುದಾದರೊಂದು ವ್ಯಸನಕ್ಕೆ ದಾಸರಾಗಿರುತ್ತಾರೆ.

ಇಂಥಾ ದುರಾಭ್ಯಾಸಗಳು ಇನ್ನೇನಿವೆ?

ಕೈ ಉಗುರುಗಳನ್ನು ಬಾಯಿಂದ ಕಡಿಯುವುದು, ಸದಾ ತಲೆಯ ಕೂದಲು ಅಥವಾ ಗಡ್ಡವನ್ನು ಸರಿಮಾಡಿಕೊಳ್ಳುವುದು, ತುಟಿಗಳನ್ನು ಹಲ್ಲುಗಳಿಂದ ಕಡಿಯುವುದು, ಮರ್ಮ ಸ್ಥಾನವನ್ನು ಕೈಯಿಂದ ಮುಟ್ಟುತ್ತಾ ಮಾತನಾಡುವುದು, ಹುಬ್ಬುಗಳನ್ನು ಏರಿಸುತ್ತಾ ಮಾತನಾಡುವುದು, ಕಣ್ಣು ಮೀಟುತ್ತಾ ಮಾತನಾಡುವುದು, ಮಾತು ಮಾತಿಗೂ ನಗುವುದು, ಮತ್ತು ಮುಖವನ್ನು ಗಂಟು ಹಾಕಿಕೊಂಡು ಮಾತನಾಡುವುದು, ಅಪರಿಶುಭ್ರವಾಗಿ ಇರುವುದು, ಕೇಶ ಸಂಸ್ಕಾರವಿಲ್ಲದೇ ಇರುವುದು, ಮುಂತಾದವುಗಳೆಲ್ಲವೂ ದರಿದ್ರಕ್ಕೆ ಕಾರಣಗಳೇ.

ಅತಿ ಕೆಟ್ಟ ಕೆಲಸವೆಂದರೇ ಸೂರ್ಯೋದಯದ ನಂತರ ಎಚ್ಚರಗೊಳ್ಳುವುದು.

ಹಕ್ಕಿಗಳು ಚಿಲಿಪಿಲಿ ಗಾನ ಮಾಡುವ ಸಮಯಕ್ಕೆ ನಿದ್ದೆಯಿಂದ ಎದ್ದು ದಿನನಿತ್ಯ ಕಾರ್ಯಗಳಿಗೆ ಮುಂದಾಗುವ ಜನರಿಗೆ ಬಿ.ಪಿ. ಷುಗರ್, ಗ್ಯಾಸ್ಟಬಲ್, ಮುಂತಾದ ದೀರ್ಘಕಾಲಿಕ ಸಮಸ್ಯೆಗಳು ಇರುವುದೇ ಇಲ್ಲ. ಪ್ರಪಂಚದಲ್ಲಿ ನಿಜವಾದ ಅದೃಷ್ಟವಂತರು ನಿಜವಾದ ಭಾಗ್ಯಶಾಲಿಗಳೆಂದರೇ ಆರೋಗ್ಯವಂತರೇ ಎಂಬುವುದು ಸತ್ಯದ ಮಾತು.

ಇತ್ತೀಚಿನ ದಿನಗಳಲ್ಲಿ ಟಿ.ವಿಯಲ್ಲಿ ಪ್ರಸಾರವಾಗುವ ಅಪಹಾಸ್ಯ ಅಶ್ಲೀಲ ದೃಶ್ಯಗಳನ್ನು ನೋಡುತ್ತಾ ಒಂದು ಕೈಯಲ್ಲಿ ಊಟದ ತಟ್ಟೆಯನ್ನು ಹಿಡಿದು ಅನ್ನವನ್ನು ಬಾಯಲ್ಲಿ ತುರುಕುವ ಕೆಟ್ಟ ಹವ್ಯಾಸ ಮನೆ ಮನೆಗೂ ಸಂಕ್ರಮಿಸಿದೆ. ಈ ರೀತಿ ಮಾಡುವ ಭೋಜನದಿಂದ ಎಸಿಡಿಟೀ ಬರುತ್ತದೆ. ಅಂಗಾಗಳು ಶಕ್ತಿ ಹೀನವಾಗುತ್ತದೆ. ಮಾನಸಿಕ ಶಕ್ತಿ ಕುಂದುತ್ತದೆ. ಲಾಲಾಜಲದ ಉತ್ಪನ್ನತೆ



ದಕ್ಷಿಣ ಆಫ್ರಿಕಾದ ಪ್ರಮುಖ ಬಂದರು – ಕೇಪ್‌ಟೌನ್

ಕಡಿಮೆಯಾಗಿ ಪಚನಶಕ್ತಿ ಕ್ಷೀಣವಾಗಿ ಬಿಡುತ್ತದೆ.

ಮನೆಯ ದ್ವಾರದ ಹೊಸ್ತಿಲಿನ ಮೇಲೆ ಕುಳಿತುಕೊಳ್ಳುವುದು. ರೂಮಿನ ಮಧ್ಯಭಾಗದಲ್ಲಿ ಮಲಗುವುದು. ಹಾಸಿಗೆ ಇಲ್ಲದೇ ನೆಲದ ಮೇಲೆ ಮಲಗಿ ನಿದ್ದೆ ಮಾಡುವುದು. ಉತ್ತರದಿಕ್ಕಿಗೆ ತಲೆಯನ್ನಿಟ್ಟು ಮಲಗುವುದು ಮಾಡಬಾರದು.

# ಪರಮೇಶ್ವರನ 25 ಲೀಲೆಗಳು

**ಸುಖಾವಹ ಮೂರ್ತಿಯ ಶಿವಾಧಿಕ್ಯ ಬೋಧನೆಯ ಲೀಲೆಯು**

ದಾರುಕಾವನದಲ್ಲಿ ಗೋದಾವರಿ ತೀರದಲ್ಲಿ ಆಶ್ರಮವನ್ನು ಕಟ್ಟಿಕೊಂಡು ಗೌತಮ ಮುನೀಶ್ವರನು ವಾಸಿಸುತ್ತಿದ್ದನು. ಆತನು ತ್ರಿಕಾಲ ಜ್ಞಾನಿಯಾಗಿದ್ದುದರಿಂದ, ಮುಂಬರುವ 5 ವರ್ಷಗಳ ನಂತರದ ಕಾಲದಲ್ಲಿ ಭಯಂಕರವಾದ ಬರಗಾಲವು ಬೀಳುವುದೆಂದು ಅರಿತನು.

ಅದಕ್ಕಾಗಿ ಪರಮೇಶ್ವರನನ್ನು ಕುರಿತು ಉಗ್ರ ತಪಸ್ಸನ್ನಾಚರಿಸಿದನು. ಅವನ ತಪಸ್ಸಿಗೆ ಪರಮೇಶ್ವರನು ಮೆಚ್ಚಿ ಪ್ರತ್ಯಕ್ಷನಾದನು ಮತ್ತು ನಿನ್ನ ವಾಂಛಿತವೇನೆಂದು ಕೇಳಿದನು. ಆಗ ಗೌತಮ ಋಷಿಯು–ದೇವ ದೇವಾ! ನಾನು ಯಾವ ಬೀಜವನ್ನು ಬಿತ್ತಿದರೂ ಆದ ಮಳೆ ಇಲ್ಲದೆ ಬೆಳೆದು ಫಲಿಸುವಂತೆ ಕರುಣಿಸಬೇಕೆಂದನು.

ಆಗ ಪರಮೇಶ್ವರನು–ಗೌತಮನೇ! ನೀನು ಯಾವ ಬೀಜವನ್ನು ಬಿತ್ತಿದರೂ ಮಳೆಯ ಅವಶ್ಯಕತೆ ಇಲ್ಲದೆ ಒಂದೇ ದಿನದಲ್ಲಿ ಮೊಳೆತು ಫಲ ಕೊಡುವುದು ಎಂದು ವರವನ್ನಿತ್ತು ಅಂತರ್ಧಾನನಾದನು, ಗೌತಮ ಮುನಿಯು ಪರಮೇಶ್ವರನ ವರದಂತೆ ಧಾನ್ಯಗಳನ್ನು ಬೆಳೆದು ಸುಖವಾಗಿರುವಷ್ಟರಲ್ಲಿ ಐದು ವರ್ಷಗಳುರುಳಿದವು. ಬರವು ತಲೆದೋರಿತು. ಮಳೆ ಇಲ್ಲದೆ ನದಿಗಳು ಕೆರೆಕಾಲುವೆಗಳು ಬತ್ತಿ ಹೋದವು. ಗಿಡಮರಗಳು ಒಣಗಿ ಫಲ ನೀಡದಂತಾದವು. ಕಾಡು ಬೇಗೆಯಿಂದ ಕಾಡಿನಲ್ಲಿಯ ಮೃಗ ಪಕ್ಷಿಗಳು ಬೆಂದು ಸತ್ತುಹೋದವು. ಧಾನ್ಯಗಳೇ ಬೆಳೆಯದ್ದರಿಂದ ಜನರಿಗೆ ಕಾಳು ಸಿಗದಂತಾಯಿತು. ಜನರಲ್ಲಿ ಹಾಹಾಕಾರವುಂಟಾಯಿತು. ಜೀವಿಗಳು(ಪಶುಗಳು) ಅರ್ಧಧನವೆಂದೂ ಧಾನ್ಯಗಳೇ ಪೂರ್ಣಧನವೆಂದೂ ಆಗಿನ ತಜ್ಞರು ಪರಿಗಣಿಸಿದ್ದರು. ಅದಕ್ಕಾಗಿ ಧನಿಕರೂ ಸಹ ಉಪವಾಸ ಬೀಳುವ ಪ್ರಸಂಗ ಬಂದಿತು. ಯಾರಾದರೂ ಧಾನ್ಯಗಳನ್ನು ಸಂಪಾದಿಸಿ ತಂದರೆ ಇತರರು ಕಾಟಕೊಟ್ಟು ಅವರನ್ನು ಉಣಗೊಡರು. ಧಾನ್ಯವನ್ನು ಕಂಡ ರಾಜರು ಅವನ್ನು ವಶಪಡಿಸಿಕೊಂಡು ತಮ್ಮ ಸೈನ್ಯಕ್ಕೆ ಒದಗಿಸುತ್ತಿದ್ದರು. ಇಂಥ ಬೆಳೆ ಇಲ್ಲದೆ ಕಾಲದಲ್ಲಿ ಇದ್ದವರೂ ಇಲ್ಲದವರೂ ಕೂಡಿಯೇ ಬಡವಾಗಹತ್ತಿದರು. ತೊಪ್ಪಲು ಗಡ್ಡೆ ಗೆಣಸುಗಳು ಸಹ ತಿನ್ನಲು ಸಿಗದಂತಾದವು. ನೀಚರು ಕೈಗೆ ಸಿಕ್ಕ ಜೀವಜಂತುಗಳನ್ನೇ ಕೊಂದು ತಿನ್ನಹತ್ತಿದರು. ಒಂದು ಗುಟುಕು ನೀರೂ ಸಹ ಸಿಗದಂತಾಯಿತು.

ದಾರುಕಾವನ ವಾಸಿಗಳಾದ ಬ್ರಾಹ್ಮಣ ತಪಸ್ವಿಗಳು ಎಲ್ಲರೂ ಒಂದೆಡೆ ಸೇರಿ ಆಲೋಚಿಸಿದರು. ಏನೆಂದರೆ ನಮ್ಮ ಋಷಿವರ್ಯದಲ್ಲಿಯೇ ಗೌತಮನು ಶ್ರೇಷ್ಠನು. ಆತನು ಉಗ್ರತಪಸ್ಸು ಮಾಡಿ ಪರಮೇಶ್ವರನನ್ನು ಮೆಚ್ಚಿಸಿ ಮಳೆಯ ಸಹಾಯವಿಲ್ಲದೆ ಧಾನ್ಯಗಳನ್ನು ಬೆಳೆಯುವಂತೆ ವರ ಪಡೆದಿದ್ದಾನೆ. ಆದ್ದರಿಂದ ನಾವೆಲ್ಲರೂ ಈಗ ಗೌತಮ ಮುನಿಯ ಆಶ್ರಮವನ್ನೇ ಪಡೆದು ಬದುಕಿಕೊಳ್ಳಬೇಕೆಂದು ನಿರ್ಣಯಿಸಿ ಅವರು ತಮ್ಮ ಹೆಂಡರು ಮಕ್ಕಳೊಡನೆ ಗೌತಮ ಮಹಾಮುನಿಯ ಆಶ್ರಮಕ್ಕೆ ಬಂದರು. ಬರುವನ್ನು ಸ್ವಪ್ನದಲ್ಲಿ ಕಾಣದ ಗೌತಮನು ಅವರೆಲ್ಲರನ್ನೂ ಸ್ವಾಗತಿಸಿ ಅವರಿಗೆ ಬೇರೆ ಬೇರೆ ಆಶ್ರಮಗಳನ್ನು ಕಲ್ಪಿಸಿಕೊಟ್ಟು ನಿತ್ಯ ಅವರಿಗೆ ತ್ರಿಕಾಲಗಳಲ್ಲಿ ಉತ್ತಮ ಅಡಿಗೆಯನ್ನು ಮಾಡಿ ಉಣಬಡಿಸಿ ಸಂತುಷ್ಟರಾಗಿರುವಂತೆ ಮಾಡಿದನು.

ಸಜ್ಜನರ ಸತ್ಕಾರವು ಕಬ್ಬನ್ನು ತುದಿಯಿಂದ ಆರಂಭಿಸಿ ಬುಡದವರೆಗೆ ತಿಂದಂತೆ, ಅಂದರೆ ರುಚಿಯು ಹೆಚ್ಚುತ್ತ ಹೋಗುವುದು. ದುರ್ಜನರ ಸತ್ಕಾರವು ಕಬ್ಬನ್ನು ಬುಡದಿಂದ ಆರಂಭಿಸಿ ತುದಿಯವರೆಗೆ ತಿಂದಂತೆ ಅಂದರೆ ಪ್ರಾರಂಭಕ್ಕೆ ರುಚಿ ಕೊಟ್ಟು ಬರಬರುತ್ತ ರುಚಿಗೆಟ್ಟು ಹೋಗುವುದು. ಹಾಗೆ ಸಜ್ಜನನಾದ ಗೌತಮ ಅವರನ್ನು ರುಚಿ ರುಚಿಯಾದ ಅನ್ನ ಪಾನಾದಿಗಳಿಂದ ಸತ್ಕರಿಸುತ್ತಿದ್ದನು. ದಿವ್ಯ ಫಲಗಳನ್ನೀಯುತ್ತಿದ್ದನು, ಪ್ರಿಯವಾದ ಮಾತುಗಳನ್ನೇ ಆಡುತ್ತಿದ್ದನು.

ಬರದ ಬಾಧೆಯು ಸತತ ಹನ್ನೆರಡು ವರ್ಷಗಳವರೆಗೆ ನಡೆಯಿತು. ಅದರಿಂದ ಸತ್ತವರೆಷ್ಟೋ ಜನ, ಅರೆ ಜೀವಿಗಳಾದವರೆಷ್ಟೋ ಜನ, ಬಡವಾಗಿ ಬದುಕಿಕೊಂಡವರೆಷ್ಟೋ ಜನ. ಹೀಗೆ ಲೋಕವು ಸಂತ್ರಸ್ತವಾಯಿತು. ಆದರೆ ಗೌತಮನ ಆಶ್ರಯಯವನ್ನು ಹೊಂದಿದವರೆಲ್ಲರೂ ಬರದ ಬಾಧೆಯಿಂದ ತಪ್ಪಿಸಿಕೊಂಡು ಅದರ ಕಲ್ಪನೆ ಕೂಡ ಇಲ್ಲದೆ ಸುಖವಾಗಿದ್ದರು.

ಹನ್ನೆರಡು ವರ್ಷಗಳಾದ ಮೇಲೆ ಕಾಲಕಾಲಕ್ಕೆ ಮಳೆ ಬೆಳೆಗಳು ಬಂದು ಜನರು ಸುಖವಾಗಿ ಜೀವಿಸಹತ್ತಿದರು. ಗೌತಮ ಮಹಾಮುನಿಯ ಆಶ್ರಯದಲ್ಲಿದ್ದ ಎಂಬತ್ತು ಸಾವಿರ ಬ್ರಾಹ್ಮಣರು ತಮ್ಮ ತಮ್ಮ ನಿವಾಸಗಳಿಗೆ ಹೋಗುವ ಆಲೋಚನೆಯನ್ನು ಮಾಡುತ್ತಿದ್ದರು. ತಾವು ಕೆಟ್ಟು ಬದುಕಬೇಕೆಂದು ಬಂದವರೆಲ್ಲ ಜನ್ಮ ಭೂಮಿಯನ್ನು ಬಿಟ್ಟು ಬದುಕುವವರಾರು?

"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎಂಬ ಉಕ್ತಿಯಂತೆ ನಮಗೆ ಜನ್ಮಕೊಟ್ಟ ತಾಯ್ನಾಡು ಸ್ವರ್ಗಕ್ಕಿಂತಲೂ

ಅಧಿಕವಾಗಿದ್ದು ಆದ್ದರಿಂದ ಅದನ್ನು ನಾವು ಬಿಟ್ಟಿರಲಾರೆವು ಹೋಗಲೇಬೇಕೆಂದರು. ಆದರೆ ನಮ್ಮನ್ನು ಹನ್ನೆರಡು ವರ್ಷ ರಕ್ಷಿಸಿದ ಗೌತಮ ಮಹಾಮುನಿಗೆ ತಿಳಿಸಿ ಅವನಿಂದ ಬೀಳ್ಕೊಂಡು ಹೋಗುವುದೇ ಶಿಷ್ಟಾಚಾರವೆಂದರು. ಅವರಲ್ಲಿ ಶಾಂಡಿಲ್ಯ ಋಷಿಯು ಎಲೈ ತಾಪಸರೇ ಗೌತಮನ ಮಹಿಮೆಯನ್ನು ಎಷ್ಟು ಹೊಗಳುವುದು?

ಪೂರ್ವದಲ್ಲಿ ಧರ್ಮಪಾಲಕ ನಗರದ ಸತ್ಯನಿಧಿಯೆಂಬ ರಾಜನ ಅನ್ನದಾನದ ಮಹಿಮೆಯ ಕಥೆಯನ್ನು ಹೇಳಿದನು.

ಅನ್ನದಾನದ ಫಲವನ್ನು ಕೇಳಿದ ಅನೇಕ ಹಾರುವರು ಭ್ರಷ್ಟರಾಗಿ ನಾವು ಯಾವಾಗಲೂ ಇಲ್ಲಿ ಇರಲಿಕ್ಕೆ ನಾವೇನು ಗೌತಮರ ಸೇವಕರೇ? ನಾವು ಹೋಗಬೇಕೆಂದರೆ ಅವನು ಸತ್ಕಾರದಿಂದ ನಮ್ಮನ್ನು ತಡೆಯುವನು. ಗೌತಮನ ಮೇಲೆ ಗೋವಧೆಯ ಪಾಪವನ್ನು ಹೊರಿಸಿ ಅವನನ್ನು ಪಾತಕಿಯೆಂದು ಹೊರಗಿಟ್ಟು ನಾವು ಹೊರಟು ಹೋಗುವುದೇಲೇಸೆಂದು ಆಲೋಚಿಸಿದರು.

ಕೃತ್ರಿಮ ಗೋವನ್ನು ನಿರ್ಮಿಸಲು ಗೌಪ್ಯವಾಗಿ ಒಂದು ಯಜ್ಞವನ್ನು ಮಾಡಿದರು. ಅಗ್ನಿ ಪುರುಷನು ಪ್ರತ್ಯಕ್ಷನಾಗಿ ನಿಮ್ಮ ವಾಂಛಿತವೇನೆಂದು ಕೇಳಿದನು.

ಆಗ ಅವರು: ಒಂದು ಗೋವನ್ನು ನಿರ್ಮಿಸಿಕೊಂಡು ಆ ಹಸುವು ಗೌತಮನ ಹೊಲದಲ್ಲಿ ಸಾಯುವಂತೆ ಮಾಡಬೇಕೆಂದರು. ಅವನ ಮೇಲೆ ಗೋವಧೆಯ ಪಾಪವನ್ನು ಹೊರಿಸಬೇಕೆಂದು ಮಾಡಿರುವವೆಂದರು. ಎಲೈ ಹಾರುವರೇ! ಗೌತಮನು ಸಜ್ಜನನು, ಪರೋಪಕಾರಿಯು, ಅವನಿಗೆ ನಾನು ಮಣಿಯುವುದಿಲ್ಲ. ಆದರೆ ನೀವು ಯಜ್ಞ ಮಾಡಿ ನನ್ನನ್ನು ಒಲಿಸಿದ್ದೀರಿ ಅದಕ್ಕಾಗಿ ತೃಣದಿಂದ ಒಂದು ಹಸುವನ್ನು ಮಾಡಿರಿ. ಅದರಲ್ಲಿ ನಾನು ಪ್ರವೇಶಿಸಿ ಜೀವ ತುಂಬುವೆನು. ಗೌತಮನು ಅದನ್ನು ಮುಟ್ಟಿದ ಕೂಡಲೇ ಹಸುವು ಸತ್ತು ಬೀಳುವಂತೆ ಮಾಡುವೆನು. ಆ ಪಾಪವು ನನ್ನದಲ್ಲ, ಅದು ನಿಮ್ಮದೇ ಆಗಿರುವುದು ಎಂದು ಅಗ್ನಿಪುರುಷನು ಮರೆಯಾದನು.

ಹಾರುವರು ಕೃತ್ರಿಮ ಹಸುವನ್ನು ಮಾಡಿ ಗೌತಮನ ಹೊಲದಲ್ಲಿ ಬಿಟ್ಟರು. ಆ ಬಡವಾದ ಗೋವು ಗೌತಮನ ಹೊಲದಲ್ಲಿ ಎರಡು ಕಾಲುಗಳನ್ನಿಟ್ಟು ನಿಂತಿದ್ದನ್ನು ಗೌತಮನು ನೋಡಿದನು. ಅದು ಕೃತ್ರಿಮ ಹಸುವೆಂದು ಅವನಿಗೆ ತಿಳಿಯದೆ ಕಪಟಿಗಳ ಮೋಸಕ್ಕೆ ಒಳಗಾದನು. ಒಂದು ದರ್ಬೆ ಹುಲ್ಲನ್ನು ತೆಗೆದುಕೊಂಡು ಹದಿನಾರು ಭಾಗವಾಗುವಂತೆ ಸೀಳಿ ಅದರ ಒಂದು ಭಾಗವನ್ನು ಮಾತ್ರ ತೆಗೆದುಕೊಂಡು ಬಡವಾದ ಗೋವು ಬರದ ಬವಣಿಗೆ ಸಿಕ್ಕಿದೆ. ತನ್ನ ಹೊಲದಲ್ಲಿ ಮೆಯ್ದು ದುಂಡಗಾಗಲೆಂಬ ಸದುದ್ದೇಶದಿಂದ ಆ ದರ್ಬೆಯ ಹದಿನಾರನೆಯ ಭಾಗದಿಂದ ಆ ಹಸುವನ್ನು ಮುಟ್ಟಲು ಅದು ಬಿದ್ದು ಸತ್ತುಹೋಯಿತು.

ಅದನ್ನು ನೋಡಿ ಗೌತಮನು ಶಿವ ಶಿವಾ! ಇದೇನಾಯಿತು ಎಂದು ಚಿಂತಿಸುವಷ್ಟರಲ್ಲಿ, ಹಾರುವರೆಲ್ಲರೂ–ಅಯ್ಯೋ ಗೌತಮನು ಗೋವನ್ನು ಕೊಂದನು, ಗೋಹತ್ಯಾ ಪಾತಕಿಯಲ್ಲಿ ನಾವಿರುವುದು ಹೇಗೆ ಸಾಧ್ಯ. ಆದ್ದರಿಂದ ಎಲ್ಲರೂ ನಮ್ಮ ನಮ್ಮ ಸ್ಥಳಗಳಿಗೆ ಹೊರಡೋಣವೆಂದು ಸಜ್ಜಾದರು.

ಅಷ್ಟರಲ್ಲಿ ಗೌತಮನು ಅಡ್ಡ ಬಂದು ಎಲೈ ಬ್ರಾಹ್ಮಣರೇ! ನಾನು ಸದುದ್ದೇಶದಿಂದ ಹಸುವು ಮೇಯಲೆಂದು ಮುಟ್ಟಿದರೆ ಅದು ಬಿದ್ದು ಸತ್ತಿತು. ಆದರೆ ಆ ಪಾಪವು ನನ್ನದೆ, ಅದಕ್ಕಾಗಿ ಪರಿಹಾರವನ್ನು ದಯವಿಟ್ಟು ಸೂಚಿಸಿರೆಂದನು.

ಆಗ ಆ ಹಾರುವರು–ಈ ಪಾಪವು ಸುಲಭವಾಗಿ ಹೋಗದು. ಪರಮೇಶ್ವರನ ಜಡೆಯಲ್ಲಿರುವ ಗಂಗೆಯನ್ನು ತಂದು ಆ ಸತ್ತ ಹಸುವಿನ ಮೇಲೆ ಹರಿಯಿಸಿದರೆ ಅದು ಸಜೀವವಾಗುವುದು. ಆಗ ನಿನ್ನ ಪಾಪ ಪರಿಹಾರವಾಗುವುದೆಂದರು. ಆ ಮೇಲೆ ಅವರೆಲ್ಲರೂ ತಮ್ಮ ತಮ್ಮ ಆಶ್ರಮಗಳಿಗೆ ತಿರುಗಿ ಹೋದರು.

ಗೌತಮನು ತ್ರಿಯಂಬಕ ಗಿರಿಯಲ್ಲಿ ಪಂಚಾಗ್ನಿ ಮಧ್ಯದಲ್ಲಿ ನಿಂತು ಶಿವನನ್ನು ಕುರಿತು ಉಗ್ರ ತಪಸ್ಸನ್ನು ಮಾಡಿದನು. ಅವನ ತಪಸ್ಸಿಗೆ ಮೆಚ್ಚಿ ಶಿವನು ಪ್ರತ್ಯಕ್ಷನಾದನು ಮತ್ತು ನಿನ್ನ ಇಚ್ಛಿತವೇನೆಂದು ಕೇಳಿದನು. ಆಗ ಗೌತಮನು–ದೇವಾ! ನನ್ನಲ್ಲಿದ್ದ ಬ್ರಾಹ್ಮಣರೆಲ್ಲರೂ ನನ್ನ ಮೇಲೆ ಗೋವಧೆಯ ಪಾಪವನ್ನು ಹೊರಿಸಿ ಹೋದರು. ಕಾರಣ ಆ ಗೋವನ್ನು ಬದುಕಿರುವುದಕ್ಕೆ ನಿನ್ನ ಜಡೆಯಲ್ಲಿರುವ ಗಂಗಾಮಾತೆಯನ್ನು ಕರುಣಿಸೆಂದನು. ಶಿವನು–ಗೌತಮಾ! ನಿನ್ನ ಇಚ್ಛೆಯಂತೆ ಗಂಗೆಯನ್ನು ತೆಗೆದುಕೊಂಡು ಹೋಗೆಂದನು.

ಅದಕ್ಕೆ ಗೌತಮನು–ದೇವಾ! ಗೋವಧಾ ಪಾಪವು ಬಿಡದೆ ಅಂಟಿಕೊಂಡು ಮಹಾಪ್ರಳಯದ ಪರ್ಯಂತರವೂ ಕಾಲದ ಕಟ್ಟಾಜ್ಞೆಯಿಂದ ನರಕದಲ್ಲಿ ಬಿದ್ದು ಬೇಯುತ್ತಿರುವರು. ನಾನು ತಂದ ಗಂಗಾಜಲವನ್ನು ಮುಟ್ಟಿದರೆ ಅವರ ಪೂರ್ವಜರ ಪಾಪಗಳು ಸಹಿತ ನಾಶವಾಗಿ ಅವರು ಮೋಕ್ಷವನ್ನು ಹೊಂದುವಂತಾಗಬೇಕೆಂದು ಪ್ರಾರ್ಥಿಸಿದನು. ಅದಕ್ಕೆ ಪರಮೇಶ್ವರನು ಸಮ್ಮತಿಸಿ ತನ್ನ ಜಡೆಯ ಒಂದು ಕೂದಲನ್ನು ಮಾತ್ರ ಎತ್ತಿ ಒಂದು ಜಲ ಬಿಂದುವನ್ನು ಗೌತಮನಿಗೆ ಕರುಣಿಸಿದನು. ಅದು ಭೂಲೋಕದಲ್ಲಿ ನದಿಯಾಗಿ ಹರಿಯಿತು. ಅದನ್ನು ಭೂಲೋಕಕ್ಕೆ ಗೌತಮನು ತಂದ ಕಾರಣ ಅದಕ್ಕೆ ಗೌತಮ ಎಂದೂ ಅದರಿಂದ ಗೋವನ್ನು ಬದುಕಿಸಿದುದರಿಂದ ಆ ನದಿಗೆ ಗೋದಾವರಿಯೆಂದೂ ಹೆಸರಾಯಿತು. ನಿಜ ತಿಳಿದ ಮೇಲೆ ಗೌತಮ ವ್ಯರ್ಥವಾಗಿ ತನಗೆ ಗೋಹತ್ಯಾ ದೋಷವನ್ನು ಹೊರಿಸಿದ ಅಧಮರಾದ ಹಾರುವರಿಗೆ ಶಾಪವನ್ನು ಕೊಡುವೆನೆಂದನು! ಏಕೆಂದರೆ–ಎಲೈ ಪಾಪಿಗಳೇ ಕೇಳಿರಿ! ನೀವು ಬೌದ್ಧ, ಚಾರ್ವಾಕ, ಪಂಚರಾತ್ರ, ಶಾಕ್ತೇಯ ಇವರಲ್ಲಿ ದೀಕ್ಷೆಯನ್ನು ಹೊಂದುವವರಾಗಿರಿ ಎಂದು ಶಪಿಸಿದನು.

ಈ ಪ್ರಕಾರ ಶಾಪ ಕೊಟ್ಟನು. ಗೌತಮನ ಶಾಪ ಶಕ್ತಿಯು ಬಹುಮುಖಗಳುಳ್ಳದ್ದು. ಕೋರೆ ದಾಡೆಗಳುಳ್ಳದ್ದೂ, ಮತ್ತು ಅನೇಕ ಭುಜಗಳುಳ್ಳದ್ದೂ ಆಗಿ, ಕಪ್ಪು ಮೋಡ ದೇಹ ಕಾಂತಿಯುಳ್ಳದ್ದಾಗಿ ಕಿಡಿಗಳನ್ನುಗುಳುತ್ತ ಅಜ್ಞಾನಿ ಹಾರುವರಿರುವ ಸ್ಥಳಕ್ಕೆ ಬಂದು



ಅರ್ಜೆಂಟೈನಾದ ಪ್ರಮುಖ ಬಂದರು – ಬ್ಯೂನಸ್ ಐರಿಸ್

ಗರ್ಜಿಸಲು ಆ ಹಾರುವರು ಇದೇನೆಂದು ನೋಡಿ ಗಡಗಡನೆ ನಡುಗಿ ಭಯದಿಂದ–ಶಿವ ಶಿವಾ! ಮಹಾದೇವ! ನಮಗೆ ಬಂದಂಥ ಈ ಎರಡನ್ನು ತಪ್ಪಿಸು ಎಂದು ಪ್ರಾರ್ಥಿಸಿದರು. ಆ ಮೇಲೆ ನೀನಾರೆಂದು ಆ ಶಾಪಶಕ್ತಿಯನ್ನು ಕೇಳಿದರು. ಅದಕ್ಕೆ ಆ ಶಾಪಶಕ್ತಿಯು–ಎಲೈ ಜಡ ಹಾರುವರೇ! ನಿಷ್ಕಪಟಿಯಾದ ಗೌತಮ ಮಹಾಮುನಿಗೆ ನೀವು ಅಜ್ಞಾನದಿಂದ ಹೊರಿಸಿ ಪಾಪವನ್ನು ಪರಮೇಶ್ವರನಿಂದ ಕಳೆದುಕೊಂಡು ನಿಮಗೆ ಶಾಪವನ್ನಿತ್ತಿದ್ದಾನೆ. ಆ ಶಾಪ ಶಕ್ತಿಯೇ ನಾನು ಎಂದಿತು. ಗೌತಮನ ಶಾಪಶಕ್ತಿಯು ನಮಗೆ ಕೇಡು ಮಾಡುವುದು. ಆದರೆ ನಾವು ಶಿವನ ಧ್ಯಾನಾಸಕ್ತರಾಗಿ ಶ್ರೀ ರುದ್ರ ಮುಂತಾದ ಶಿವಮಂತ್ರದಿಂದ ಗಟ್ಟಿಗರಾಗಿದ್ದೇವೆ. ಆ ಶಾಪಶಕ್ತಿಯು ಏನು ತಾನೇ ಮಾಡಬಲ್ಲದು? ಎಂದು ಶಿವಧ್ಯಾನದಲ್ಲಿ ನಿರತರಾದರು. ಆ ಶಾಪಶಕ್ತಿಯು ಅವರನ್ನು ಮುಟ್ಟದೆ ಘುಡಘುಡಿಸುತ್ತ ಮುಂದೆ ನಿಂತುಕೊಂಡಿತು. ಇದನ್ನು ಪರಮೇಶ್ವರನು ತಿಳಿದು ಈ ದುಷ್ಟರು ಗೌತಮನಿಗೆ ವ್ಯರ್ಥವಾಗಿ ಅನ್ಯಾಯ ಮಾಡಿದರಾದುದರಿಂದ ಗೌತಮನ ಶಾಪದಿಂದ ಇವರು ಮುಕ್ತರಾಗಕೂಡದು ಅವರನ್ನು ಮಹುಮತಾವಲಂಬಿಗಳನ್ನಾಗಿ ಮಾಡಬೇಕಾದರೆ, ಕಾಮನ ಪಿತನಾದ ಹರಿಯನ್ನೇ ಕಳುಹಿದರೆ ಈ ಕೆಲಸವಾಗುವುದು ಎಂದು ನಿಶ್ಚಯಿಸಿ ವಿಷ್ಣುವನ್ನು ಕರೆಯಿಸಿ ಎಲೈ ವಿಷ್ಣುವೇ! ಗೌತಮನಿಗೆ ನಿಷ್ಕಾರಣವಾಗಿ ಘಾತಿಸಿದ ಘಾತಕಿಗಳು ದಾರುಕಾವನವಾಸಿಗಳಾಗಿರುವರು. ಗೌತಮನ ಶಾಪಶಕ್ತಿಯು ಅವರ ಮುಂದೆ ಬಂದು ಘುಡು ಘುಡಿಸುತ್ತಿರಲು ಈಗ ಅವರು ನಮ್ಮ ಸ್ಮರಣೆಯಲ್ಲಿರುವ ಅವರ ಚಿತ್ತ ಚಲಿಸಿ ನಮ್ಮ ಭಕ್ತಿಯನ್ನು ಬಿಟ್ಟು ಅವರು ಅನ್ಯಮತಸ್ಥರಾಗುವಂತೆ ಮಾಡು. ಈ ಕಾರ್ಯವು ನಿನ್ನಿಂದಲೆ ಆಗುವುದು. ಅವರು ದುರ್ಮಾರ್ಗಿಗಳಾದರೆ ಗೌತಮನ ಶಾಪವು ತಟ್ಟುವುದು ಎಂದು ಆಜ್ಞಾಪಿಸಿದನು. ದೇವಾ! ನಾನು ಅಜ್ಞಾನವನ್ನು ಬೋಧಿಸಿದರೆ ದೋಷ ಬರುವುದಿಲ್ಲವೇ? ಎಂದು ವಿಷ್ಣುವು ಅಂದನು. ಪರಮೇಶ್ವರನು –ಎಲೈ ವಿಷ್ಣುವೇ ಹೆದರಬೇಡ ನಾವಿರುವೆವು ಎನ್ನಲು, ಆಗ ವಿಷ್ಣುವು ದೇವಾ! ತ್ರಿಪುರ ಸಂಹಾರ ಕಾಲದಲ್ಲಿಯೂ ಆ ರಾಕ್ಷಸರನ್ನು ನಿಮ್ಮ ಭಕ್ತಿಯಿಂದ ಪರಾವೃತ್ತರಾಗುವಂತೆ ಮಾಡೆನ್ನಲು ನಾರದನೊಡನೆ ಹೋಗಿ ಅದರಂತೆ ಮಾಡಿದನು. ಈಗ್ಯೂ ನಿಮ್ಮ ಅಪ್ಪಣೆಯಂತೆ ನಡೆಯುವೆನು ಎಂದು ನಮಸ್ಕಾರ ಮಾಡಿ ಹೊರಟು ಹೋದನು.

ಹೀಗೆ ಪರಮೇಶ್ವರನಿಂದ ಅಪ್ಪಣೆಯನ್ನು ಪಡೆದು ಹೊರಟು ವಿಷ್ಣುವು ತನ್ನ ದೇಹ ಸೌಂದರ್ಯ ಶೃಂಗಾರಗಳಿಂದ ಅಲಂಕೃತನಾಗಿ ಒಂದು ಹಿಂಡು ಆನೆಗಳ ಮೇಲೆ ಪುಸ್ತಕಗಳನ್ನು ಹೇರಿಕೊಂಡು, ದಾರುಕಾವನ ಮಧ್ಯದಲ್ಲಿ ಬಂದು ರತ್ನ ಪೀಠದಲ್ಲಿ ಕುಳಿತು ದುರ್ಬೋಧೆಯನ್ನು ಬೋಧಿಸುವ ಆಚಾರ್ಯನಾಗಿ ಶೋಭಿಸಿದನು. ಹೀಗೆ ಕುಳಿತಿರುವ ವಿಷ್ಣುವನ್ನು ನೋಡಿ ಅಲ್ಲಿಯ ಮುನಿಗಳು ನೀನಾರೆಂದು ಕೇಳಿದರು. ಆಗ ವಿಷ್ಣುವು–ನಾನು ನಿಮ್ಮೆಲ್ಲರಿಗೆ ವಿಶೇಷ ಬೋಧೆಯನ್ನು ಮಾಡಲು ಈ ಭೂಮಿಗೆ ಬಂದಿದ್ದೇನೆಂದು ಹೇಳಿದನು. ಅದನ್ನು ಕೇಳಿ ಮುನಿಗಳು ಶಿವ ಭಕ್ತಿಯಲ್ಲಿರುವ ನಮಗೆ ವಿಶೇಷ ವಿಷಯಗಳಿಂದೇನು ಪ್ರಯೋಜನವೆಂದರು.

ಆಗ ವಿಷ್ಣುವು ನಾನೊಬ್ಬ ಆಚಾರ್ಯನು, ನಿಮ್ಮ ಜ್ಞಾನವೆಷ್ಟು? ನಿಮ್ಮ ಅಧಿ ದೈವವಾವುದು? ಎಂದು ಕೇಳಿದನು. ಅದಕ್ಕೆ ಮುನಿಗಳು, ಸರ್ವೇಶನಾದ ಪರಶಿವನನ್ನೇ ನಾವು ಪತಿದೈವವೆಂದು ತಿಳಿದು ಭಜಿಸುತ್ತಿರುವೆವು ಎಂದರು. ಆಗ ಕೃತ್ರಿಮ ಆಚಾರ್ಯನಾದ ವಿಷ್ಣುವು–ಜಗದ ಒಳಗೂ, ಹೊರಗೂ ತುಂಬಿಕೊಂಡಿರುವುದರಿಂದ ಅದನ್ನು ಜ್ಞಾನದಿಂದ ತಿಳಿದುಕೊಳ್ಳದೇ ನನ್ನ ಸನಿಹದಲ್ಲಿಯೇ ಹೀಗೆ ಹೇಳಬಹುದೇ? ಸುಖಕರನಾದ ವಿಷ್ಣುವು ದೈವವಾಗಿರಲು ಅವನ ಮುಂದೆ ಶಿವನು ಎಷ್ಟರವನು? ಆದುದರಿಂದ ವಿಷ್ಣುವೇ ದೈವವು ಎಂದು 12 ಲಕ್ಷ ಗ್ರಂಥಗಳನ್ನು ಉದಾಹರಿಸಿದನು.

ಇದನ್ನು ಕೇಳಿದ ಕೆಲವು ಮುನಿಗಳು ಮೈಮರೆತು ವೈಷ್ಣವ ಮತಾವಲಂಬಿಗಳಾದರು.

ಅತ್ತ ಗೌತಮನು ಪರಶಿವನೇ ದೈವವಲ್ಲದೆ ಅನ್ಯ ದೈವಂಗಳಿಲ್ಲ. ವಿಷ್ಣು ಮೊದಲಾದವರು ಕರ್ಮಾಧೀನರು. ವೈಷ್ಣವ, ಬೌದ್ಧ ಮೊದಲಾದ ಮತಗಳು ಅಬದ್ಧವೆಂದು ನಿಶಾನೆಯನ್ನೆತ್ತಿ ಹಾರಿಸಿ ಸಾರಿ ಸಾರಿ ಹೇಳುತ್ತಿದ್ದನು. ವಿಷ್ಣುವಿನ ಉಪದೇಶ ಹೊಂದಿದ ದಾರುಕಾವನದ ಮುನಿಗಳೆಲ್ಲರೂ ಕೂಡಿಕೊಂಡು ಬಂದು ಗೌತಮನೊಡನೆ ವಾದಿಸಿ ಸೋತು ಹೋದರು.

ಈ ಸಂಗತಿಯನ್ನು ಕೃತ್ರಿಮ ಆಚಾರ್ಯರಾದ ವಿಷ್ಣುವಿಗೆ ಬಂದು ತಿಳಿಸಿದರು.

ಆಗ ಅವನು ನಾನೇ ಅವನನ್ನು ಸೋಲಿಸುವೆನು ಹೆದರಬೇಡಿರಿ ಎಂದು ಆನೆಗಳ ಮೇಲೆ ಪುಸ್ತಕಗಳನ್ನು ಹೇರಿಕೊಂಡು ತಾನು ಪಲ್ಲಕ್ಕಿಯಲ್ಲಿ ಕುಳಿತು ಗೌತಮನ ಆಶ್ರಮಕ್ಕೆ ಬಂದನು. ಗೌತಮನೊಡನೆ ವಿಷ್ಣುವೇ ದೈವವೆಂದು ವಾದಿಸಿದನು.

ಅದಕ್ಕೆ ಗೌತಮನು–ವೈಷ್ಣವಾಚಾರ್ಯರ ದುರ್ವಾಸನ ಶಾಪದಿಂದ ವಿಷ್ಣುವು ಹತ್ತು ಜನ್ಮಗಳನ್ನು ಹೊಂದಿದನು. ಅವುಗಳಲ್ಲಿ ಏಳನೆಯ ಜನ್ಮದಲ್ಲಿ ರಾಮನಾದಾಗ್ಗೆ ಮೋಸದಿಂದ ವಾಲಿಯನ್ನು ಕೊಂದನು. ಜಲಕನ ಬಾಣಕ್ಕೆ ಆಹುತಿಯಾಗಿ ಮಡಿದ ಕೃಷ್ಣನು ಅಧಿಕನೇ? ಗಾರ್ಗ್ಯ ಮುನಿಗೆ ಹರಿಯು ತಾನೇ ದೈವವೆಂದು ಹೇಳಲು, ವರ್ಷಾಕನು ಅವನ ಎದೆಯನ್ನೇ ಸೀಳುವೆನೆಂದನು. ಈ ಬಗೆಯಾಗಿ ಭಂಗಿತನಾದ ನಿನ್ನ ದೈವವೇತರದು ನಡೆ ಎಂದನು.

ಈ ರೀತಿಯಾಗಿ ಅಪಮಾನಿತನಾದ ವಿಷ್ಣುವು ತಿರುಗಿ ಕೈಲಾಸಕ್ಕೆ ಬಂದು ಪರಶಿವನಿಗೆ ನಿವೇದಿಸಿದನು. ಅದಕ್ಕೆ ಪರಶಿವನು ಶಂಭುಭಟ್ಟನೆಂಬ ನಾಮದಿಂದ ಗೌತಮನಲ್ಲಿಗೆ ಬಂದು ವಾದಿಸಿ ಗೌತಮನ ವಾದಕ್ಕೆ ಮೆಚ್ಚಿ ಪ್ರತ್ಯಕ್ಷನಾದನು. (ಸಕಲ ದೇವಗಣದೊಡನೆ) ನಿಜ ಭಕ್ತನಾದ ಗೌತಮನನ್ನು ಜಗದಲ್ಲಿ ಮೆರೆಸಬೇಕೆಂದನು. ದುರ್ಬೋಧೆಯಿಂದ ದುರ್ಮಾರ್ಗಿಗಳಾದ ಮುನಿಗಳೆಲ್ಲರೂ ಪರಮತಾವಲಂಬಿಗಳಾಗಿರುವುದನ್ನು ಜಮದಗ್ನಿ ಮೊದಲಾದ ಋಷಿಗಳು–ದೇವಾ ಗೌತಮನ ಮೇಲೆ ವೃಥಾ ಗೋಹತ್ಯಾ ದೋಷವನ್ನು ಹೊರಿಸಿದ ಈ ಮುನಿಗಳು ಪರದೈವ ಪೂಜಕರಾಗಿದ್ದಾರೆ ಕಾರಣ ಅವರನ್ನು ರಕ್ಷಿಸು, ಅವರಿಗೆ ಸುಜ್ಞಾನವನ್ನು ದಯಪಾಲಿಸೆಂದು



ರಷ್ಯಾದ ಪ್ರಮುಖ ಬಂದರು – ವ್ಲಾಡಿವೋಸ್ಟಕ್

ಬೇಡಿಕೊಳ್ಳಲು ಅದಕ್ಕೆ ಪರಮೇಶ್ವರನು ಸರಿಯೆಂದು ದ್ವಿತೀಯ ಶಂಭುವೆನಿಸಿರುವ ನಂದೀಶ್ವರನನ್ನು ಕರೆದು ನೀನು ಸುಖಾವಹ ಮೂರ್ತಿಯಾಗಿ ಋಷಿಗಳಿಗೆ ಶಿವಾಧಿಕ್ಯ ತತ್ವವನ್ನು ಬೋಧಿಸೆಂದನು.

ನಂದೀಶ್ವರನು ಕೆಂಜಡೆ, ಕರ್ಣಕುಂಡಲ, ತ್ರಿನೇತ್ರ, ಏಕಮುಖ ಸುಲಿಪಲ್ಲ, ನೀಲಿಬಗರಿಗಡ್ಡ, ಧರ್ಮಾಸಿಗ ಭಾಳದಲ್ಲಿ ತ್ರಿಪುಂಡ ವಾಮಕರದಲ್ಲಿ ಮಸ್ತಕ, ವಿನ್ಯಾಸದ ಬಲಗೈ ಮಸ್ತಕಲಿಂಗ ಧಾರಿಯಾಗಿ, ಪದ್ಮಾಸನದಿಂದೊಪ್ಪುವವನಾದನು, ಇವನೇ ಸುಖಾವಹ ಮೂರ್ತಿಯಾಗಿ ಕಂಗೊಳಿಸಿದನು.

ಆ ದುರ್ಮಾರ್ಗಿಗಳಾದ ಮುನಿಗಳೆಲ್ಲರೂ ನಾವು ಗೌತಮನ ಶಾಪದಿಂದ ಕೆಟ್ಟೆವು. ನಮಗೆ ಸದ್ಬೋಧೆಯನ್ನು ಕೊಟ್ಟು ಕಾಪಾಡಬೇಕೆಂದು ನಂದಿಗೆ ಪ್ರಾರ್ಥಿಸಿದರು.

ಎಲೈ ಮುನಿಗಳಿರಾ! ಕಾಮಿತಾಗವದ ಮಹೇಂದ್ರ ಮಂತ್ರದಲ್ಲಿ ಪರಶಿವನು ಪಾರ್ವತಿಗೆ ಹೇಳಿದ ವಿಷಯವನ್ನು ದೇವೇಂದ್ರನು ಭಾರದ್ವಾಜನಿಗೆ ಹೇಳಿರುವನು. ಈ ವಿಷಯವು ಲಿಂಗ ಪುರಾಣದಲ್ಲಿರುವುದು. ಪರಮೇಶ್ವರನು ಮಾತಂಗಾದಿ ಮುನಿಗಳಿಗೆ ಹೇಳಿದ ವಿಷಯವನ್ನೇ ನಾನು ನಿಮಗೆ ಹೇಳುವೆನು ಕೇಳಿರಿ ಎಂದು ಸುಖಾವಹಮೂರ್ತಿಯು ಭೂಗೋಲವರ್ಣನೆಯನ್ನೂ ವೇರು ಪ್ರದೇಶಾದಿಗಳನ್ನೂ ಮತ್ತು ಊರ್ಧ್ವಲೋಕ, ಶಿವಲೋಕಗಳ ವಿಸ್ತಾರವನ್ನೂ ಧರ್ಮ ಅರ್ಥ ಸ್ವರೂಪಗಳು, ಪುಣ್ಯ ಪಾಪಗಳು, ಸ್ವರ್ಗ, ನರಕ, ಪಿಂಡೋತ್ಪತ್ತಿ, ದಶವಾಯು ಲಕ್ಷಣವನ್ನೂ, ರಜಸ್ವತೀ ಫಲ, ಪಿಂಡಜನನದ ಕ್ರಮಗಳನ್ನು ಗರ್ಭಸ್ಥ ಶಿಶುವಿನ ಪೂರ್ವಜನ್ಮ ಸ್ಮರಣೆಯನ್ನೂ ಸಾಮುದ್ರಿಕ ಲಕ್ಷಣಗಳನ್ನೂ, ಕಾಲಜ್ಞಾನ ಮರಣ ಚಿಹ್ನೆಗಳನ್ನು ಸಂಸಾರ ಹೇಯ ವಿಷಯಗಳನ್ನೂ ಬೋಧಿಸುತ್ತ ಎಲೈ ಮುನಿಗಳೇ! ಈ ಪ್ರಕಾರ ಪ್ರಾಣಿಗಳೆಲ್ಲರಿಗೆ ದುಃಖ ನಿವಾರಣೆಯು ಕೇವಲ ದಯಾಸಮುದ್ರನಾದ ಪರಶಿವನಿಂದಲೇ ಸಾಧ್ಯ. ಅವನು ಈ ಜೀವಜಾಲವನ್ನು ರಕ್ಷಿಸಿ ಭವರೋಗ ನಿವಾರಕನಾಗಿ ಸುಖಕರನಾಗಿರುವನು. ಇದನ್ನರಿತುಕೊಂಡು ಪರಶಿವನನ್ನು ಭಜಿಸುವರೇ ಬುದ್ಧಿಯುಳ್ಳವರಾಗುವರು. ಈ ಸಂಸಾರ ದೋಷ ಪರಿಹಾರವು ಉಳಿದವರಿಂದಾಗದು. ಪರಶಿವ ನಿತ್ಯನು. ಅಂತಹ ಪರಶಿವನನ್ನು ತೋರಿಸುವ ಗುರುವನ್ನು ಕಂಡು ಆತನ ಕೃಪೆಯನ್ನು ಪಡೆಯುವುದೇ ಮುಖ್ಯವು. ಹೀಗೆ ದಾರುಕಾಮುನಿಗಳಿಗೆ ಸುಖಾವಹ ಮೂರ್ತಿಯು ಹೇಳಿದನಲ್ಲದೆ ಬರಗಾಲದಲ್ಲಿ ನಿಮ್ಮನ್ನು ಸಂರಕ್ಷಿಸಿದ ಗೌತಮನ ಮೇಲೆ ಗೋವಧೆಯ ದೋಷವನ್ನು ಹೊರಿಸಿದ ಕಾರಣ ಆತನು ಶಿವನ ಕೃಪೆಯಿಂದ ಗಂಗಾದೇವಿಯನ್ನು ಭೂಲೋಕದಲ್ಲಿ ಹರಿಸಿದನು. ನಿಮ್ಮನ್ನು ಶಪಿಸಿದನು. ನೀವು ದುರ್ಮಾರ್ಗಿಗಳಾದಿರಿ. ಗೌತಮನೊಡನೆ ವಾದಿಸಿ ಅಪಜಯ ಹೊಂದಿದಿರಿ. ಆದ್ದರಿಂದ ಸಕಲರ ಅಧಿದೈವನೇ ಶಿವನು. ಇದು ಸತ್ಯವು. ಶಿವನೇ ಅಧಿಕವು. ಶಿವನಿಗಿಂತ ಅಧಿಕ ಇನ್ನೊಬ್ಬರಿಲ್ಲ. ಆದ್ದರಿಂದ ಶಿವನನ್ನು ಭಜಿಸಿರಿ ಎಂದನು. ಇದನ್ನು ಕೇಳಿದ ಮುನಿಗಳೆಲ್ಲರೂ ಒಪ್ಪಿ ಸುಖಾವಹ ಮೂರ್ತಿಗೆ ನಮಸ್ಕರಿಸಿ, ಶಿವಾಧಿಕ್ಯ ತತ್ವವನ್ನು ಆಚರಣೆಯಲ್ಲಿ ತಂದರೆಂಬಲ್ಲಿಗೆ ಪರಮೇಶ್ವರನ ಇಪ್ಪತ್ತನೆಯದಾದ ಸುಖಾವಹ ಮೂರ್ತಿಯ ಶಿವಾಧಿಕ್ಯ ಬೋಧನೆಯ ಲೀಲೆಯು ಸಮಾಪ್ತವಾಯಿತು.

---

ಮಹಾಕ್ಷತ್ರಿಯ ಲೇ: ದೇವುಡು

# ಏರುವುದು ಬೀಳುವುದಕ್ಕೆ

ನಹುಷನು ಇಂದ್ರನಾಗಿ ಅಧಿಕಾರವನ್ನು ವಹಿಸಿಕೊಂಡನು. ಅಗ್ನಿ ವಾಯುಗಳನ್ನು ಹಿಂದಿನಂತೆ ಅವರವರ ಅಧಿಕಾರದಲ್ಲಿಟ್ಟು ಅವರ ಮುಖಾಂತರವಾಗಿ ತ್ರೈಲೋಕ್ಯಾಧಿಪತ್ಯವನ್ನು ನಿರ್ವಹಿಸಿದನು. ಹಿಂದಿನ ಇಂದ್ರನಿಗೂ ಈ ಇಂದ್ರನಿಗೂ ವ್ಯತ್ಯಾಸವೆಂದರೆ, ಈತನು ನಿತ್ಯ ದಾನ ಮಾಡುವವನು. ಆ ದಾನದ್ರವ್ಯವು ಮಾತ್ರ ಅಲ್ಲಿ ವಿನಿಯೋಗವಾಗದೆ ಮಧ್ಯಮ ಲೋಕದಲ್ಲಿ ಪ್ರಕಾರಾಂತವಾಗಿ ವಿನಿಯೋಗವಾಗುವುದು.

ಅಗ್ನಿ ವಾಯುಗಳು ಇಂದ್ರನಿಗೆ ಹೇಳಿದರು: "ಇದು ಕೇವಲ ಅಧಿಕಾರ ಸ್ಥಾನವಲ್ಲ. ಇಲ್ಲಿರುವವನು ಒಂದು ಹೆಜ್ಜೆಯನ್ನು ಪೂರ್ಣಪದದಲ್ಲಿಟ್ಟು ಆ ಕಡೆ ತಿರುಗಿರಬೇಕು. ಇನ್ನೊಂದು ಹೆಜ್ಜೆ, ಅಧಿಕಾರ ಸ್ಥಾನದಲ್ಲಿರಬೇಕು ಅಥವಾ ರೂಪಕವಾಗಿ ಹೇಳಬೇಕೆಂದರೆ ನನ್ನಂತೆ ಎರಡು ಮುಖ ಮಾಡಿಕೊಂಡು ಕರ್ಮಬ್ರಹ್ಮಗಳೆರಡನ್ನೂ ಆರಾಧಿಸಬೇಕು ಮತ್ತು ವಾಯುವಿನಂತೆ ಸದಾಗತಿಯಾಗಿದ್ದು, ತೀರದವರೆಗೂ ಅಲೆಗಳನ್ನು ಕಳುಹಿಸುವ ಸಮುದ್ರದಂತೆ, ಎಲ್ಲಿ ಯಾವುದು ನಡೆದರೂ ಅದನ್ನು ಗಮನಿಸಿ ಅದನ್ನು ಅದರದರ ಯೋಗ್ಯತಾನುಸಾರ ಪೂರ್ಣತೆಗೆ ಕೊಂಡೊಯ್ಯುವವನಾಗಬೇಕು."

ನಹುಷನು ಕೇಳಿದನು: "ಹಾಗಾದರೆ ಲೋಕದಲ್ಲಿ ಎಲ್ಲವೂ, ಪ್ರತಿಯೊಂದೂ ಪೂರ್ಣವೆ?"

ಅಗ್ನಿಯು ಹೇಳಿದನು: "ದೇವ, ಪ್ರತಿಯೊಂದು ಪೂರ್ಣವೇ. ಪೂರ್ಣದಿಂದ ಬಂದ ಜಗತ್ತಿನಲ್ಲಿರುವ ಪ್ರತಿಯೊಂದು ಪೂರ್ಣವೇ. ಆದರೆ, ಒಂದು ಇನ್ನೊಂದನ್ನು ಅಪೂರ್ಣವೆನ್ನುತ್ತ, ತಾನು ಬೇರೆಯೆಂದುಕೊಂಡು ತನ್ನ ಪೂರ್ಣತೆಗೊಂದು ಮಿತಿಯನ್ನು ಹಾಕಿಕೊಂಡಿರುವುದು. ಆದರೂ ತಾನು ಎಂಬುದೊಂದುಂಟು ಎಂದುಕೊಂಡುದು, ತನ್ನದೊಂದು ವಿಷಯ ಪ್ರತ್ಯೇಕ, ಎಲ್ಲರಂತಲ್ಲ ಎಂದು ಕ್ಷೇತ್ರವನ್ನು ವಿಂಗಡಿಸಿಕೊಂಡಿರುವುದು. ಅದನ್ನೇ ಅಹಂಕಾರವೆನ್ನುವರು. ಆ ಅಹಂಕಾರದ ಅಧಿನಾಥನು



ಚೀನಾದ ಪ್ರಮುಖ ಬಂದರು – ಡಾಲಿಯಾನ್

ಇಂದ್ರನು. ಆತನು ಅದನ್ನು ಪೋಷಿಸುವನು. ಆತನ ಅಪ್ಪಣೆಗನುಸಾರವಾಗಿ ದೇವತೆಗಳು ಅದನ್ನು ಅಳೆಯುವರು. ಅದು ತಕ್ಕಷ್ಟು ದೊಡ್ಡದಾದರೆ ಅದನ್ನು ಲೋಕದ ಶುಭಾಶುಭಗಳಿಗೆ ವಿನಿಯೋಗಿಸುವರು."

"ಸರಿ."

"ಅದರಿಂದಲೇ ಪ್ರಪಂಚವೆಲ್ಲವೂ ದೇವತೆಗಳ ಕೈಯಲ್ಲಿರುವುದು ಎನ್ನುವರು."

"ಈ ದೇವತೆಗಳನ್ನು ಕಾಲವು ಪ್ರಚೋದಿಸುವುದು. ಕಾಲವು ಶುಭಾಶುಭ ಪ್ರವರ್ತಕವೆಂದು ನಮ್ಮ ಭಾವನೆ. ಕಾಲವನ್ನು ಬಲ್ಲವನು ಕಾಲಸ್ವರೂಪನಾದ ಮಹಾವಿಷ್ಣುವು ಒಬ್ಬನೇ. ನಮಗೆ ಮನ್ವಂತರದ ಕೊನೆಯವರೆಗೂ ಆಳುವ ಅಧಿಕಾರವುಂಟು. ಪ್ರತಿಯೊಂದು ಮನ್ವಂತರದಲ್ಲೂ ದೇವತೆಗಳು, ಋಷಿಗಳು, ಪಿತೃಗಳು, ಮನು ಎಲ್ಲರೂ ಹೊಸಬರಾಗುವರು."

"ಸರಿ. ನಮ್ಮಲ್ಲಿ ಏನಾದರೂ ಲೋಪವಾದರೆ ಹೇಳುವುದಕ್ಕೆ ನೀವು ಇದ್ದೇ ಇದ್ದೀರಿ. ಆಯಿತು. ನಮ್ಮ ಅಧಿಕಾರ ನಿರ್ವಹಣದಲ್ಲಿ ಆಗುವ ನ್ಯೂನ್ಯಾತಿರೇಕಗಳನ್ನು ಸರಿಪಡಿಸಿಕೊಳ್ಳುವುದು ಹೇಗೆ?"

"ಅದಕ್ಕೇ ದೇವಾಚಾರ್ಯನಿರುವುದು."

"ಸರಿ ಹಾಗಾದರೆ, ಹಿಂದಿನ ಇಂದ್ರನು ಇಂದ್ರಪದವಿಯನ್ನು ಬಿಟ್ಟು ಓಡಿ ಹೋದುದೇಕೆ?"

"ಆತನೇಕೆ ಹೋದನೆನ್ನುವುದು ಇನ್ನೂ ಸರಿಯಾಗಿ ಯಾರಿಗೂ ತಿಳಿಯದು. ನಾವೆಲ್ಲರೂ ಆತನು ಮಾಡಿದ ವೃತ್ರಹತ್ಯೆಯು ಆತನಿಗೆ ಸಹಿಸುವುದಕ್ಕೆ ಆಗದಷ್ಟು ದೊಡ್ಡದಾಗಿ ಆತನು ಓಡಿಹೋದನು ಎಂದುಕೊಂಡಿರುವೆವು. ನಾವೆಂದುಕೊಂಡಿರುವುದು ನಿಜವಾದರೆ ಆತನೆಲ್ಲಿಯೋ ತಪಸ್ಸು ಮಾಡುತ್ತಿರಬೇಕು. ಆತನ ತಪಸ್ಸು ಫಲವಾಗಿ ಆತನು ನಿರ್ದೋಷಿಯಾಗುವವರೆಗೂ ತಲೆ ಮರೆಸಿಕೊಂಡಿರುವನು."

"ಆತನನ್ನು ನಿರ್ದೋಷಿಯನ್ನಾಗಿ ಮಾಡಿ ಹಿಂತಿರುಗುವಂತೆ ಮಾಡಲು ಸಾಧ್ಯವಿಲ್ಲವೆ?"

"ಯಜ್ಞೇಶ್ವರನು ನಕ್ಕು ಹೇಳಿದನು: "ಸಾಧ್ಯ. ಆದರೆ ಹಾಗೆ ಮಾಡಿದರೆ, ಇಬ್ಬರು ಇಂದ್ರರಾಗುವರು. ಶಾಶ್ವತವಾದ ಇಂದ್ರನು ಬಂದರೆ, ತತ್ಕಾಲಕ್ಕೆ ಇಂದ್ರನು ಅಧಿಕಾರವನ್ನು ಬಿಟ್ಟುಕೊಡಬೇಕಾಗಬಹುದು. ಅದರಿಂದ...."

"ಸುಮ್ಮನಿರುವುದು ಒಳಿತು ಎಂದು ನನ್ನ ಅಭಿಪ್ರಾಯ?"

"ಹೌದು."

"ಹಾಗಾದರೆ, ಈ ನನ್ನ ಪದವಿಯು ಶಾಶ್ವತವಲ್ಲವೆಂದು ನಿನ್ನ ಅಭಿಪ್ರಾಯವೇ?"

"ದೇವ, ದೇವತೆಗಳ ಯಾವ ಪದವಿಯನ್ನು ಶಾಶ್ವತವೆನ್ನೋಣ? ನಾವು ಚತುರ್ಮುಖ ದೃಷ್ಟಿಯಿಂದ ನೋಡಿದರೆ ಅಲ್ಪಾಯುಗಳು. ಮಾನವರ ದೃಷ್ಟಿಯಿಂದ ನೋಡಿದರೆ ದೀರ್ಘಾಯುಗಳು. ಅದರಿಂದ, ಈ ಕಾಲವೆನ್ನುವುದು ಒಬ್ಬೊಬ್ಬರಿಗೆ ಒಂದೊಂದು ಪ್ರಮಾಣವುಳ್ಳದ್ದಾದುದರಿಂದ ಶಾಶ್ವತವೆನ್ನುವುದರಲ್ಲಿ ಅರ್ಥವಿಲ್ಲ."

ನಹುಷನು "ಭಲೆ"ಯೆಂದನು. "ನನ್ನ ಈ ಪದವಿಯು ಅಶಾಶ್ವತವೆಂಬುದನ್ನು ಪ್ರದಕ್ಷಿಣವಾಗಿ ಹೇಳಿದೆ. ಆಯಿತು, ಈ ರಹಸ್ಯ ಯಾರಿಗೆ ಗೊತ್ತು? ಯಾರನ್ನು ಕೇಳಿದರೆ ಇದು ತಿಳಿಯುವುದು?"

"ದೇವಾ, ಈ ರಹಸ್ಯವನ್ನು ತಿಳಿಸಿ ಆಗುವುದು ಆಗಬೇಕಾದುದೂ ಯಾವುದೂ ಇಲ್ಲ. ಆದರೆ ತಮಗೆ ಮಾತು ಕೊಟ್ಟಿರುವಂತೆ, ನಾವು ಇದನ್ನು ಹೇಳಿಯೇ ತೀರಬೇಕಾಗಿ ಹೇಳುತ್ತೇವೆ. ದೇವಗುರುಗಳೊಬ್ಬರು ಇದನ್ನು ಬಲ್ಲರು."

"ಸರಿ."

ಇಂದ್ರನು ಅಗ್ನಿ ವಾಯುಗಳಿಬ್ಬರಿಗೂ ಅಪ್ಪಣೆಯನ್ನಿತ್ತು ವಿಸರ್ಜಿಸಿ, ತಾನು ನೇರವಾಗಿ ಬೃಹಸ್ಪತಿಯ ಬಳಿಗೆ ಬಂದನು. ಹಠಾತ್ತಾಗಿ ಇಂದ್ರನು ಬಂದನೆಂದು ಆಚಾರ್ಯನು ತಾನಾಗಿ ಬಾಗಿಲಿಗೆ ಬಂದು ಆತನನ್ನು ಒಳಗೆ ಕರೆದುಕೊಂಡು ಹೋದನು. ಇಂದ್ರನು ಆ ಮಾತು ಈ ಮಾತು ಆಡುತ್ತ, "ದೇವ, ನನಗೆ ಇಂದ್ರಪಟ್ಟವನ್ನು ಕಟ್ಟಿರುವರಲ್ಲಾ ಅದು ಪೂರ್ಣವಾಗಿದೆಯೆ?" ಎಂದು ಕೇಳಿದನು. ಇಂದ್ರನು ಪೂರ್ಣವೆಂಬ ಶಬ್ದವನ್ನು ಪೂರ್ಣಕಾಲ ಎಂಬರ್ಥದಲ್ಲಿ ಉಪಯೋಗಿಸಿದುದು ಬೃಹಸ್ಪತಿಗೆ ಅಧಿಕಾರ ಪೂರ್ಣವಾಗಿದೆಯೇ ಎಂದು ಅರ್ಥವಾಯಿತು. ಆತನು ಇಂದ್ರನನ್ನು ನೋಡಿ, "ನಿನಗೆ ಅಪಾರವಾದ ಲಾಭವಾಗಿದೆ. ಹೀಗಿರಲು ಈ ಪ್ರಶ್ನೆಯೇಕೆ? ಇದನ್ನು ನೀನು ಕೇಳದಿದ್ದರೆ ಒಳ್ಳೆಯದು" ಎಂದನು.

"ಏಕೆ? ಕೇಳಬಾರದೆ?"

"ನೀನು ತಿಳಿಯಬೇಕೆಂದ ರಹಸ್ಯವನ್ನು ನಿನಗೆ ಹೇಳುವೆವು ಎಂದು ನಾವು ವರವನ್ನು ಕೊಟ್ಟಿದ್ದೇವೆಯಾಗಿ ಹೇಳಲೇಬೇಕು. ಆದರೆ ಅದನ್ನು ತಿಳಿದು ನಿನಗೆ ಆಗಬೇಕಾದುದೇನು?"

"ಅಧಿಕಾರವು ಪೂರ್ಣವಾಗಲು ಏನು ಮಾಡಬೇಕೋ ಅದನ್ನು ಮಾಡಿರೆಂದು ತಮ್ಮನ್ನೇ ಕೇಳುವುದು."

"ಕಾಲವನ್ನು ಕುರಿತು ಆಗಲೇ ಹೇಳಿದ್ದೇವೆ. ನಿನಗಾಗಿ ಮಾನವತ್ವವನ್ನು ಒಪ್ಪಿಕೊಂಡಿರುವೆಯಾಗಿ ಕಾಲದಲ್ಲಿ ಅದು ಅಪೂರ್ಣ. ಕಾಲದೃಷ್ಟಿಯಿಂದ ಅಪೂರ್ಣವಾದ ಅಧಿಕಾರವು ಎಷ್ಟು ಪೂರ್ಣವಾಗಬಹುದೋ ಅಷ್ಟನ್ನು ನಾವು ಕೊಟ್ಟೇ ಇದ್ದೇವೆ."



ಜರ್ಮನಿಯ ಪ್ರಮುಖ ಬಂದರು – ಹ್ಯಾಂಬರ್ಗ್

"ಹಾಗಾದರೆ ಇಂದ್ರಾಧಿಕಾರವು ನನಗೆ ಪೂರ್ಣವಾಗಿ ಬಂದಿಲ್ಲ ಎಂದಂತಾಯಿತು. ಅದು ಪೂರ್ಣವಾಗಲು ಏನಾಗಬೇಕು? ದಯವಿಟ್ಟು ಅಪ್ಪಣೆ ಕೊಡಿಸಬೇಕು."

ಬೃಹಸ್ಪತಿಯು ಯೋಚನಾಪರನಾದನು. ಈತನೇಕೆ ಈ ರಹಸ್ಯವನ್ನು ಭೇದಿಸಬೇಕು ಎಂದಿರುವನು? ಇಲ್ಲಿಯೇ ಈತನ ಪತನಬೀಜವಿದೆಯೋ?" ಎನ್ನಿಸಿತು. ಆದರೆ "ಹೇಳದಿರುವುದು ಹೇಗೆ? ವರವನ್ನು ಕೊಟ್ಟಾಗಿದೆ. ಹುಂ! ಬೇಕಾದುದಾಗಲಿ, ಭವಿತವ್ಯಕ್ಕೆ ನಾನೇನು ಹೊಣೆಯೆ?" ಎಂದುಕೊಂಡು ಹೇಳಿದನು "ಇಂದ್ರತ್ವವು ಶಚೀಪತಿಯಾಗುವವರೆಗೂ ಪೂರ್ಣವಾಗುವುದಿಲ್ಲ."

"ಹಾಗಾದರೆ ಶಚಿಯು ಇಂದ್ರಾಣಿಯಲ್ಲದೆ ಇಂದ್ರಪತ್ನಿಯಲ್ಲ?"

"ಹೌದು. ಪರಿಸ್ಥಿತಿಯಿಂದ ಹಾಗೇ ಅರ್ಥವಾಗುವುದು. ಆದರೆ ಇದುವರೆಗೆ ಇಂದ್ರನು ಬೇರೆಯಾಗಿದ್ದರೂ ಶಚೀಪತಿಯು ಬೇರಾಗಿರಲಿಲ್ಲ. ಈಗ ಶಚೀಪತಿಯು ಇಂದ್ರನೋ? ಅಥವಾ ಶಚೀದೇವಿಯು ಇಂದ್ರನ ಅಧಿಕಾರದ್ಯೋತಕವಾದ ಪ್ರತೀಕವೋ? ಅಥವಾ ಇಂದ್ರನ ಪತ್ನಿಯಾಗಿ ಆತನ ವೈಯಕ್ತಿಕ ಸಂಬಂಧ ಉಳ್ಳವಳೋ ಎಂಬುದನ್ನು ಗೊತ್ತುಮಾಡಬೇಕಾಗಿದೆ."

"ಅದನ್ನು ಗೊತ್ತುಮಾಡುವವರು ಯಾರು?"

"ದೇವಸಭೆ."

"ಹಾಗಾದರೆ ದೇವಸಭೆಯನ್ನು ಸೇರಿಸಿ ಈ ಅಂಶವನ್ನು ಗೊತ್ತುಮಾಡಿಕೊಡಬೇಕು."

ಸುರಾಚಾರ್ಯನು ಏನೋ ಹಿಂಸೆಗೊಳಗಾದವನಂತೆ ಹೃದಯವನ್ನು ಹಿಂಡಿಕೊಳ್ಳುತ್ತಾ "ಆಗಲಿ" ಎಂದನು.

ಇಂದ್ರನು ಅದನ್ನು ಕಂಡಾದರೂ ಆ ರಹಸ್ಯವು ಹಾಗಿರಲಿ ಎನ್ನಬಹುದಾಗಿತ್ತು; ಎನ್ನಲಿಲ್ಲ. ವಿನಯವಾಗಿ, ಗಂಭೀರವಾಗಿ ಗುರುಗಳಿಗೆ ನಮಸ್ಕಾರಮಾಡಿ, ಅವರ ಅಪ್ಪಣೆ ಪಡೆದು ಹಿಂತಿರುಗಿದನು.

ಬೃಹಸ್ಪತಿಯು ಕುಳಿತಿದ್ದೆಡೆಯನ್ನು ಬಿಡದೆ, ಕುಳಿತಲ್ಲಿಯೇ ಕುಳಿತು ಯೋಚಿಸಿದನು. 'ಈಗ ದೇವಸಭೆಯನ್ನು ಕರೆಯುವುದೇನೋ ಆಗುವುದು. ಆದರೆ ಅಲ್ಲಿ ಸಿದ್ಧಾಂತಕ್ಕೆ ಬರುವವರು ಯಾರು? ಅವರೂ ನನ್ನನ್ನೇ ಕೇಳುವರು. ಏನು ಹೇಳಬೇಕು?' ಎಂದು ಬಹಳವಾಗಿ ಯೋಚಿಸಿದನು. ಕೊನೆಗೆ ಅಲ್ಲಿಂದ ಎದ್ದು 'ನಾನೇಕೆ ವ್ಯಥಿಸಲಿ? ಎಂದು ಮಹಾವಿಷ್ಣುವಿನ ಅಪ್ಪಣೆಯಂತೆ ಆಗುತ್ತಿದೆ. ಆತನು ಒಳಗೆ ಕುಳಿತು ಏನು ಹೇಳಿಸುವನೋ ಹಾಗೆಯೇ ಹೇಳುವುದು. ಫಲಾಫಲಗಳನ್ನು ಕಾದು ನೋಡುವುದು' ಎಂದು ಅಲ್ಲಿಂದ ಹೊರಟುಹೋದನು. ಹೋಗುವಾಗ ಆಳುಗಳನ್ನು ಕರೆದು, "ಚಿತ್ರರಥ ಗಂಧರ್ವರಾಜನನ್ನು ಬರಹೇಳು" ಎಂದು ಆಜ್ಞೆ ಮಾಡಿದನು.

ಇನ್ನೊಂದು ಗಳಿಗೆಗೆ ಚಿತ್ರರಥನು ಕಾಣಿಸಿಕೊಂಡನು. ಬೃಹಸ್ಪತಿಯು "ಗಂಧರ್ವರಾಜ. ಈ ಇಂದ್ರನು ಇನ್ನೊಂದು ಗೊಂದಲವೆಬ್ಬಿಸಿದ್ದಾನೆ. ಇದೇ ಈತನ ಪತನಕ್ಕೆ ಕಾರಣವಾದೀತೋ ಏನೋ? ಏನಾದರಾಗಲಿ, ದೇವಸಭೆಯನ್ನು ಕರೆ. ಶಚೀದೇವಿಯಿಲ್ಲದೆ ಇಂದ್ರಾಧಿಕಾರವು ಪೂರ್ಣವಾಗುತ್ತಿಲ್ಲ. ಅದರಿಂದ ಆಕೆಯು ಇಂದ್ರಾಣಿಯೋ ಇಂದ್ರಪತ್ನಿಯೋ ಗೊತ್ತುಮಾಡಬೇಕು" ಎಂದನು.

ಚಿತ್ರರಥನು ಏನೋ ಹೇಳುವುದಕ್ಕೆ ಹೋದನು. ದೇವಗುರುವು "ಆ ವಿಚಾರ ನಾನೂ ನೀನೂ ಚರ್ಚಿಸುವುದು ಬೇಡ. ಅದನ್ನು ದೇವಸಭೆಯೇ ವಿಚಾರಿಸಿ, ಚರ್ಚಿಸಿ ಗೊತ್ತು ಮಾಡಲಿ. ನಾವಿಬ್ಬರೂ ತಲೆಮರೆಸಿಕೊಂಡಿರುವ ಇಂದ್ರನ ಕಡೆಯವರು" ಎಂದು ಏನೋ ಬೇಸರದಿಂದ ಎಲ್ಲವನ್ನೂ ಮುಕ್ತಾಯ ಮಾಡಿದನು.

ಚಿತ್ರರಥನೂ ಏನೋ ಅಸಂತೋಷದಿಂದ "ಸರಿ" ಎಂದು ಕೈಮುಗಿದು ಆಜ್ಞಾವಾಹಕನಾಗಿ ಹೊರಟುಹೋದನು.

---

ಬದುಕಲೊಂದಿಷ್ಟು ಆಪ್ತ ಮಾತು

ಲೇ : ಬಿ.ಎನ್.ರಮೇಶ ಬೊಂಗಳೆ

# ಆಚಾರ-ವಿಚಾರ ಮತ್ತು ವ್ಯವಹಾರ

ನಮ್ಮ ಚರಿತ್ರೆಯಂತೆಯೇ ನಮ್ಮ ಆಚಾರ, ವಿಚಾರ ವ್ಯವಹಾರಗಳನ್ನೂ ಜನ ಗಮನಿಸುತ್ತಿರುತ್ತಾರೆ. ನಾವೆಷ್ಟು ನಿಜ ಅಥವಾ ಸುಳ್ಳು ಎಂಬುದನ್ನು ಅವರ ಕಣ್ಣಳು ಸರ್ವರೀತಿಯಿಂದಲೂ ಪರಿಶೀಲಿಸುತ್ತಿರುತ್ತವೆ.

ವ್ಯಾವಹಾರಿಕತೆಯಿಂದ ದೂರವಿರುವ ಮಂದಿಯನ್ನು ಜಗತ್ತು ದೂರವೆಸೆದು ಬಿಡುತ್ತದೆ. ಅಂತಹ ಜನರಿಂದಲೇ ಜಗತ್ತು ತುಂಬಿಕೊಂಡಿದೆ. ಪ್ರಾಯಶ: ಎರಡು ಪ್ರಕಾರದ ವ್ಯಕ್ತಿಗಳಿರುತ್ತಾರೆ-ಮೊದಲನೆಯವರು ತಮ್ಮ ಯೋಗ್ಯತೆಯನ್ನು ದೈತ್ಯ ರೂಪದಲ್ಲಿ ವಿಕಸಿಸಿಕೊಂಡಂತವಹವರು, ಅಂತಹ ಸಕಲ ಯೋಗ್ಯತೆಯುಳ್ಳ ವ್ಯಕ್ತಿಗಳನ್ನು ಜಗತ್ತು ಪ್ರತಿಭಾವಂತರೆಂದು ಕರೆದು ಅವರನ್ನು ಪೂಜಿಸುತ್ತದೆ ಅಲ್ಲದೆ ಅವರ ಇತರೆ ಕಾರ್ಯಗಳ ಕುರಿತಾದ ಯೋಗ್ಯತೆಗಳ ವಿಚಾರವಾಗಿ ಮೌನ ವಹಿಸಿರುತ್ತದೆ. ಯಾವ ಒಬ್ಬ ವ್ಯಕ್ತಿಯೂ ನೋಡಲಾಗದ ರೀತಿಯಲ್ಲಿ ಜಗತ್ತು ಅಂತಹ ವ್ಯಕ್ತಿಗಳ ಕಾರ್ಯಗಳನ್ನು ವಿಶಿಷ್ಟವಾಗಿ ನೋಡುತ್ತಿರುತ್ತದೆ.

ಒಂದೊಮ್ಮೆ ವ್ಯಾಪಾರಿಯೊಬ್ಬ ತನ್ನ ಮನೆಯಲ್ಲಿ ಮೂರ್ಖನಂತಿದ್ದೂ ದೊಡ್ಡ ವ್ಯಾಪರಸ್ಥನೆನ್ನುವ ಕಾರ್ಯ ಮಾಡಿ ತೋರಿದಾಗ ಜನ ಆತನ ಮೂರ್ಖನಂತಾಡುವ ಅಭ್ಯಾಸವನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ವ್ಯಾಪಾರದಲ್ಲಿ ಬೆರಗಾಗಿಸುವಂತಹ ಆತನ



ಸೌದಿ ಅರೇಬಿಯಾದ ಪ್ರಮುಖ ಬಂದರು – ಜಿದ್ದಾ

ಪ್ರತಿಭೆಯ ಮುಂದೆ ದೋಷಗಳು ಗೋಚರಿಸುವದಿಲ್ಲ, ಅವು ಗೌಣವಾಗಿ ಬಿಡುತ್ತವೆ. ವ್ಯಕ್ತಿಯಲ್ಲಿ ಸರ್ವಕೌಶಲ್ಯಗಳು ಇರಬೇಕೆನ್ನುವುದು ಸಹಜವಾದ ಅಪೇಕ್ಷೆಯೇ. ಆದರೆ ವಸ್ತು ಸ್ಥಿತಿಯೇ ಬೇರೆಯದ್ದಾಗಿರುತ್ತದೆ. ಎಲ್ಲರಲ್ಲೂ ಎಲ್ಲವನ್ನು ಅಪೇಕ್ಷಿಸಲಾಗುವುದಿಲ್ಲ. ಜಿರಲೆಗೆ ಹೆದರುವ ವ್ಯಕ್ತಿ ಹಾವಿಗೆ ಹೆದರದಿರಬಹುದು. ಹಲ್ಲಿಯನ್ನು ಕಂಡು ಬೆಚ್ಚಿ ಬೀಳುವ ವ್ಯಕ್ತಿ ನಾಲ್ಕು ಜನ ಧಾಂಡಿಗರನ್ನು ಹೊಡೆದು ಹಾಕುವಷ್ಟು ಶಕ್ತನಾಗಿರಬಹುದು. ವ್ಯಕ್ತಿತ್ವವೆನ್ನುವುದು ಮನೆಯೊಳಗೆ ಮತ್ತು ಮನೆಯಿಂದ ಹೊರಗೆ ಭಿನ್ನವೇ ಆಗಿರುತ್ತದೆ ಹಾಗೆಯೇ ಆತನ ಆಚಾರ–ವಿಚಾರಗಳೂ ಮನೆಯೊಳಗೆ ಹಾಗೂ ಹೊರಗೆ ಬೇರೆಯದ್ದೇ ಆಗಿರುತ್ತದೆ. ಮನೆಯೊಳಗೆ ಇಲಿಯಂತಿರುವ ವ್ಯಕ್ತಿ ಹೊರಗಡೆ ಹುಲಿಯಂತಿರಬಹುದು ಅಥವಾ ಅದಕ್ಕೆ ತದ್ವಿರುದ್ಧವೂ ಆಗಿರಬಹುದು. ಮನೆಯಲ್ಲಿ ಸತ್ಯ ಹರಿಶ್ಚಂದ್ರನ ಅಪರಾವತಾರದಂತಿರುವವನು ಹೊರಗೆ ಸುಳ್ಳಿನ ಸರಮಾಲೆಯನ್ನೇ ನೇಯಬಹುದು.

'ಆಡಮ್ ಸ್ಮಿತ್' ರಾಷ್ಟ್ರದ ಸಂಪತ್ತು' ಎನ್ನುವ ತನ್ನ ಪುಸ್ತಕದಲ್ಲಿ ಜಗತ್ತಿಗೆ ಮಿತವ್ಯಯದ ಕುರಿತಾಗಿ ಬೋಧಿಸಿದ್ದಾನೆ. ಆದರೆ ಆತ ತನ್ನ ಮನೆಯ ಕೆಲಸಗಳಲ್ಲಿ ಎಂದೂ ಮಿತವ್ಯಯಿ ಎನ್ನಿಸಿರಲಿಲ್ಲ.

ಜಗತ್ತಿನ ಮೇಧಾವಿಗಳಲ್ಲಿ ಬಬ್ಬರೆನ್ನಿಸಿದ್ದ ಸರ್.ಎಂ.ವಿಶ್ವೇಶ್ವರಯ್ಯ ಅಕಸ್ಮಾತ್ ಚೇಳು ಕಂಡರೆ ಬೆಚ್ಚಿ ಬೀಳುತ್ತಿದ್ದರಂತೆ. ಮೋತಿಲಾಲ್ ನೆಹರು ನಿದ್ರೆಯಲ್ಲಿ ಬಿದ್ದ ಕೆಟ್ಟ ಕನಸಿಗೆ ಕಿಟಾರನೆ ಕಿರುಚುತ್ತಿದ್ದರಂತೆ. ಯಾವ ನ್ಯೂಟನ್ನನು ತನ್ನ ಬುದ್ಧಿಮತ್ತೆಯಿಂದ ಜಗತ್ತಿನ ರಹಸ್ಯವನ್ನು ತಿಳಿದಿದ್ದನೋ ಆತ ಕೆಲಸ ಮಾಡುವ ಸಮಯದಲ್ಲಿ ಬೆಕ್ಕಿನ ಕೂಗಿಗೆ ಹೆದರಿಬಿಡುತ್ತಿದ್ದನಂತೆ

ಕೆಲವರ ಅತೀ ಹೆಚ್ಚಿನ ಧ್ಯಾನ–ಮಗ್ನತೆಯನ್ನು ನೋಡಿದಾಗ ಅವರಲ್ಲಿ ವಿವೇಕ ಬುದ್ಧಿಯೇ ಇಲ್ಲವೇನೋ ಅಥವಾ ಅವುಗಳ ಅಭಾವವಿದೆಯೇನೋ ಎಂದೆನ್ನಿಸುತ್ತದೆ. ಒಮ್ಮೆ ಪ್ರೊಫೆಸರ್ ಒಬ್ಬರು ವಿಚಾರಮಗ್ನ ಸ್ಥಿತಿಯಲ್ಲೇ ತಮ್ಮ ಮನೆಗೆ ಹೋಗುತ್ತಾರೆ. ಹೋದೊಡನೆ ಬಾಗಿಲು ಬಡಿಯುತ್ತಾರೆ. ಮನೆಯ ನೌಕರ ಮೇಲಿನಿಂದ ನೋಡಿ, ಕೆಳಗೆ ಕತ್ತಲಿದ್ದುದರಿಂದ ಅವರನ್ನು ಗುರುತಿಸದೆ– 'ಯಾರೋ ಪ್ರೋಫೆಸರ್ ಸಾಹೇಬರನ್ನು ಭೇಟಿಯಾಗಲು ಬಂದಿರಬಹುದು' ಎಂದು ತಿಳಿದು ಮೇಲಿನಿಂದಲೇ–'ಪ್ರೊಫೆಸರ್ ಸಾಹೇಬರು ಮನೆಯಲ್ಲಿಲ್ಲ'ವೆಂದು ಉತ್ತರಿಸುತ್ತಾನೆ.

"ಹೌದಾ! ಸರಿ" ಎಂದು ಆ ಪ್ರೊಫೆಸರ್ ಅಲ್ಲಿಂದ ಮರಳಿದರಂತೆ.

ಅಂತಹ ಅನುಭವಗಳು ನಮಗೆ–ನಿಮಗೆ ಎಲ್ಲರಿಗೂ ಕೆಲವೊಮ್ಮೆ ಆಗಿರುತ್ತದೆ. ನಾವು ವಿಚಾರಮಗ್ನರಾಗಿದ್ದಾಗ ನಾವು ಕಣ್ಣು ಬಿಟ್ಟದ್ದಾಗ್ಯೂ ನಮ್ಮೆದುರು ಯಾರು ಬಂದರು, ಯಾರು ಹೋದರು, ಯಾರು ಏನು ಮಾತನಾಡುತ್ತಿದ್ದಾರೆ ಇತ್ಯಾದಿ ತಿಳಿಯುವುದೇ ಇಲ್ಲ. ಏಕೆಂದರೆ ನಮ್ಮ ವಿವೇಕ ಮತ್ತು ಬುದ್ಧಿ, ಯಾವ ವಿಚಾರದಲ್ಲಿ ಮಗ್ನರಾಗಿರುತ್ತವೋ ಅದಕ್ಕೆ ಶರಣಾಗಿ ಬಿಟ್ಟಿರುತ್ತವೆ.

ವ್ಯಕ್ತಿ ಕಾರ್ಯಕುಶಲನಾಗಿದ್ದರೆ ಆತನು ಮಾಡಿದ, ಮಾಡುವ ಎಲ್ಲ ಕೆಲಸಗಳು ಕುಲಗೆಟ್ಟು ಹೋಗುವುದಷ್ಟೇ ಅಲ್ಲದೆ ಆತ ಅಪಹಾಸ್ಯಕ್ಕೂ ಗುರಿಯಾಗಬೇಕಾಗುತ್ತದೆ.

ವ್ಯಕ್ತಿಯನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕಾದರೆ ಅಥವಾ ಪರೀಕ್ಷಿಸಬೇಕಾದರೆ ಅಗತ್ಯವಾಗಿ ಬೇಕಾಗಿರುವುದು ಸರಿಯಾದ ನಿಟ್ಟಿನಿಂದ ಆತನನ್ನು ಮತ್ತು ಆತನ ಕೆಲಸ ಕಾರ್ಯಗಳನ್ನು ಗಮನಿಸುವುದು. ಹಾಗೆ ಗಮನಿಸಿದಾಗ ಆತನ ಎಲ್ಲ ಗುಣ–ದೋಷಗಳು ಬಹಿರಂಗವಾಗುತ್ತವೆ. ಶೇಕ್ಸಪಿಯರ್ ಅಚ್ಚರಿ ಪಡುವಂತಹ ಚತುರನಾಗಿದ್ದ. ಆತ ಪ್ರತಿಯೊಂದು ವಸ್ತು ಮತ್ತು ಪ್ರತಿಯೊಂದು ಘಟನೆಗಳನ್ನು ನಾಟಕಗಳನ್ನಾಗಿ ಪರಿವರ್ತಿಸುತ್ತಿದ್ದ.

---

ಕಗ್ಗದ ಬೆಳಕಿನಲ್ಲಿ

ಲೇ: ವಿ॥ ಜಿ. ಎಸ್. ನಟೇಶ್

# ಮನಸ್ಸು ಸದಾ ಕುದಿಯುತ್ತಿರುವುದೇಕೆ?

**ಬೆದಕಾಟ ಬದುಕೆಲ್ಲ ; ಚಣಚಣವು ಹೊಸ ಹಸಿವು**
**ಅದಕಾಗಿ ಇದಕಾಗಿ ಮತ್ತೊಂದಕಾಗಿ।**
**ಅಧಿಕಾರ ಸಿರಿ ಸೊಗಸು ಕೀರ್ತಿಗಳ ನೆನೆದುಮನ**
**ಕುದಿಯುತಿಹುದಾವಗಂ–ಮಂಕುತಿಮ್ಮ॥**

ಈ ಬದುಕೆಲ್ಲ ಹುಡುಕಾಟದಲ್ಲಿ ಕಳೆದುಹೋಗುತ್ತದೆ. ಅದಕ್ಕಾಗಿ, ಇದಕ್ಕಾಗಿ ಮತ್ತೊಂದನ್ನು ಪಡೆಯುವುದಕ್ಕಾಗಿ ಕ್ಷಣಕ್ಷಣವೂ ಹೊಸ ಹಸಿವು ಉಂಟಾಗುತ್ತಲೇ ಇರುತ್ತದೆ. ಅಧಿಕಾರ, ಸಂಪತ್ತು, ಸೌಂದರ್ಯ, ಕೀರ್ತಿ ಇವುಗಳನ್ನು ನೆನೆಯುತ್ತಾ ಮನಸ್ಸು ಯಾವಾಗಲೂ ಕುದಿಯುತ್ತಲೇ ಇರುತ್ತದೆ.

ನಮ್ಮ ಜೀವನವೆಲ್ಲ ಹುಡುಕಾಟದಲ್ಲೇ ಮುಗಿದುಹೋಗುತ್ತದೆ. ಯಾವ ವಸ್ತುವಿನಲ್ಲಿಯೂ ನರನ ಮನಸ್ಸು ನೆಲೆಯಾಗಿ ನಿಲ್ಲುವುದಿಲ್ಲ. ಕೆಲವೊಮ್ಮೆ ಯಾವುದನ್ನೂ ಹುಡುಕುತ್ತೇವೆಯೆಂಬ ಅರಿವೇ ಇರುವುದಿಲ್ಲ. ಅದನ್ನು ಯಾಕಾಗಿ ಹುಡುಕುತ್ತೇವೆಯೆಂಬುದೂ

ಗೊತ್ತಿರುವುದಿಲ್ಲ. ಕ್ಷಣಕ್ಷಣಕ್ಕೂ ಮಾನವನನ್ನು ಹೊಸಹೊಸ ಹಸಿವುಗಳು ಕಾಡುತ್ತಾ ಹೋಗುತ್ತವೆ. ಅದಾದ ಮೇಲೆ ಇದು, ಇದಾದ ಮೇಲೆ ಮತ್ತೊಂದು. ಮನುಷ್ಯನ ಮನಸ್ಸು ಅಧಿಕಾರ, ಸಂಪತ್ತು, ಸೌಂದರ್ಯ, ಕೀರ್ತಿಗಳನ್ನು ನೆನೆಯುತ್ತಾ ಕುದಿಯುತ್ತಲೇ ಇರುತ್ತದೆ. ಒಂದು ಅಧಿಕಾರ ಸಿಕ್ಕರೆ ಅದರಲ್ಲಿಯೇ ಅವನು ತೃಪ್ತಿಹೊಂದುವುದಿಲ್ಲ. ಅದಕ್ಕಿಂತ ಹೆಚ್ಚಿನ ಅಧಿಕಾರಕ್ಕಾಗಿ ಹೆಣಗಾಡುತ್ತಾನೆ. ಒಂದು ಸಂಪತ್ತು ಬಂದ ಮೇಲೆ ಇನ್ನೊಂದು ಸಂಪತ್ತನ್ನು ಪಡೆಯಲು ಕಾತರನಾಗುತ್ತಾನೆ. ಈಗ ಒಂದು ಸುಂದರವೆನಿಸಿದರೆ ಇನ್ನೊಮ್ಮೆ ಇನ್ನೊಂದು ಸುಂದರವಾಗಿ ಕಾಣತೊಡಗುತ್ತದೆ. ಒಂದು ಸಲ ಕೀರ್ತಿಯನ್ನು ಪಡೆದ ಮೇಲೆ ಅದಕ್ಕಿಂತ ಹೆಚ್ಚಿನ ಕೀರ್ತಿಗಾಗಿ ಹವಣಿಸುತ್ತಾನೆ. ಹಾಗಾದರೆ ಅವನು ಒಂದು ಕಡೆ ನೆಲೆ ನಿಲ್ಲುವುದು ಯಾವಾಗ?

**ಮನುಷ್ಯ ಯಾವುದರಿಂದ ತೃಪ್ತಿ ಪಡೆದಾನು?**

**ದನಸಿಂಗ ಹುಲಿಹಕ್ಕಿ ಹಾವು ಮೀನ್‌ಗಳಿಗೆಲ್ಲ**
**ಇನಿಸುಣಿಸು ಬೆದೆ ಬೆದರು-ಅಷ್ಟೆ ಜೀವಿತವು।**
**ಮನುಜನೆಂತನಿತರಿಂ ತೃಪ್ತಿವಡೆವನವಂಗೆ**
**ಕ್ಷಣ ಕ್ಷಣವು ಹೊಸ ಹಸಿವು- ಮಂಕುತಿಮ್ಮ॥**

ಹಸು, ಸಿಂಹ, ಹುಲಿ, ಹಕ್ಕಿ, ಹಾವು, ಮೀನು ಇವುಗಳಿಗೆಲ್ಲಾ ಒಂದಷ್ಟು ಊಟ, ವಂಶೋದ್ಧಾರದ ಪ್ರವೃತ್ತಿ ಹಾಗೂ ಹೆದರಿಕೆ ಇವೇ ಜೀವನ. ಮನುಷ್ಯ ಇಷ್ಟರಲ್ಲೇ ತೃಪ್ತಿಪಡುತ್ತಾನೇನು? ಕ್ಷಣ ಕ್ಷಣಕ್ಕೂ ಹೊಸ ಹಸಿವು ಅವನನ್ನು ಕಾಡುತ್ತದೆ.

ಮನುಷ್ಯನ ಬದುಕಿಗೆ ಹೋಲಿಸಿದರೆ ಪಶುಪಕ್ಷಿಗಳ ಬದುಕು ಒಂದು ಇತಿಮಿತಿಗಳಿಗೊಳಪಟ್ಟಿರುತ್ತದೆ. ಹಸು, ಸಿಂಹ, ಹುಲಿ, ಹಕ್ಕಿ, ಹಾವು, ಮೀನು ಮುಂತಾದವುಗಳಿಗೆ ಒಂದಿಷ್ಟು ಆಹಾರ, ವಂಶೋದ್ಧಾರ, ಒಂದಷ್ಟು ಹೆದರಿಕೆ. ಇವುಗಳಿಂದಲೇ ಅವುಗಳ ಬದುಕು ಪೂರ್ಣವಾಗಿ ಬಿಡುತ್ತದೆ. ಇನ್ನಷ್ಟು ಮೀರಿ ಅವೆಂದೂ ಹೋಗುವುದಿಲ್ಲ. ಆದರೆ ಮನುಷ್ಯ ಹಾಗಲ್ಲ. ಇಷ್ಟರಿಂದಲೇ ತೃಪ್ತಿಪಡುವುದಿಲ್ಲ. ತನ್ನ ಹೊಟ್ಟೆ ತುಂಬಿದ್ದರೂ ಅದನ್ನು ಸಂಗ್ರಹಿಸಿಡಲು ಪ್ರಯತ್ನ ಮಾಡುತ್ತಾನೆ. ಅವನ ಕಾಮನೆಗಳು ಕೇವಲ ವಂಶೋದ್ಧಾರಕ್ಕೆ ಸೀಮಿತವಾಗಿರುವುದಿಲ್ಲ. ಅವನಿಗೆ ಕ್ಷಣ ಕ್ಷಣಕ್ಕೂ ಹೊಸ ಹಸಿವೆಗಳು ಹುಟ್ಟುತ್ತವೆ. ಅವನದು ಒಂದು ರೀತಿಯ ವಿಚಿತ್ರ ಹಸಿವೆ. ಹೊಟ್ಟೆ ತುಂಬಿದ್ದರೂ, ಸಿರಿ ತುಂಬಿದ್ದರೂ, ಸಕಲ ಸೌಕರ್ಯಗಳಿದ್ದರೂ ಅವನ ಹಸಿವೆ ಇಂಗುವುದೇ ಇಲ್ಲ. ಇದರಿಂದಲೇ ಬದುಕಿನುದ್ದಕ್ಕೂ ಅವನಿಗೆ ಹತಾಶೆ ನಿರಾಸೆಗಳು, ಕಾಡುತ್ತಲೇ ಇರುತ್ತವೆ.

**ಮನುಷ್ಯನ ಏಳಿಗೆಗೆ ಕೊನೆಯೆಲ್ಲಿ?**

**ಮನಸು ಬೆಳೆದಂತೆಲ್ಲ ಹಸಿವು ಬೆಳೆಯುವುದಯ್ಯ**
**ತಣಿಸಲದನೊಗೆಯುವುದು ಬಗೆ ಬಗೆಯ ಯುಕ್ತಿ।**
**ಮನುಜನೇಳಿಗೆಯದರಿನ್; ಆ ಮನಸಿನೇಳಿಗೆಗೆ**
**ಕೊನೆಯೆಲ್ಲಿ? ಚಿಂತಿಸೆಲೊ?- ಮಂಕುತಿಮ್ಮ॥**

ಮನಸ್ಸು ಬೆಳೆದಂತೆಲ್ಲಾ ಹಸಿವು ಬೆಳೆಯುತ್ತದೆ. ಆ ಹಸಿವನ್ನು ತಣಿಸಲು ನಾನಾ ಯುಕ್ತಿಗಳನ್ನು ಅನುಸರಿಸುವುದು. ಅದರಿಂದ ಮನುಷ್ಯನ ಏಳಿಗೆ. ಆ ಮನಸ್ಸಿಗೆ ಏಳಿಗೆಗೆ ಕೊನೆಯೆಲ್ಲಿ ಎಂಬುದನ್ನು ಚಿಂತಿಸು.

ಮನುಷ್ಯನ ನಾನಾ ರೀತಿಯ ಹಸಿವೆಯ ಮೂಲ ಅವನ ಮನಸ್ಸು ಬೆಳೆಯುತ್ತಾ ಸಾಗುತ್ತದೆ. ಮನಸ್ಸು ಬೆಳೆದಂತೆಲ್ಲಾ ಹಸಿವು ಬೆಳೆಯುತ್ತಾ ಹೋಗುತ್ತದೆ. ಸಣ್ಣ ಮಕ್ಕಳ ಉಡುಗೆಗಳಿಗೆ ಜೇಬುಗಳಿರುವುದಿಲ್ಲ. ಅವು ಬಯಸುವುದು ಹೊಟ್ಟೆ ತುಂಬುವಷ್ಟು ಆಹಾರ, ಮನ ಬಂದಂತೆ ಆಟ ಇಷ್ಟನ್ನೇ. ಮಕ್ಕಳ ಮನಸ್ಸು ಬೆಳೆದಿರುವುದಿಲ್ಲ. ಅಂತೆಯೇ ಅವುಗಳ ಹಸಿವೆಯೂ ಸೀಮಿತವಾಗಿರುತ್ತದೆ. ಮಕ್ಕಳು ಬೆಳೆದಂತೆ ಅವುಗಳ ಬಟ್ಟೆಗಳಿಗೆ ಜೇಬುಗಳು ಬರತೊಡಗುತ್ತವೆ. ತಮ್ಮ ಆಸೆಗಳನ್ನು ಈಡೇರಿಸಿಕೊಳ್ಳಲು ಜೇಬನ್ನು ತುಂಬತೊಡಗುತ್ತವೆ. ಬೆಳೆದಂತೆಲ್ಲಾ ಜೇಬುಗಳ ಗಾತ್ರ ಹಾಗೂ ಸಂಖ್ಯೆಗಳು ಹೆಚ್ಚಾಗತೊಡಗುತ್ತವೆ. ಈ ಜೇಬುಗಳೇ ಆಸೆಯ ಗೂಡುಗಳು. ಹೀಗೆ ಮನಸ್ಸು ಬೆಳೆಯುತ್ತಾ ಹೋದಂತೆಲ್ಲಾ ಅವನ ಹಸಿವು ಬೆಳೆಯ ತೊಡಗುತ್ತದೆ. ಆ ಹಸಿವೆಯನ್ನು ಪೂರೈಸಿಕೊಳ್ಳಲು ಬಗೆ ಬಗೆಯ ತಂತ್ರಗಳನ್ನು ಹೆಣೆಯತೊಡಗುತ್ತಾನೆ. ನಾನಾ ರೀತಿಯ ಯುಕ್ತಿಗಳನ್ನು ಬಳಸ ತೊಡಗುತ್ತಾನೆ. ಡಿ.ವಿ.ಜಿ. ಯವರು ಮನುಷ್ಯನ ಏಳಿಗೆಯಿಂದ ಆ ಮನಸ್ಸಿನ ಏಳಿಗೆಗೆ ಕೊನೆ ಯಾವಾಗ ಚಿಂತಿಸು ಎಂಬುದಾಗಿ ನಮ್ಮನ್ನು ಇಲ್ಲಿ ಎಚ್ಚರಿಸಿದ್ದಾರೆ.

**ಮನುಷ್ಯನ ಆಸೆಗಳು ಕುಣಿಯುವುದು ಯಾವಾಗ?**

**ಒಣಗಿ ಬೇಸಗೆಯಿಂದ ಮಣ್ಣಾಗಿ ಕಾಣದಿಹ**
**ತೃಣ ಮೊಳೆಯುವುದು ಮರಳಿ ಹನಿಯೆರಡು ಬೀಳೆ।**
**ಅಣಗಿರ್ದು ನರನಾಶೆಯಂತು ಕಷ್ಟದ ದಿನದಿ**
**ಕುಣಿವುದನುಕೂಲ ಬರೆ-ಮಂಕುತಿಮ್ಮ॥**

ಬೇಸಗೆಯಿಂದಾಗಿ ಒಣಗಿ ಮಣ್ಣಾಗಿ ಕಾಣದಿರುವ ಹುಲ್ಲು ಮತ್ತೆ ಮಳೆಯ ಹನಿಯೆರಡು ಬಿದ್ದ ತಕ್ಷಣ ಮೊಳಕೆಯೊಡೆಯುವುದು. ಹಾಗೆಯೇ ಮನುಷ್ಯನ ಆಸೆ ಕಷ್ಟದ ದಿನಗಳಲ್ಲಿ ಅಡಗಿದ್ದು ಅನುಕೂಲ ಒದಗಿಬಂದಾಗ ಕುಣಿಯಲಾರಂಭಿಸುತ್ತದೆ.

ಗುಂಡಪ್ಪನವರು ಮನುಷ್ಯನ ಆಸೆಯನ್ನು ಇಲ್ಲಿ ತೃಣಕ್ಕೆ ಹೋಲಿಸಿದ್ದಾರೆ. ಬೇಸಗೆಯಲ್ಲಿ ಹುಲ್ಲು ಒಣಗಿ, ಮಣ್ಣಾಗಿ ಕಾಣದಂತೆ ಇರುತ್ತದೆ. ಆದರೆ ಮಳೆಯ ಹನಿ ಬಿದ್ದೊಡನೆ ಒಮ್ಮೆಲೇ ಅಂಕುರಿಸಿ ಮೇಲೆ ಬಂದುಬಿಡುತ್ತವೆ. ಹಾಗೆಯೇ ಮನುಷ್ಯನ ಆಸೆ ಕೂಡ. ಅವನಿಗೆ ತನ್ನ ಆಸೆಗಳನ್ನು ಪೂರೈಸಿಕೊಳ್ಳುವ ಶಕ್ತಿ ಇಲ್ಲದಿದ್ದಾಗ ಅವು ಅವನ ಅಂತರಂಗದಲ್ಲೆಲ್ಲೋ ಅಡಗಿಕೊಂಡಿರುತ್ತದೆ.



ಜಮೈಕಾದ ಪ್ರಮುಖ ಬಂದರು – ಕಿಂಗ್‌ಸ್ಟನ್

ಕಷ್ಟದ ದಿನಗಳಲ್ಲಿ ಅವು ಕಮರಿ ಹೋಗಿರುತ್ತವೆ. ಅನುಕೂಲ ಬಂದ ತಕ್ಷಣ ಅವನ ಆಸೆಗಳು ಕುಣಿಯತೊಡಗುತ್ತವೆ. ಅವುಗಳ ಹಿಂದೆ ಬಿದ್ದು ಮನುಷ್ಯನೂ ಕುಣಿಯತೊಡಗುತ್ತಾನೆ. ಈ ಕುಣಿತ ನಿರಂತರ ನಡದೇ ಇರುತ್ತದೆ.

**ಮೋಹದ ಪ್ರಭಾವ ಎಂಥದು?**

**ಸತ್ತವೆನ್ನಾಶೆಗಳು, ಗೆದ್ದೆನಿಂದ್ರಿಯಗಣವ**
**ಚಿತ್ತ ವಿನ್ನಲುಗದೆಂಬಾ ಜಂಭ ಬೇಡ,**
**ಎತ್ತಣಿಂದಲೊ ಗಾಳಿ ಮೋಹ ಬೀಜವ ತಂದು**
**ಬಿತ್ತಲಾರದೆ ಮನದಿ–ಮಂಕುತಿಮ್ಮ॥**

ನನ್ನ ಆಸೆಗಳು ಸತ್ತವು, ಇಂದ್ರಿಯ ಸಮೂಹವನ್ನು ಗೆದ್ದಿದ್ದೇನೆ. ಇನ್ನು ನನ್ನ ಮನಸ್ಸು ಕದಲುವುದಿಲ್ಲ ಎಂಬ ಅಹಂಕಾರ ಬೇಡ. ಎತ್ತ ಕಡೆಯಿಂದಲೋ ಗಾಳಿ ಮೋಹದ ಬೀಜವನ್ನು ತಂದು ಮನಸ್ಸಿನಲ್ಲಿ ಬಿತ್ತಲಾರದೇ?

ಮನುಷ್ಯ 'ತನ್ನ ಆಶೆಗಳು ಸತ್ತಿವೆ, ಇಂದ್ರಿಯಗಳನ್ನು ಗೆದ್ದಿದ್ದೇನೆ, ಇನ್ನು ನನ್ನ ಮನಸ್ಸು ಅಲುಗಾಡುವುದಿಲ್ಲ ಎಂದು ಜಂಭ ಪಡುವಂತಿಲ್ಲ. ಏಕೆಂದರೆ ಮೋಹ ಯಾವ ರೂಪದಲ್ಲಿ ಹೇಗೆ ಅವನನ್ನು ಆವರಿಸುತ್ತದೆ ಎಂಬುದನ್ನು ಊಹಿಸುವಂತಿಲ್ಲ. ಯಾವುದೋ ಗಾಳಿ, ಎತ್ತಲಿಂದಲೋ ಬೀಸಿ ಬಂದು ಮನುಷ್ಯನ ಮನಸ್ಸಿನಲ್ಲಿ ಮೋಹದ ಬೀಜವನ್ನು ಬಿತ್ತಿಬಿಡುತ್ತದೆ. ಮೋಹ ಅಂಕುರಿಸಿದೊಡನೆ ಮನುಷ್ಯನ ಮನಸ್ಸು ಚಂಚಲವಾಗುತ್ತದೆ. ಎಂತಹ ಮನಸ್ಸೂ ಕದಡಿಬಿಡುತ್ತದೆ. 'ಮುನೇರಪಿಯತಸ್ತಸ್ಯ ದರ್ಶನಾತ್ ಚಲತೇಮನಃ' ಮುನಿಯ ಮನಸ್ಸೂ ಮೋಹಕ್ಕೆ ಒಳಗಾಗಿ ಚಂಚಲವಾಗುತ್ತದೆ. ವಿಶ್ವಾಮಿತ್ರ ಮುನಿಯ ಕಠೋರವಾದ ತಪಸ್ಸು ಮೇನಕೆಯ ಲಾವಣ್ಯಕ್ಕೆ ಮನಸೋತು ಕರಗಿ ನೀರಾಗಿಬಿಟ್ಟಿತು. ಸೀತೆಯ ದೃಢಮನಸ್ಸೂ ಕೂಡ ಚಿನ್ನದ ಜಿಂಕೆಯತ್ತ ಹೊರಳಿ ಅನಾಹುತವನ್ನು ಆಹ್ವಾನಿಸಿಕೊಳ್ಳಲಿಲ್ಲವೆ?

---

ವಚನಭಾಗವತ

ಲೇ: ತ. ಸು. ಶಾಮರಾಯ

# ಕಲ್ಮಾಷಪಾದ

ಭಗೀರಥನ ಪೀಳಿಗೆಯಲ್ಲಿ ಅನೇಕ ಮಹಾಪುರುಷರು ಹುಟ್ಟಿ ಲೋಕಪ್ರಸಿದ್ಧರಾದರು. ನಳ ಚಕ್ರವರ್ತಿಗೆ ಗೆಳೆಯನಾಗಿ, ಅವನಿಗೆ ಅಕ್ಷವಿದ್ಯೆಯನ್ನು ಕಲಿಸಿ ಅವನಿಂದ ಅಶ್ವವಿದ್ಯೆಯನ್ನು ಕಲಿತ ಋತುಪರ್ಣನು ಈ ಪೀಳಿಗೆಯವನೇ. ಈತನ ಮರಿಮಗನ ಕಲ್ಮಾಷಪಾದರಾಯ. ಈತನ ನಿಜವಾದ ಹೆಸರು ಮಿತ್ರಸಹ ಎಂದು. ಈತನು ಮಡದಿಯಾದ ಮದಯಂತಿಯೊಡನೆ ಧರ್ಮದಿಂದ ರಾಜ್ಯಭಾರ ಮಾಡುತ್ತಾ ಮಹಾಶೂರನೆಂದು ವಿಖ್ಯಾತನಾಗಿದ್ದನು. ಒಮ್ಮೆ ಬೇಟೆಗಾಗಿ ಹೋಗಿದ್ದಾಗ ಸೋದರರಾದ ಇಬ್ಬರು ರಾಕ್ಷಸರು ಈತನನ್ನು ಬಂಧಿಸಿದರು. ಮಿತ್ರಸಹನು ಅವರೊಡನೆ ಯುದ್ಧ ಮಾಡಿ ಕೊಂದುಹಾಕಿದನು. ಇನ್ನೊಬ್ಬನು ಓಡಿಹೋಗಲು 'ಅವನೇನು ಮಹಾ' ಎಂದುಕೊಂಡು, ಉದಾಸೀನದಿಂದ ಅವನನ್ನು ಕೊಲ್ಲದೆ ಬಿಟ್ಟುಬಿಟ್ಟನು. ಹೀಗೆ ಉಳಿದುಕೊಂಡ ರಾಕ್ಷಸನು ತನ್ನ ಅಣ್ಣನನ್ನು ಕೊಂದವನ ಮೇಲೆ ಹಗೆ ತೀರಿಸಿಕೊಳ್ಳಬೇಕೆಂದು, ಅಡಿಗೆಯವನ ವೇಷದಿಂದ ಮಿತ್ರಸಹನ ಅರಮನೆಯಲ್ಲಿ ಸೇರಿಕೊಂಡ. ಹೀಗಿರಲು ಒಂದು ದಿನ ಕುಲಗುರುಗಳಾದ ವಸಿಷ್ಠ ಮಹರ್ಷಿಗಳು ರಾಜನ ಮನೆಗೆ ಊಟಕ್ಕೆ ಬಂದರು. ಇಂತಹ ಸಮಯವನ್ನೇ ಕಾಯುತ್ತಿದ್ದ ಆ ರಕ್ಕಸ ನರಮಾಂಸವನ್ನು ಬೇಯಿಸಿ ಅವರಿಗೆ ಬಡಿಸಿದ. ಅವನು ಬಡಿಸುತ್ತಿರುವಾಗಲೆ ವಸಿಷ್ಠರಿಗೆ ಅದು ನರಮಾಂಸವೆಂದು ಗೊತ್ತಾಗಿ ಹೋಯಿತು.. ಅವರು ಹಿಂದು ಮುಂದು ಆಲೋಚಿಸದೆ ಮಿತ್ರಸಹ ರಾಜನನ್ನು ರಾಕ್ಷಸನಾಗೆಂದು ಶಪಿಸಿದರು. ನಿರಪರಾಧಿಯಾದ ತನ್ನನ್ನು ಶಪಿಸಿದುದಕ್ಕಾಗಿ ರಾಜನಿಗೆ ರೇಗಿ ಹೋಯಿತು. ಆತನು ವಸಿಷ್ಠರಿಗೆ ಪ್ರತಿ ಶಾಪವನ್ನು ಕೊಡಬೇಕೆಂದು ನೀರನ್ನು ತೆಗೆದುಕೊಂಡು ಅಭಿಮಂತ್ರಿಸಿದ. ಅದನ್ನು ಕಂಡು, ರಾಣಿಯಾದ ಮದಯಂತಿ ಅತನ ಕೈಗಳನ್ನು ಭದ್ರವಾಗಿ ಹಿಡಿದುಕೊಂಡು 'ಸ್ವಾಮಿ, ಅವರು ಕುಲ ಗುರುಗಳು, ಅವರು ತಪ್ಪು ಮಾಡಿದರೂ ಅವರ ಮೇಲೆ ಕೋಪಗೊಳ್ಳುವುದು ತರವಲ್ಲ. ಈ ಶಾಪದ ನೀರನ್ನು ಕೆಳಕ್ಕೆ ಚೆಲ್ಲಿರಿ' ಎಂದಳು, ಆದರೆ ಅದನ್ನು ಎಲ್ಲಿ ಚೆಲ್ಲಬೇಕು? ಎಲ್ಲಿ ಚೆಲ್ಲಿದರೂ ಅಲ್ಲಿಯ ಜೀವಿಗಳಿಗೆ ಅಪಾಯ ! ಆದರಿಂದ ಮಿತ್ರಸಹನು ಆ ಮಂತ್ರಜಲವನ್ನು ತನ್ನ ಪಾದಗಳ ಮೇಲೆಯೇ ಸುರಿದುಕೊಂಡನು. ಒಡನೆಯೇ ಆ ಪಾದಗಳೆರಡೂ ಇದ್ದಲಿನಂತೆ ಕಪ್ಪಾದವು. ಅಂದಿನಿಂದ ಅತನಿಗೆ 'ಕಲ್ಮಾಷಪಾದ'ನೆಂದು ಹೆಸರಾಯಿತು. ಇದನ್ನು ಕಂಡು ವಸಿಷ್ಠ ಕಣ್ಣು ತೆರೆಯಿತು. ತಪ್ಪು ರಾಜನದಲ್ಲ, ಅಡಿಗೆಯವನ ವೇಷದಲ್ಲಿದ್ದ ರಾಕ್ಷಸನದು ಎಂಬುದೂ ಗೊತ್ತಾಯಿತು. ಅವರು ಪಶ್ಚಾತ್ತಾಪದಿಂದ, ಹನ್ನೆರಡು ವರ್ಷಗಳಾಗುತ್ತಲೆ ರಾಜನ ಶಾಪ ವಿಮೋಚನೆಯಾಗಲೆಂದು ಹರಸಿದರು.

ವಸಿಷ್ಠರ ಶಾಪಕ್ಕೆ ಅನುಸಾರವಾಗಿ ಕಲ್ಮಾಷಪಾದರಾಯನು ರಾಕ್ಷಸನಾಗಿ ಅಡವಿಯನ್ನು ಸೇರಿದ. ಅಲ್ಲಿ ಕೈಗೆ ಸಿಕ್ಕ ಮೃಗಗಳನ್ನು ತಿನ್ನುತ್ತಾ ಕಾಲ ಕಳೆಯುತ್ತಿರಲು, ಒಂದು ದಿನ ವನವಿಹಾರಕ್ಕೆಂದು ಬಂದಿದ್ದ ಬ್ರಾಹ್ಮಣ ದಂಪತಿಗಳು ಅವನ ಕಣ್ಣಿಗೆ ಬಿದ್ದರು. ಪುತ್ರಾರ್ಥಿಯಾದ ತನ್ನ ಮಡದಿಯೊಡನೆ ರತಿಕ್ರೀಡೆಗೆಂದು ಆ ಬ್ರಾಹ್ಮಣ ಸಿದ್ಧನಾಗುತ್ತಿರುವಾಗ ಕಲ್ಮಾಷಪಾದರಾಕ್ಷಸ ಅವನ ಪಾಲಿನ ಮೃತ್ಯುವಿನಂತೆ ಅವನನ್ನು ಹಿಡಿದ. ಆಗ ಅವನ ಮಡದಿ ಬಹು ದೈನ್ಯದಿಂದ ಆ ರಕ್ಕಸನನ್ನು ಕುರಿತು 'ಮಹಾನುಭಾವ, ನೀನು ಇಕ್ಷ್ವಾಕು ವಂಶದ ಚಕ್ರವರ್ತಿ, ರಾಕ್ಷಸನಲ್ಲ. ಕೇವಲ ಶಾಪದಿಂದ ರಾಕ್ಷಸನಾಗಿರುವೆ. ಮಹಾಪರಾಕ್ರಮಿಯಾದ ನೀನು ಈ ಬಡಬ್ರಾಹ್ಮಣನನ್ನು

ಏಕೆ ಕೊಲ್ಲುತ್ತಿ? ಮಹಾಪತಿವ್ರತೆಯಾದ ಮದಯಂತಿದೇವಿಯ ಪತಿ ನೀನು ; ಆಕೆಯ ಹೆಸರಿನಲ್ಲಿ ನಾನು ಪತಿಭಿಕ್ಷೆಯನ್ನು ನಮ್ಮನ್ನು ಮಕ್ಕಳಂತೆ ಕಾಪಾಡಬೇಕು. ನಿನಗೆ ತಿಳಿಯದ ಧರ್ಮ ಯಾವುದಿದೆ ? ವೇದಗಳನ್ನು ಓದಿ ಪರಮ ಸಾಧುವಾಗಿರುವ ಈ ಬ್ರಾಹ್ಮಣನನ್ನು ಕೊಲ್ಲುವುದು ಮಹಾಪಾಪ. ಇವನನ್ನು ಕೊಲ್ಲಬೇಡ. ನೀನು ಹಸಿವನ್ನು ತಡೆಯಲಾರೆಯಾದರೆ ಮೊದಲು ನನ್ನನಾದರೂ ತಿನ್ನು. ಆತನನ್ನು ಅಗಲಿ ನಾನು ಬದುಕಿರಲಾರೆ.' ಎಂದು ಬೇಡಿಕೊಂಡಳು. ಆದರೆ ಆಕೆಯ ಪ್ರಾರ್ಥನೆಯೆಲ್ಲ ಗೋರ್ಕಲ್ಲ ಮೇಲೆ ಮಳೆಗರೆದಂತಾಯಿತು. ರಾಕ್ಷಸನಾಗಿದ್ದ ಕಲ್ಮಾಷಪಾದನು, ಕ್ರೂರವಾದ ಹುಲಿ ಹಸುವಿನ ಮೇಲೆ ಹಾರುವಂತೆ, ಆ ಬ್ರಾಹ್ಮಣನ ಮೇಲೆ ಬಿದ್ದು, ಅವನನ್ನು ಮುರಿದು ತಿಂದು ಹಾಕಿದನು. ಇದನ್ನು ಕಂಡು ಆ ಹೆಣ್ಣು ಕಲ್ಲು ಕರಗುವಂತೆ ಗೋಳಾಡುತ್ತಾ 'ಪಾಪಿ ಕಾಮಕೇಳಿಗೆ ನಾನು ಬಯಸುತ್ತಿದ್ದ ನನ್ನ ಗಂಡನನ್ನು ಅನ್ಯಾಯವಾಗಿ ತಿಂದು ಹಾಕಿದೆಯಲ್ಲಾ, ನಿನಗೂ ಹಾಗೆಯೆ ಆಗಲಿ. ನೀನು ಹೆಂಡತಿಯೊಡನೆ ರಮಿಸಿದೊಡನೆ ಸತ್ತು ಹೋಗು' ಎಂದು ಶಪಿಸಿದಳು. ಅನಂತರ ಆ ರಕ್ಕಸನು ತಿಂದು ಉಳಿದಿದ್ದ ಗಂಡನ ಎಲುಬುಗಳನ್ನೆಲ್ಲ ಕೂಡಿಸಿಕೊಂಡು, ಅಗ್ನಿಪ್ರವೇಶ ಮಾಡಿದಳು.

ವಸಿಷ್ಠರು ಕೊಟ್ಟ ಶಾಪದ ಅವಧಿ ಮುಗಿಯಿತು. ಕಲ್ಮಾಷಪಾದನು ಶಾಪದಿಂದ ಬಿಡುಗಡೆಹೊಂದಿ ರಾಜಧಾನಿಗೆ ಹಿಂದಿರುಗಿದನು. ಬಹುಕಾಲ ಅಗಲಿದ್ದ ಮಡದಿಯನ್ನು ಕಂಡು ಆತನಿಗೆ ಕಾಮಾತುರವಾಯಿತು : ಮಡದಿಯನ್ನು ರತಿಸುಖಕ್ಕೆ ಕರೆದನು. ಆದರೆ ಮದಯಂತಿ ಆತನ ಪ್ರಯತ್ನವನ್ನು ನಿವಾರಿಸುತ್ತಾ, ಬ್ರಾಹ್ಮಣನ ಹೆಂಡತಿ ಕೊಟ್ಟಿದ್ದ ಶಾಪವನ್ನು ಜ್ಞಾಪಿಸಿದಳು. ಅಂದಿನಿಂದ ಕಲ್ಮಾಷ ಪಾದನು ಸ್ತ್ರೀಸಂಗವನ್ನು ಸಂಪೂರ್ಣವಾಗಿ ತ್ಯಜಿಸಿದನು. ಇದರಿಂದ ಆತನ ಸಂತತಿಯೆ ನಿಂತು ಹೋಗುವಂತಾಗಲು, ವಸಿಷ್ಠರ ಅನುಗ್ರಹದಿಂದ ಮದಯಂತಿಯು ಗರ್ಭಿಣಿಯಾದಳು. ಆದರೆ ವರ್ಷಗಳು ಏಳು ಕಳೆದರೂ ಹೆರಿಗೆಯಾಗಲಿಲ್ಲ. ಆಕೆಯ ವ್ಯಥೆಯನ್ನು ನೋಡಲಾರದೆ ಕಲ್ಮಾಷ ಪಾದನು ಒಂದು ಚೂಪಾದ ಕಲ್ಲಿನಿಂದ ಆಕೆಯ ಗರ್ಭವನ್ನು ಸೀಳಿದನು. ಒಡನೆಯೆ ಒಬ್ಬ ಮಗ ಹುಟ್ಟಿದನು. ಕಲ್ಲಿನ (ಅಶ್ಮ) ಗಾಯದಿಂದ ಹುಟ್ಟಿದವನಾದುದರಿಂದ ಅವನಿಗೆ ಅಶ್ಮಕನೆಂದು ಹೆಸರಾಯಿತು. ಅವನು ವಯಸ್ಕನಾದ ಮೇಲೆ ಕಲ್ಮಾಷಪಾದನು ಅವನಿಗೆ ರಾಜ್ಯವನ್ನು ವಹಿಸಿ ತಪೋನಿರತನಾದನು..

ಧರೆಗಿಳಿದ ದಿವ್ಯತೇಜ

ಲೇ: ಲ. ನ. ಶಾಸ್ತ್ರೀ

# ಸರ್ವಜ್ಞಪೀಠಾರೋಹಣ

ಆಚಾರ್ಯರನ್ನು ಉತ್ಸವದಲ್ಲಿ ಕರೆದೊಯ್ಯಲು ಸಿದ್ಧತೆಯಾಗಿತ್ತು. ಭೇರಿ, ತಂಬಟೆ, ಜಾಗಟೆ, ಕೊಂಬು, ಶಂಖವೇ ವೊದಲಾದ ಪಂಚಮಹಾ ವಾದ್ಯಗಳ ಮಂಗಳ ಧ್ವನಿಯಲ್ಲಿ ಮೆರವಣಿಗೆ ಹೊರಟಿತು. ದಾರಿಯುದ್ದಕ್ಕೂ ಸಾಲು ತೋರಣಗಳು, ಮಂಟಪಗಳು, ಧ್ವಜ ಪತಾಕೆಗಳು, ವಿಪ್ರಗೋಷ್ಠಿಗಳಿಂದ ವೇದಪಾರಾಯಣ, ವಟುಗಳಿಂದ ಉಪನಿಷತ್ ಪಾರಾಯಣ ನಡೆಯುತ್ತಿದ್ದವು. ಬ್ರಹ್ಮಗುಪ್ತನ ಅನುಯಾಯಿಗಳು ಶ್ರೀ ವಿಷ್ಣು ಸಹಸ್ರನಾಮವನ್ನು ಗಾನ ಮಾಡುತ್ತಿದ್ದರು. ಆ ದುರ್ಗಮವಾದ ಸ್ಥಳದಲ್ಲಿಯೂ ನೂರೂರು ಗಿರಿಜನ ಮಹಿಳೆಯರು ಆರತಿಗಳನ್ನು, ಕುಂಭಗಳನ್ನು ಹಿಡಿದು ಆಚಾರ್ಯರನ್ನು ಭಕ್ತಿಭಾವದಿಂದ ಎದುರ್ಗೊಂಡರು. ನಂದಿರಾಜನು ನಗಾರಿಯನ್ನು ಕೇಸರೀ ಧ್ವಜವನ್ನು ಧರಿಸಿ, ಗಂಭೀರವಾಗಿ ಹೆಜ್ಜೆ ಹಾಕುತ್ತಿದ್ದನು. ಆಚಾರ್ಯರ ಮುಂದೆ ಹಸ್ತಲಾಘವನ್ನಿತ್ತು ಕಾಶ್ಮೀರದ ಪಂಡಿತರು ಹಿಂದು ಮುಂದಾಗಿ ಹೆಜ್ಜೆ ಹಾಕುತ್ತಿದ್ದರು. ಆಚಾರ್ಯರ ಹಿಂದೆ ಚತುರ್ವೇದ ಮೂರ್ತಿಗಳಂತೆ, ಶ್ರೀ ಸುರೇಶ್ವರ, ಶ್ರೀ ಸನಂದನ, ಶ್ರೀ ಹಸ್ತಾಮಲಕ, ಶ್ರೀ ತೋಟಕಾಚಾರ್ಯರು ನಡೆದು ಬರುತ್ತಿದ್ದರು. ಅವರ ಹಿಂದೆ ನೂರಾರು ಜನ ಯತಿಗಳ ವೃಂದವಿತ್ತು. ಆಚಾರ್ಯರ ಎಡಬಲದಲ್ಲಿ ಚಾಮರವನ್ನು ಬೀಸುತ್ತ ಸದಾಶಿವ ಪರಮೇಶ್ವರರಿದ್ದರು. ಕಾಶಿಯ ರಾಮಶರ್ಮರು ಲಕ್ಷ್ಮಣಮಿಶ್ರರು ರಜತ ದಂಡವನ್ನು ಹಿಡಿದಿದ್ದರು. ಬ್ರಹ್ಮಗುಪ್ತನು ಶ್ವೇತಚ್ಛತ್ರವನ್ನು ಹಿಡಿದಿದ್ದನು. ದಾರಿಯುದ್ದಕ್ಕೂ ಜನ ಜಯಘೋಷ ಮಾಡುತ್ತಿದ್ದರು. ಮಹಿಳೆಯರು ಆರತಿ ಬೆಳಗುತ್ತಿದ್ದರು, ಹೂಮಳೆಗರೆಯುತ್ತಿದ್ದರು. ಆಚಾರ್ಯರ ಹೆಜ್ಜೆಯು ಬರುಬರುತ್ತಾ ನಿಧಾನವಾಯಿತು. ಅವರ ನೇತ್ರಗಳು ಅರ್ಧ ನಿಮಿಲೀತವಾದವು. ಅವರು ಸಮಾಧಿ ಸ್ಥಿತಿಗೆ ಹೋಗುತ್ತಿರುವಂತೆ ಶಿಷ್ಯರಿಗೆ ಕಾಣಿಸಿತು. ಗುರುದೇವರ ದೃಷ್ಟಿಯು ಅಂತರ್ಮುಖವಾದುದರಿಂದ, ಶಿಷ್ಯರು ಆಗಾಗ ಸ್ವಾಮಿ ಪರಾಕ್ ಸ್ವಾಮಿ ಪರಾಕ್ ಎಂದು ನುಡಿಯುತ್ತ ಅವರನ್ನು ಆಗಾಗ ಬಹಿರ್ಮುಖಗೊಳಿಸುತ್ತಿದ್ದರು. ಉತ್ಸವವು ನಿಧಾನವಗಿ ಸರ್ವಜ್ಞ ಪೀಠವಿದ್ದಂತಹ ಗುಡ್ಡದ ಬುಡಕ್ಕೆ ಬಂದು ಮುಟ್ಟಿತು.

ಅಲ್ಲಿ ಶ್ರೀ ಶಂಕರಾಚಾರ್ಯರ ಪಾದಗಳನ್ನು ಪಂಡಿತರು ತೊಳೆದರು. ಅಲ್ಲಿದ್ದ ನೂರರು ಜನ ಸನ್ಯಾಸಿಗಳು ಹರಹರ ಮಹಾದೇವ ಜಯ ಗುರು ಶಂಕರಾಚಾರ್ಯ ಎಂದು ಘೋಷಿಸುತ್ತಾ ಶ್ರೀಮದಾಚಾರ್ಯರನ್ನು ಸ್ವಾಗತಿಸಿದರು. ಪೀಠದ ಪಾದಸ್ಥಾನದಲ್ಲಿದ್ದ ಎತ್ತರವಾದ ಭೂಮಿಯನ್ನು ನಾಲ್ದೆಸೆಗಳಿಂದಲೂ ಆಯಾ ಪ್ರಾಂತ್ಯದ ಪಂಡಿತರು ಹತ್ತಿದರು. ಆಚಾರ್ಯರ ಶಿಷ್ಯತ್ರಯರೂ ಆಯಾ ದಿಕ್ಕುಗಳಿಂದಲೇ ಏರಿದರು. ಆಚಾರ್ಯರೂ ಸುರೇಶ್ವರರೂ ದಕ್ಷಿಣದ ಪಾವಟಿಗೆಗಳನ್ನು ನಿಧಾನವಾಗಿ ಹತ್ತಿದರು.

ಸರ್ವಜ್ಞಪೀಠದ ಬಳಿ ಬಂದು ನಿಂತ ಶ್ರೀ ಶಂಕರಾಚಾರ್ಯರ ಕಣ್ಣುಗಳಲ್ಲಿ ಆನಂದಾಶ್ರು ತುಂಬಿತ್ತು. ಭಗವಾನ ವೇದವ್ಯಾಸರನ್ನೂ, ಯೋಗೇಶ್ವರನಾದ ಶ್ರೀ ಕೃಷ್ಣನನ್ನೂ, ಗುರು ಶ್ರೀ ಗೋವಿಂದ ಭಗವತ್ಪಾದರನ್ನು ಸ್ಮರಿಸಿದರು. ದೇವಿ ಶ್ರೀ ಉಭಯ ಭಾರತಿಯರನ್ನು ಮನಸಾ ನಮಸ್ಕರಿಸಿದರು. ಶ್ರೀ ಶಾರದಾ ಪೀಠಕ್ಕೆ ಪೂಜೆಯನ್ನು ಸಲ್ಲಿಸಿದರು. ಶ್ರೀಪೀಠವನ್ನು ಬಲವಂದು ಭಕ್ತಿಯಿಂದ ಕಣ್ಣೊತ್ತಿಕೊಂಡು

ಅನಂತರ ಕಾಶ್ಮೀರದ ವೃದ್ಧ ಪಂಡಿತರು ಹಸ್ತಲಾಘನವನ್ನು ಕೊಡುತ್ತಿರಲು, ಆಚಾರ್ಯರು ಸರ್ವಜ್ಞ ಪೀಠವನ್ನು ಆರೋಹಿಸಿದರು. ಭೇರಿತಾಡನವಾಯಿತು. ಜಯಕಾರ ಮುಗಿಲನ್ನು ಮುಟ್ಟಿತು. ನಾಲ್ಕು ಹನಿ ಮಳೆಯೂ ಸುರಿದು, ಈ ಉತ್ಸವ ತನಗೂ ಮೆಚ್ಚಿತೆಂದು ನಿಸರ್ಗವು ಸೂಚಿಸಿತು. ತಂಗಾಳಿ ಆಹ್ಲಾದಕರವಾಗಿ ಬೀಸಿತು, ಹಕ್ಕಿಗಳು ಚಿಲಿಪಿಲಿ ಹಾಡಿದವು.

ಸರ್ವಜ್ಞ ಪೀಠದಲ್ಲಿ ರಾರಾಜಿಸಿದ ಜಗದ್ಗುರು ಶ್ರೀ ಶಂಕರಾ ಭಗವತ್ಪಾದರು:

"ಭರತಖಂಡವು ಧರ್ಮ ಭೂಮಿಯೂ, ಕರ್ಮ ಭಮಿಯೂ ಆಗಿದೆ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ, ಕಾಮರೂಪದಿಂದ ಬಾಹ್ಲೀಕದವರೆಗೆ ವ್ಯಾಪಿಸಿರುವ ಈ ಪುಣ್ಯ ಭೂಮಿಯಲ್ಲಿ ವೇದಾಂತ ಧರ್ಮದ ಶ್ವೇತಚತ್ರದ ಅಡಿಯಲ್ಲಿ ಹತ್ತಾರು ಮತ ಪಂಥಗಳು ಬಾಳುತ್ತಿವೆ. ನಾವು ಶೈವರಾಗಲಿ, ವೈಷ್ಣವರಾಗಲಿ, ಗಾಣಾಪತ್ಯ, ಸೂರ್ಯೋಪಾಸಕರಾಗಲಿ, ಶಕ್ತಿಪೂಜಕರಾಗಲಿ ಪ್ರಥಮತಃ ಭಾರತೀಯರು ವೈದಿಕ ಧರ್ಮೀಯರು. ನಮ್ಮ ಮತ ವಿಚಾರಣೆಗಳಿಗೆ ವೇದಗಳೇ ಆಧಾರ. ನಾವು ಶಿವ, ವಿಷ್ಣು, ದೇವಿ, ಸೂರ್ಯ, ಗಣಪತಿ, ಸುಬ್ರಹ್ಮಣ್ಯ ಮುಂತಾದ ನಮ್ಮ ನಮ್ಮ ಇಷ್ಟದೇವತೆಗಳನ್ನು ಆರಾಧಿಸಿದರೂ ಈ ಎಲ್ಲ ದೇವತೇಗಳೂ ಪರಬ್ರಹ್ಮದ ಸಗುಣರೂಪಗಳೇ ಆಗಿವೆ. ಇತರರ ಮತ, ಇತರರ ಉಪಾಸನಾ ದೇವತೆಗಳನ್ನೂ ಹಳಿಯದೆ, ನಿಂದಿಸದೆ, ನಾವು ನಮ್ಮ ನಮ್ಮ ಮತ ದೇವತೆಗಳ ಉಪಾಸನೆಯನ್ನು ಮಾಡಿಕೊಂಡು, ಆರ್ಷೇಯವಾದ ನಮ್ಮ ಸಂಸ್ಕೃತಿಯು ಬೋಧಿಸಿರುವ ಸತ್ಯ, ಪ್ರೀತಿ, ನ್ಯಾಯ, ಅಹಿಂಸೆ, ಸಹನೆ, ಅನಸೂಯೆ, ಪರೋಪಕಾರ, ತೃಪ್ತಿ, ಶಾಂತಿ ಮುಂತಾದ ನೈತಿಕ ಗುಣಗಳನ್ನು ಬೆಳೆಸಿಕೊಂಡು, ನಮ್ಮನ್ನ ರಕ್ಷಿಸುವ ಧರ್ಮವನ್ನು ನಾವು ರಕ್ಷಿಸೋಣ.

"ಸಮುದ್ರದಲ್ಲಿ ಏಳುವ ತರಂಗಗಳಂತೆ ಈ ಜಗತ್ತು ಬ್ರಹ್ಮದಲ್ಲಿ ತೋರುತ್ತಿದೆ. ಹೇಗೆ ಸಮುದ್ರವೇ ತರಂಗವಾಗಿ ತೋರುತ್ತದೋ, ಹಾಗೆಯೇ ಬ್ರಹ್ಮವೂ ಪ್ರಪಂಚವಾಗಿ ತೋರುತ್ತದೆ. ಹೇಗೆ ತರಂಗವು ಮರುಕ್ಷಣದಲ್ಲಿಯೇ ಸಮುದ್ರದಲ್ಲಿ ಅಡುಗುತ್ತದೆಯೋ ಹಾಗೆಯೇ ಪ್ರಪಂಚವು ಬ್ರಹ್ಮದಲ್ಲಿ ಅಡಗುತ್ತದೆ. ಹೇಗೆ ಸಮುದ್ರದ ಸ್ಥಿರವೋ ಹಾಗಯೇ ಬ್ರಹ್ಮವು ಸ್ಥಿರ, ಸತ್ಯ. ಆದ್ದರಿಂದ ಬ್ರಹ್ಮವೊಂದೇ ಸತ್ಯ. ಈ ಜಗತ್ತು ಮಿಥ್ಯಾ. ತರಂಗಗಳಂತೆಯೇ ಈ ಜಗತ್ತು ತೋರಿ ಅಡಗುತ್ತದೆ. ಆದ್ದರಿಂದ ಇದು ಸತ್ಯವಲ್ಲ, ಮಿಥ್ಯಾ. ಇದಕ್ಕೆ ಆಧಾರವಾದ ಸಮುದ್ರವು ಸತ್ಯ. ಸ್ವಪ್ನವು ಅದನ್ನು ಕಾಣುತ್ತಿರುವಷ್ಟು ಕಾಲವೂ, ನಮಗೆ ಸತ್ಯವಾಗಿರುತ್ತವೆ. ಅದನ್ನು ಕಾಣುತ್ತಿರುವಾಗ ಇದು ಕನಸು ಸತ್ಯವಲ್ಲ ಎಂಬರಿವು ನಮಗೆ ಇರುವುದಿಲ್ಲ. ಅದು ಪ್ರಾತಿಭಾಸಿಕ ಸತ್ಯ. ಕನಸಿನಿಂದ ಎಚ್ಚರವಾದಾಗ ಇದು ದಿಟವಲ್ಲ ತೋರಿಕೆ ಮಿಥ್ಯಾ ಎಂದು ನಮಗೆ ಮನದಟ್ಟಾಗುತ್ತದೆ. ಕನಸಿನ ಪ್ರಾತಿಭಾಸಿಕ ಸತ್ಯವು, ಎಚ್ಚರದ ವ್ಯಾವಹಾರಿಕ ಸತ್ಯದ ದೃಷ್ಟಿಯಿಂದ ಮಿಥ್ಯವಾಗುತ್ತದೆ. ಹಾಗೆಯೇ ಈ ಎಚ್ಚರದ ವ್ಯಾವಹಾರಿಕ ಸತ್ಯವು, ಶ್ರೇಷ್ಠತಮವಾದ ಪಾರಮಾರ್ಥಿಕ ಸತ್ಯದ–ಎಚ್ಚರದ ಗಡಿಯಾಚೆಯ ಇಂದ್ರಿಯಾತೀತವಾದ ಅನುಭಾವದ ದೃಷ್ಟಿಯಿಂದ ಮಿಥ್ಯವಾಗುತ್ತದೆ.

"ಈ ವ್ಯಾವಹಾರಿಕ ಜಗತ್ತಿನಲ್ಲಿ ನಾವು ಇರುವವರೆಗೆ, ಇಲ್ಲಿನ ವಿಧಿ, ನಿಯಮಗಳನ್ನು ಫಲಿಸಲೇಬೇಕು. ಈ ವಿಧಿ ನಿಯಮಗಳನ್ನು ವೇದಶಾಸ್ತ್ರಗಳು, ಸ್ಮೃತಿಗಳೂ ನಮಗೆ ಬೋಧಿಸುತ್ತವೆ. ಇವುಗಳನ್ನು ಪಾಲಿಸುತ್ತ, ಹಾಗೆಯೇ ನಮ್ಮ ಆಧ್ಯಾತ್ಮಿಕ ಧ್ಯೇಯವನ್ನು ಮುಟ್ಟಲು ಈ ಶಾಸ್ತ್ರಗಳು ಬೋಧಿಸುವ ಮಾರ್ಗವನ್ನು ಅನುಸರಿಸಿ, ಸಾಧನೆಯನ್ನು ನಡೆಸುತ್ತ, ಎಲ್ಲರೂ ಸತ್ಯದೆಡೆಗೆ ಬ್ರಹ್ಮ ಸಾಕ್ಷಾತ್ಕಾರದೆಡೆಗೆ ಸಾಗಬೇಕು. ಈ ಜಗತ್ತು ಮಿಥ್ಯಾ, ಈ ಮಿಥ್ಯಾ ಶಾಸ್ತ್ರಗಳು ಬೋಧಿಸುವ ಮಾರ್ಗವನ್ನು ಅನುಸರಿಸುವುದರಿಂದ, ಸತ್ಯದ ದರ್ಶನವಾಗಲು ಸಾಧ್ಯವೇ? ಎಂಬ ಶಂಕೆ ಬೇಡ. ನಾವು, ಕನಸಿನಲ್ಲಿ ಸಿಂಹವೋ, ಸಲಗವೋ ಬೆನ್ನಟ್ಟಿ ಬಂದಾಗ, ಹೆದರಿ ಓಡುತ್ತ, ಓಡುತ್ತ ಇದ್ದಕ್ಕಿದಂತೆಯೇ ಎಚ್ಚರದ ಸ್ಥಿತಿಗೆ ಬರುವುದಿಲ್ಲವೇ? ಹಾಗೆಯೇ ಶಾಸ್ತ್ರಗಳ ಪ್ರಯೋಜನವು ಸಹ, ನಮ್ಮನ್ನು ಈ ಮಿಥ್ಯಾ ಪ್ರಪಂಚದಿಂದ ದಾಟಿಸಿ ಪಾರಮಾರ್ಥಿಕ ತತ್ತ್ವದತ್ತ ಒಯ್ಯಬಲ್ಲವು. ಎಚ್ಚರದ ಸ್ಥಿತಿಯಲ್ಲಿ ಇದ್ದಾಗಲೂ, ಬಿಸಿಲಲ್ಲಿ ಕಾಣುವಂತಹ ಮರೀಚಿಕೆ–ನೀರಿನ ಪ್ರಾತಿಭಾಸಿಕ ತೋರಿಕೆ–ಅಸತ್, ಮಿಥ್ಯಾ ಎಂಬುದು ನಮಗೆ ತಿಳಿಯುತ್ತದೆ. ಹಾಗೆಯೇ ಆತ್ಮ ಜ್ಞಾನಿಗೆ ಈ ಜಗತ್ತು ಅಸತ್, ಮಿಥ್ಯಾ.

"ಇಂದ್ರಿಯಾತೀತವೂ, ನಿರ್ಗುಣವೂ, ನಿರಾಕಾರವೂ, ಏಕಮೇವಾದ್ವೀತಿಯವೂ ಆದ ಪರಬ್ರಹ್ಮವನ್ನು, ಸತ್‌ಚಿತ್ ಮತ್ತು ಆನಂದ ಎಂದು ನಮ್ಮ ದ್ರಷ್ಟಾರರು ಕಂಡುಕೊಂಡಿದ್ದಾರೆ. ಈ ನಿರ್ಗುಣ ಬ್ರಹ್ಮದ ಉಪಾಸನೆಯು, ಎಲ್ಲರಿಗೂ ತೀರಾ ಕಷ್ಟ ಸಾಧ್ಯವಾದುದರಿಂದ, ಸುಲಭವಾದ ಸಗುಣ ಬ್ರಹ್ಮದ ಉಪಾಸನೆಯನ್ನು ನಮ್ಮ ಪೂರ್ವದ ಋಷಿಗಳು ರೂಢಿಗೆ ತಂದರು. ಪರಬ್ರಹ್ಮವು ತನ್ನ ಶಕ್ತಿಯಾದ ಮಾಯೆಯ ಸಂಪರ್ಕದಿಂದ, ಬ್ರಹ್ಮ, ವಿಷ್ಣು, ಶಿವ ಇತ್ಯಾದಿ ನಾನಾ ನಾಮರೂಪಗಳನ್ನುತಳೆಯುತ್ತದೆ. ಈ ದೇವತೆಗಳಿಂದ ಪ್ರಾರಂಭಿಸಿ ಅತ್ಯಂತ ಸಣ್ಣವಾದ ಕ್ರಿಮಿಯವರೆಗೆ ಎಲ್ಲ ಜೀವಗಳಲ್ಲಿಯೂ, ಜಡವಸ್ತುಗಲಲ್ಲಿಯೂ ಎಲ್ಲೆಲ್ಲಿಯೂ ವ್ಯಾಪಿಸಿರುವ ಚೈತನ್ಯ ಒಂದೇ ಆಗಿದೆ:

**'ಏಕಂಸತ್ ವಿಪ್ರಾ ಬಹುಧಾ ವದಂತಿ**
**ಏಕೋದೇವಃ ಸರ್ವಭೂತೇಷು ಗೂಢಃ**
**ಸರ್ವವ್ಯಾಪೀ ಸರ್ವಭೂತಾಂತರಾತ್ಮ।**
**ಕರ್ಮಾಧ್ಯಕ್ಷಃ ಸರ್ವ ಭೂತಾದಿ ವಾಸಃ**
**ಸಾಕ್ಷಿ ಚೇತಾ ಕೇವಲೋ ನಿರ್ಗುಣಶ್ಚ॥**

॥ ಪರಮಾರ್ಥ ತತ್ತ್ವವೊಂದೇ ಆಗಿದೆ, ಅದು ಪರಬ್ರಹ್ಮ. ಉಳಿದ ಎಲ್ಲಾ ದೇವ ದೇವಿಯರು ವ್ಯವಹಾರ ಜಗತ್ತಿನ ತತ್ತ್ವಗಳು. ನಾಮರೂಪಗಳಿಂದ ನಾವು ಈ ದೇವತೆಗಳನ್ನು ಉಪಾಸನೆ ಮಾಡಿ, ತನ್ಮೂಲಕ ನಾವು ಆತ್ಮೈಕ್ಯವನ್ನು ಸಾಕ್ಷಾತ್ಕರಿಸಿಕೊಳ್ಳಬೇಕು.

॥ ಸಾಧನೆಯ ಸೀಮೆಯಲ್ಲಿ ಮಾತ್ರ ನಾಮರೂಪಗಳು, ಸಿದ್ಧಿಯ ಹಂತದಲ್ಲಿ ಈ ನಾಮರೂಪಗಳೆಲ್ಲವೂ ಕರಗಿ ಸಚ್ಚಿದಾನಂದ ಸ್ವರೂಪವಾದ ಪರಬ್ರಹ್ಮವೇ ನಾನೆಂಬ ಅನುಭವವು ಉಂಟಾಗುತ್ತದೆ. ಪರಮಾರ್ಥ ತತ್ತ್ವವನ್ನು ನಾಮರೂಪಗಳುಳ್ಳ ಶಿವ, ವಿಷ್ಣು, ದೇವಿ, ಗಣಪತಿ, ಸೂರ್ಯ, ಸುಬ್ರಹ್ಮಣ್ಯ ಎಂದು ಯಾವುದೊಂದು ಹೆಸರಿನಿಂದಲೂ ಕರೆಯದೆ, 'ಬ್ರಹ್ಮ' ಎಂದು ಕರೆಯುವುದು ಇದೇ ಕಾರಣಕ್ಕಾಗಿ, ಅದು ನಾಮ ರೂಪ ರಹಿತವಾದದ್ದು ನಮ್ಮ ಇಂದ್ರಿಯಗಳಿಂದ, ವಾಕ್ಕಿನಿಂದ ಮತ್ತು ಮನಸ್ಸಿನಿಂದ ಅರುಯಲಾಗದ ತತ್ತ್ವ ಅದು. ಕೇವಲ ಇಂದ್ರಿಯಾತೀತವಾದ ಅಪರೋಕ್ಷ ಜ್ಞಾನದಿಂದ, ಅನುಭಾವದಿಂದಲೇ ಅರಿಯಲ್ಪಡಬೇಕಾದ ಏಕೈಕ ತತ್ತ್ವ.

"ಇದರ ಅರಿವಿನಿಂದ ಅಪರೋಕ್ಷ ಶೋಕ ಮತ್ತು ಮೋಹಗಳ ನಿವೃತ್ತಿಯಾಗುತ್ತದೆ. ಈ ದಿವ್ಯಸ್ಥಿತಿಯಲ್ಲಿ ದ್ವೈತವಿಲ್ಲ ಸರ್ವವು ಅದ್ವೈತವಾಗಿರುತ್ತದೆ.

**ತತ್ರಕೋಮೋಹಃ? ಕಶ್ಶೋಕಃ?।**
**ಏಕತ್ವ ಮನುಪಶ್ಯತ।**
**ನೇಹನಾನಾಸ್ತಿ ಕಿಂಚನ।**
**ಯಥಾನದ್ಯಾಃ ಸ್ಯಂದಮಾನಾ ಸಮುದ್ರೇಸ್ತಂ ಗಚ್ಛಂತಿ ನಾಮರೂಪೇ ವಿಹಾಯ।**
**ತಥಾವಿದ್ಯಾಃನ್ನಾಮರೂ ಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿಸರ್ವಂ॥**
**ಯತೋವಾ ಇಮಾನಿ ಭೂತಾನಿ ಜಾಯಂತೇ।**
**ಯೇನಜಾತಾನಿ ಜೀವಂತಿ।**
**ಯತ್ ಪ್ರಯಂತ್ಯಭಿ ಸಂವಿಶಂತಿ।**
**ತದ್ವಿಜಿಜ್ಞಾಸಸ್ವ, ತತ್ ಬ್ರಹ್ಮೇತಿ॥**

ಎನ್ನುತ್ತವೆ ಉಪನಿಷತ್ತುಗಳು. ಆ ಪರಬ್ರಹ್ಮ ತತ್ತ್ವವನ್ನು ಉಪಾಸಿಸಿ, ಎಲ್ಲರೂ 'ಅದೇ' ಬ್ರಹ್ಮವೇ ಆಗಬೇಕು. ಸರ್ವಂಶಿವಮಸ್ತು ಎಂದು ಹೇಳಿ ಆಚಾರ್ಯರು ಪರಿಸಮಾಪ್ತಿ ಮಾಡಿದರು. ಆಚಾರ್ಯರು ತಮ್ಮೆದುರು ಕುಳಿತಿದ್ದ ಶ್ರೋತೃವೃಂದಕ್ಕೆ ಅಮೃತ ಧಾರೆಯಂತೆ ತಮ್ಮ ಉಪದೇಶಗಳನ್ನು ಅನುಗ್ರಹಿಸಿದರು, ಎಲ್ಲರೂ ಬಹುಕಾಲ ತನ್ಮಯರಾಗಿದ್ದರು.

ಶಾರದಾ ಕ್ಷೇತ್ರದಲ್ಲಿಯೇ ಹಲವಾರು ದಿನಗಳ ಕಾಲ ಇದ್ದ ಆಚಾರ್ಯರನ್ನು, ಬಹುಜನ ಪಂಡಿತರು ಭೇಟಿಮಾಡಿ ತಮ್ಮ ತಮ್ಮ ಸಂದೇಹಗಳನ್ನು ಪರಿಹರಿಸಿಕೊಂಡರು. ಸಾಧನಾಪಥವನ್ನು ಅವರಿಂದ ಕೇಳಿ ತಿಳಿದುಕೊಂಡರು. ಅನೇಕ ಜನ ಶ್ರೀ ವಿದ್ಯಾಮಂತ್ರೋಪದೇಶವನ್ನು, ಆಧ್ಯಾತ್ಮಿಕ ಸಾಧನೆಗೆ ಅಡ್ಡಿಯಾಗಿರುವ ಲೌಕಿಕ ತಾಪತ್ರಯ ನಿವಾರಣೆಗಾಗಿಯು ಹಲವು ಜನ ಅವರಿಂದ ಮಂತ್ರೋಪದೇಶವನ್ನು ಪಡೆದುಕೊಂಡರು.

ಆಚಾರ್ಯರು ಶಾರದಾ ಕ್ಷೇತ್ರದಲ್ಲಿ ಒಂದೆರಡು ಮಾಸಗಳ ಕಾಲವಿದ್ದು ಹಲವಾರು ಸ್ತೋತ್ರಗಳನ್ನೂ, ಶ್ರೀ ಸೌಂದರ್ಯಲಹರೀಯನ್ನೂ ರಚಿಸಿ ದೇವಿ ಶಾರದೆಗೆ ಸಮರ್ಪಿಸಿದರು. ಕಾಶ್ಮೀರದಲ್ಲಿ ಸ್ವಲ್ಪ ಕಾಲ ಮಾತ್ರ ಸಂಚರಿಸಿದ ಆಚಾರ್ಯರು, ಶ್ರೀ ಶಾರದಾ ಕ್ಷೇತ್ರದಲ್ಲಿಯೇ ಆತ್ಮಾರಾಮನಾಗಿದ್ದು, ಕಾಮರೂಪದಲ್ಲಿದ್ದಾಗ ಪ್ರಾರಂಭಿಸಿದ್ದ ಪ್ರಪಂಚಸಾರ ಗ್ರಂಥವನ್ನು ಪರಿಸಮಾಪ್ತಿ ಮಾಡಿದರು.

ಆಚಾರ್ಯರು ತಮ್ಮ ದಿಗ್ವಿಜಯವನ್ನು ಸಂಪೂರ್ಣ ಮಾಡಿಕೊಂಡು ಬದರೀ ಕ್ಷೇತ್ರಕ್ಕೆ ಪ್ರಯಾಣ ಬೆಳೆಸಿದರು. ಅವರನ್ನು ಭಕ್ತಿಶ್ರದ್ಧೆಯಿಂದ ಬೀಳ್ಕೊಟ್ಟ ಜನ, ಶ್ರೀ ಗುರುವಿನ ಸ್ಮರಣೆಯು ತಮಗೆ ಸದಾ ಆಗುತ್ತಿರುವಂತೆ ಅವರಿದ್ದ ಎತ್ತರವಾದ ಆ ಪ್ರದೇಶವನ್ನೆಲ್ಲಾ 'ಶ್ರೀ ಶಂಕರಾಚಾರ್ಯ ಪರ್ವತ' ಎಂದು ನಾಮಕರಣ ಮಾಡಿದರು.

ಅನೋ ಬದ್ರಾಃ ಕೃತವೋಯಂತು ವಿಶ್ವಥಃ

ಅಂತರ್ಜಾಲದಿಂದ ಪಡೆದದ್ದು

# ಶ್ರಮದ ಫಲ

ಉದಯನೆಂಬ ರಾಜನು ಉದಯಗಿರಿ ರಾಜ್ಯವನ್ನು ಆಳುತ್ತಿದ್ದನು. ರಾಜನು ಪ್ರತ್ಯಕ್ಷ ದೇವರಂತೆ ತನ್ನ ಪ್ರಜೆಗಳನ್ನು ತನ್ನ ಮಕ್ಕಳಿಗಿಂತಲೂ ಹೆಚ್ಚಾಗಿ ನೋಡಿಕೋಳ್ಳುತ್ತಿದ್ದನು. ಅಲ್ಲದೆ ರಾಜನು ಬಹಳ ಬುದ್ಧಿವಂತನು ಕಷ್ಟಪಟ್ಟು ದುಡಿಯುವವರ ಮೇಲೆ ಮಮತೆ ಹೆಚ್ಚು. ಅದೇ ರೀತಿ ಸೋಮಾರಿಗಳ ಮೇಲೆ ಬಹಳ ಕೋಪ.

ಹೀಗೆ ಇರುತ್ತಿರಲು ರಾಜನಿಗೆ ಒಬ್ಬ ಪ್ರಾಮಾಣೀಕ ಮತ್ತು ಶ್ರಮಜೀವಿಯಾದ ನೌಕರನ ಅವಶ್ಯಕತೆ ಉಂಟಾಯಿತು. ಒಳ್ಳೆಯ ನಂಬಿಕೆಯಾದವನನ್ನು ಹೇಗೆ ಕಂಡುಹಿಡಿಯಬೇಕೆಂದು ಆಲೋಚಿಸಿದನು. ಕೊನೆಗೆ ಒಂದು ಉಪಾಯ ಹೊಳೆಯಿತು. ಕೂಡಲೇ ನೌಕರಿಯ ಬಗ್ಗೆ ಪ್ರಕಟಣೆ ಹೊರಡಿಸಿದನು.



ಯು. ಎ. ಇ ದ ಪ್ರಮುಖ ಬಂದರು – ಖೋರ್ ಪಕ್ಕಾನಾ

ರಾಜನ ಪ್ರಕಟಣೆಯನ್ನು ಕೇಳಿ ನಾಲ್ಕು ಜನರು ಅರಮನೆಗೆ ಬಂದರು. ರಾಜನು ಅವರ ಪೂರ್ವ ವಿಚಾರಗಳನ್ನು ತಿಳಿದುಕೊಂಡನು. ಅನಂತರ ಎಲ್ಲರಿಗೂ ಹಿಂದೊಂದು ಬಕೀಟು ಕೊಟ್ಟು, ಸಾಯಂಕಾಲದವರೆಗೂ ನೀರನ್ನು ಸೇದಿ ತೋಟದಲ್ಲಿದ್ದ ಇತರ ಬಕೀಟುಗಳಿಗೆ ಹಾಕಿರೆಂದು ತಿಳಿಸಿ ಅವರನ್ನು ಕಳುಹಿಸಿ ಕೊಟ್ಟನು.

ತೋಟದಲ್ಲಿ ನಾಲ್ಕು ಜನರೂ ನೀರನ್ನು ಸೇದಿ ಬಕೀಟುಗಳಿಗೆ ಹಾಕತೊಡಗಿದರು. ಆದರೆ ಬಕೀಟುಗಳು ತುಂಬಲಿಲ್ಲ. ಕಾರಣ ಬಕೀಟುಗಳಿಗೆ ಅನೇಕ ಚಿಕ್ಕ ಚಿಕ್ಕ ರಂಧ್ರಗಳಿದ್ದವು.

ಈ ವಿಚಾರವು ಅವರಿಗೆ ತಿಳಿದ ನಂತರ ಒಬ್ಬನು ಇನ್ನೊಬ್ಬನಿಗೆ "ಅಣ್ಣಾ ನೋಡಿದೆಯಾ ! ರಾಜನಿಗೆ ಹುಚ್ಚು ಹಿಡಿದಿರಬೇಕು" ಎಂದ.

ಅದಕ್ಕೆ ಇನ್ನೊಬ್ಬನು "ನೀನು ಹೇಳುವುದು ಸರಿ, ಇಲ್ಲದಿದ್ದರೆ ಈ ರೀತಿಯಾಗಿ ನೀರನ್ನು ಸೇದಿ ಈ ತೂತುಬಿದ್ದ ಬಕೀಟುಗಳನ್ನು ತುಂಬಿರೆಂದು ಎಂದಿಗೂ ಹೇಳುತ್ತಿರಲಿಲ್ಲ' ಎಂದನು.

ಮತ್ತೊಬ್ಬನು ಈ ಕೆಲಸಕ್ಕೆ ಬೆಂಕಿ ಹಾಕ. ರಾಜನು ನಮ್ಮನ್ನು ಬೇಕೆಂತಲೆ ಮೂರ್ಖರನ್ನು ಮಾಡಬೇಕೆಂದು ಆಗಲಾರದ ಈ ಕೆಲಸವನ್ನು ಕೊಟ್ಟಿರುವನು. ಇನ್ನು ಮುಂದೆ ಈ ಕೆಲಸ ಮಾಡಲು ಸಾಧ್ಯವಿಲ್ಲ. ಈಗ ಮನೆಗೆ ಹೋಗಿ ಊಟ ಮಾಡಿ ಸುಖವಾಗಿ ನಿದ್ದೆ ಮಾಡುವೆ' ಎಂದನು.

ನಾಲ್ಕನೆಯವನು "ಅಯ್ಯೋ ಅಣ್ಣಗಳೀರಾ! ನಿಮ್ಮ ಮಾತುಗಳನ್ನು ಕೇಳಿ ನನಗೆ ದುಃಖವಾಗುತ್ತದೆ. ಏಕೆಂದರೆ ರಾಜನು ಹೇಳಿದ ಕೆಲಸ ಮಾಡತಕ್ಕದ್ದು ನಮ್ಮ ಕರ್ತವ್ಯ. ಅದು ವ್ಯರ್ಥವೆನ್ನದೆ ನಮ್ಮ ಕಾರ್ಯವನ್ನು ಮಾಡಬೇಕು" ಎಂದನು.

ಅದಕ್ಕೆ ಮೂದಲನೆಯವನು–"ಬೇಕಾದರೆ ನೀನೊಬ್ಬನೇ ಮಾಡು ನಾವೂ ಹೋಗುತ್ತೇವೆ" ಎಂದು ಅವರು ಹೊರಟು ಹೋದರು.

ಕೊನೆಯವನು ಕರ್ತವ್ಯ ಮರೆಯದೆ ತನ್ನ ಕೆಲಸ ಮಾಡಲಾರಂಭಿಸಿದನು. ನೀರನ್ನು ಸೇದಿ ಬಕೀಟಿಗೆ ಹಾಕಲಾರಂಭಿಸಿದನು. ನೀರು ಬಕೀಟನಲ್ಲಿ ನಿಲ್ಲದೆ ಹೋಯಿತು. ಸಾಯಂಕಾಲವಾಗುತ್ತಾ ಬಂದಿತು. ಬಾವಿಯಲ್ಲಿ ನೀರು ಕಡಿಮೆಯಾಗುತ್ತ ಬಂದಿತು. ಆಕಸ್ಮಾತ್ ಅವನಿಗೆ ಬಾವಿಯಲ್ಲಿ ಪ್ರಕಾಶವಾಗಿ ಏನೋ ಕಂಡಿತು. ಅದೇನೆಂದು ನೋಡಲು, ಅದು ಒಂದು ವಜ್ರದ ಉಂಗುರವಾಗಿತ್ತು. ಕೂಡಲೇ ಅವನು ಅದನ್ನು ತೆಗೆದುಕೊಂಡು ಅರಮನೆಗೆ ಬಂದನು.

"ಈ ಉಂಗುರವು ನನಗೆ ಬಾವಿಯಲ್ಲಿ ಸಿಕ್ಕಿತ್ತು ಎಂದು ಹೇಳಿದನು.

ಅದಕ್ಕೆ ರಾಜನು–"ನಿನ್ನ ಜೊತೆಗಾರರು ಎಲ್ಲಿ?" ಎಂದು ಕೇಳಿದನು. ಅದಕ್ಕೆ ಅವನು ನಡೆದ ವಿಚಾರವನ್ನೆಲ್ಲಾ ತಿಳಿಸಿದನು.

ರಾಜನು ಆ ವಿಚಾರವನ್ನು ಕೇಳಿ ಸಂತೋಷದಿಂದ–ನೀನು ಬಹಳ ಶ್ರಮಜೀವಿ. ಹಾಗೂ ಪ್ರಾಮಾಣಿಕನಾಗಿರುವೆ. ನಿನ್ನ ಗುಣವನ್ನು ನಾನು ಮೆಚ್ಚಿರುವೆನು. ಅದಕ್ಕಾಗಿ ನೀನು ಈ ಉಂಗುರವನ್ನು ಬಹುಮಾನವಾಗಿ ತೆಗೆದುಕೋ. ನಿಮ್ಮನ್ನು ಪರೀಕ್ಷಿಸಬೇಕೆಂದು ನಾನು ಉದ್ದೇಶಪೂರ್ವಕವಾಗಿ ಈ ಉಂಗುರವನ್ನು ಬಾವಿಯಲ್ಲಿ ಹಾಕಿದ್ದೆನು. ಅಲ್ಲದೆ ರಂಧ್ರದ ಬಕೀಟುಗಳನ್ನು ಕೊಟ್ಟಿದ್ದೆನು. ನಿನ್ನ ಶ್ರಮಕ್ಕೆ ತಕ್ಕ ಫಲ ನಿನಗೆ ದೊರೆಯಿತು" ಎಂದು ಹೇಳಿದನು.

ಮರುದಿನ ಅವನು ಆ ರಾಜ್ಯದ ಅರಮನೆಯ ಮುಖ್ಯ ಕಾವಲುಗಾರನ್ನಾಗಿ ನೇಮಕವಾದನು. ಕಷ್ಟಪಟ್ಟು ದುಡಿಯುವ ಗುಣ ಮತ್ತು ಪ್ರಾಮಾಣಿಕತೆ ಇದ್ದರೆ ಖಂಡಿತವಾಗಿ ಫಲ ಸಿಕ್ಕೇ ಸಿಗುತ್ತದೆ.

# ಔಷಧೀಯ ಸಸ್ಯ ಸಂಪತ್ತು



**ಈಶ್ವರಬಳ್ಳಿ**

ವಿಷಗಳಿಗೆ ರಾಮಬಾಣ

ಹೆಸರುಗಳು

ಕನ್ನಡ: ಈಶ್ವರ ಬಳ್ಳಿ, ಈಶ್ವರೀಬಳ್ಳಿ, ಈಶ್ವರೀ ಬೇರು, ಈಸಡೀ ಬೇರು, ಇಸಡೀಬೇರು, ವಿಷಹರೀ ಬೇರು, ವಿಷಾರಿ ಬೇರು, ತಕ್ಕಡಿ ಹಂಬು, ಗೋಪಾಲಪುಟ್ಟಿ ತೊಪ್ಪಲು, ತೊಟ್ಟು ಹಂಬು, ವಿಷ ಮಂಗಾರಿಬಳ್ಳಿ; ತುಳು: ಈಸ್ವರ ಬಳ್ಳ್; ಮಲಯಾಳಂ: ಈಶ್ವರಬೇರ್, ಗರುಡಕ್ಕೊಡಿ; ತಮಿಳು: ಈಯವರಿ, ಈಶುರವೇರ್; ಮರಾಠಿ: ಸಾಪ್‌ಸಂದಾ; ತೆಲುಗು: ದೂಲಗೋವೇ,



ಫಿಲಿಫೈನ್ಸ್ ನ ಪ್ರಮುಖ ಬಂದರು – ಮನಿಲಾ

ಈಶ್ವರಬೇರು; ಕೊಂಕಣಿ: ಸಾಪ್ಸಿಕಡ್ಡೂಲ; ಹಿಂದಿ: ಈಶುರಮೂಲ್;
ಸಂಸ್ಕೃತ: ಈಶ್ವರೀ; ಇಂಗ್ಲಿಷ್: Indian birthwort;
ಸಸ್ಯಶಾಸ್ತ್ರೀಯ: Aristolochia indica L.
ಕುಟುಂಬ: Aristolochiaceae;
ಉಪಯೋಗ: ಎಲ್ಲಾ ಭಾಗಗಳು ಪ್ರತ್ಯೇಕವಾಗಿ.

ಮೂಲಿಕಾ ಪರಿಚಯ

ಎಲ್ಲ ತರಹದ ಹವೆ, ನೆಲಗಳಲ್ಲಿ ಬೆಳೆಯುವ ಮೂಲಬೇರಿನಿಂದ ವಾರ್ಷಿಕವಾಗಿ ಚಿಗುರುವ ಬಳ್ಳಿ. ಬಲವಾದ ನಾರು ದಾರದಂತೆ ಪೊದರುಗಳಲ್ಲಿ ಬೆಳೆಯುವುದು. ಮುಟ್ಟಿದಾಗ, ಜೋರಾಗಿ ಅಲುಗಿದಾಗ ಒಂದು ತರದ ಅಮಲು ಸುಗಂಧ ಸೂಸುವುದು. ಎಲೆಗಳು ಕೆಲವೊಮ್ಮೆ ಬಲು ಸಮೀಪ, ಕೆಲವೊಮ್ಮೆ ದೂರವಾಗಿರುವುದು. ಎಲೆ ಗಾತ್ರವೂ ಅಷ್ಟೆ. ಒಂದು ಚಮಚ ಗಾತ್ರದಿಂದ 4–6 ಅಂಗುಲವೂ ಆಗುವುದು. ಹಾರು ಹಕ್ಕಿಯಾಕಾರದ ಕಡುನೇರಳೆ ಕಪ್ಪು ವರ್ಣದ ಹೂಗಳು, ಗುಂಡಗೆ ಕೊಂಚ ಉದ್ದವಾದ ಹಸುರು ಕಾಯಿಗಳು, ಒಣಗಿದಾಗ ಬಿರಿದು ತಕ್ಕಡಿಯಂತೆ ಕಾಣಿಸುವುದು. ತ್ರಿಕೋನಾಕಾರದ ತೆಳು ಬೀಜಗಳು ಅಟ್ಟು ಹಾಕಿದಂತೆ ಇರುತ್ತವೆ. ಸಸ್ಯ ಸರ್ವಾಂಗ ಸುಗಂಧ. ಹಿಮಾಲಯದಿಂದ ದಕ್ಷಿಣಕ್ಕೆ ಭಾರತ, ಶ್ರೀಲಂಕಾ ತನಕ ಇದರ ವ್ಯಾಪ್ತಿ ಇದೆ. ಇದರ ಬೇರು ಪ್ರಸಿದ್ಧ ವಿಷಹರ ದ್ರವ್ಯ. ಶರೀರ ಕಣಗಳಿಗೆ ವಿಷ ವ್ಯಾಪಿಸದಂತೆ ತಡೆಯುವುದು ಇದರ ವಿಶಿಷ್ಟ ಗುಣ. ನಷ್ಟಾರ್ತವ, ಕಷ್ಟಾರ್ತವ, ಕಷ್ಟ ಪ್ರಸವ, ಬಾಣಂತಿ ನಂಜು, ಸನ್ನಿಪಾತ ಎಲ್ಲಾ ನಂಜು ರೋಗಗಳು, ಎಲ್ಲಾ ವಿಷಗಳು, ಸೇವನಾವಿಷ, ಕಫ ಮತ್ತು ಕೃಮಿಜನ್ಯ ರೋಗಗಳು, ನೋವುಗಳು, ಬಾವುಗಳು ಅತಿಸಾರ ಭೇದಗಳು, ಹೀಗೆ ಹಲತರದ ರೋಗಗಳಲ್ಲಿ ಅನುಭವಿಗಳು ಕೊಡುವ ವಿಶಿಷ್ಟ ಮದ್ದು. ರಕ್ಷೆಯಾಗಿ, ಹೊರಲೇಪನವಾಗಿಯೂ ಬಲು ಪರಿಣಾಮಕಾರಿ. ಗರ್ಭಿಣಿಯರಿಗೆ ನಿಷೇಧ. ನರಗಳನ್ನು, ರಕ್ತನಾಳ–ಹೃದಯ ಇವುಗಳನ್ನು ಉತ್ತೇಜಿಸುವ ಗುಣವಿದೆ. ಔಷಧವಾಗಿ ಇದರ 4 ಪ್ರಭೇದಗಳು ಬಳಕೆಯಲ್ಲಿವೆ. ಅಂದವಾದ ಹೂಗಳಿಗಾಗಿ ನೆಡುವ ಇತರ ಹೂ ಪ್ರಭೇದಗಳೂ ಇವೆ. ಸದ್ಯ ನಶಿಸುತ್ತಿರುವ ಹಾದಿಯಲ್ಲಿದೆ.

ಉಪಯೋಗಗಳು

ಹೊಟ್ಟೆಯೊಳಗಿನ ಕೃಮಿ ಸಂಕುಲಕ್ಕೆ: ಈಶ್ವರ ಬಳ್ಳಿಯ ಎಲೆಯ ರಸ 1 ಚಮಚ(ಒಂದರಿಂದ ಒಂದೂವರೆ ಚಮಚ) ರಾತ್ರಿ ಆಹಾರದ ನಂತರ ಸೇವನೆ. (ಅದರೊಂದಿಗೆ ನಾಭಿಗೆ ಅದೇ ರಸ ಲೇಪಿಸಿ ನಿದ್ರಿಸುವುದು ಇನ್ನೂ ಪರಿಣಾಮಕಾರಿ) 1ರಿಂದ 3 ದಿನ.

ಇಲಿ, ಚೇಳು, ಕೀಟಗಳು, ಜೇಡ ಇತ್ಯಾದಿಗಳ ಕಡಿತದ ವಿಷಕ್ಕೆ: ಈಶ್ವರ ಬೇರನ್ನು ಅಕ್ಕಿ ತೊಳೆದ ನೀರಲ್ಲಿ ತೇದು (ಅರೆದು) 1/4 ರಿಂದ 1 ಚಮಚದಷ್ಟು ಸೇವನೆ ಮತ್ತು ಎಲೆಗಳನ್ನು ನೀರಲ್ಲರೆದು ಕಡಿ ಗಾಯಕ್ಕೆ ಲೇಪನ.

# 73 ನೇ ಸ್ವಾತಂತ್ರ್ಯ ದಿನಾಚರಣೆಯ ವರದಿ

ಶ್ರೀ ಮಾರುತಿ ರೆಸಿಡೆನ್ಸಿಯಲ್ ಸ್ಕೂಲ್ ಬಂಗಾರಮಕ್ಕಿಯಲ್ಲಿ 73 ನೇಯ ಸ್ವಾತಂತ್ರ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಶ್ರೀ ಶ್ರೀ ಶ್ರೀ ಮಾರುತಿ ಗುರೂಜಿಯವರು ಬೆಳಿಗ್ಗೆ ಸಮಯ 9:00 ಗಂಟೆಗೆ ಧ್ವಜಾರೋಹಣವನ್ನು ನೆರವೇರಿಸಿದರು. ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಅರ್ಪಿತಾ ಮಾರುತಿ ಗುರೂಜಿ, ಆಡಳಿತ ನಿರ್ದೇಶಕರಾದ ಶ್ರೀ ಜಿ.ಟಿ.ಹೆಗಡೆ, ಅತಿಥಿಗಳಾಗಿ ಆಗಮಿಸಿದ ಶ್ರೀ ನಾಗರಾಜ ನಾಯ್ಕ, ಪ್ರಾಂಶುಪಾಲರಾದ ಶ್ರೀ ಎನ್. ವಿಠ್ಠಲ, ಪಾಲಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವೇದಘೋಷ, ಶಾಲಾ ವಿದ್ಯಾರ್ಥಿಗಳಿಂದ ಪಾರ್ಥನೆ, ಶಾಲೆಯ ಆಡಳಿತ ನಿರ್ದೇಶಕರಾದ ಶ್ರೀ ಜಿ.ಟಿ.ಹೆಗಡೆ ರವರು ಸ್ವಾತಂತ್ರ್ಯ ದಿನಾಚರಣೆಯ ಶುಭಕೋರಿ ಎಲ್ಲರನ್ನು ಸ್ವಾಗತಿಸಿದರು. ದೀಪ ಬೆಳಗುವುದರೊಂದಿಗೆ ಸಭಾ ಕಾರ್ಯಕ್ರಮವು ಆರಂಭವಾಯಿತು. ನಂತರ ವಿದ್ಯಾರ್ಥಿಗಳ ಕನ್ನಡ, ಇಂಗ್ಲಿಷ್, ಹಿಂದಿ ಭಾಷಣ, ವಿವಿಧ ದೇಶಭಕ್ತಿಗೀತೆ, ನಾಟಕ ಹಾಗೂ ನೃತ್ಯಗಳು ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿದವು. ಶಿಕ್ಷಕಿ ಕುಮಾರಿ ಜ್ಯೋತಿ ಆಚಾರಿ ಮಾತನಾಡಿ ದೇಶಭಕ್ತಿಯನ್ನು ಜಾಗೃತಗೊಳಿಸಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಶ್ರೀ ನಾಗರಾಜ ನಾಯ್ಕ ತಮ್ಮ ಕಾರ್ಗಿಲ್ ಯುದ್ಧದ ನೆನಪುಗಳನ್ನು ಸ್ಮರಿಸಿಕೊಂಡು ತಮ್ಮ ಅನುಭವಗಳನ್ನು ಮಕ್ಕಳೊಡನೆ ಹಂಚಿಕೊಂಡರು, ಭಾರತದ ಪ್ರಜೆಯಾದವರು ಪ್ರತಿಯೊಬ್ಬರೂ ದೇಶ ಸೇವೆ ಮಾಡಿ, ದೇಶಕ್ಕೆ ಕೊಡುಗೆ ನೀಡಿ ಎಂದು ಹೇಳಿದರು.

ಶ್ರೀ ಮಾರುತಿ ಗುರೂಜಿಯವರು ಮಾತನಾಡಿ "ಶಿಕ್ಷಕ ಮನಸ್ಸುಮಾಡಿದರೆ ದೇಶವನ್ನು ನಿರ್ಮಿಸಬಲ್ಲ" ಎಂದರು. ಸ್ವಾತಂತ್ರ್ಯ ದಿನಾಚರಣೆ ಆಚರಣೆಗೆ ಸೀಮಿತವಾಗದೆ ಅನುಕರಣೆಗೆ ಬರಬೇಕು ಎಂದು ತಿಳಿಸಿದರು. ಕೊನೆಯಲ್ಲಿ ಶ್ರೀ ಜಯಂತ ಗೌಡ ಸರ್ವರನ್ನು ವಂದಿಸಿದರು. ಸಿಹಿ ಹಂಚುವುದರೊಂದಿಗೆ ಸ್ವಾತಂತ್ರ್ಯೋತ್ಸವದ ಆಚರಣೆ ಪೂರ್ಣಗೊಂಡಿತು.



ನೆದರ್ ಲ್ಯಾಂಡ್ ನ ಪ್ರಮುಖ ಬಂದರು – ರೋಟರ್ ಡ್ಯಾಂ



॥ ಪ್ರಸೀದತು ಶ್ರೀ ವೀರಾಂಜನೇಯ ॥

**ಶ್ರೀ ವೀರಾಂಜನೇಯ ದೇವರು, ಶ್ರೀ ಕ್ಷೇತ್ರ ಬಂಗಾರಮಕ್ಕಿ.**
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರವಾರ** ಹಾಗೂ
**ಸಿಲೆಕ್ಟ್ ಫೌಂಡೇಶನ್ (ರಿ) ಶ್ರೀಕ್ಷೇತ್ರ ಬಂಗಾರಮಕ್ಕಿ**
**ಗೇರಸಪ್ಪಾ, ತಾ॥ ಹೊನ್ನಾವರ (ಉ.ಕ.)**
ಇವರ ಆಶ್ರಯದಲ್ಲಿ

# ಯಕ್ಷಪೂರ್ಣಿಮೆ –2019

## ಉದ್ಘಾಟನಾ ಸಮಾರಂಭ

| –: ದಿನಾಂಕ :– | –: ಸ್ಥಳ :– | –: ಸಮಯ :– |
|---|---|---|
| 29–09–2019, ರವಿವಾರ | ಶ್ರೀ ವೀರಾಂಜನೇಯ ಸಭಾಭವನ, ಶ್ರೀಕ್ಷೇತ್ರ ಬಂಗಾರಮಕ್ಕಿ | ರಾತ್ರಿ –9–00 ಗಂಟೆಗೆ |

ದಿವ್ಯ ಸಾನಿಧ್ಯ : **ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು,** ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಬಂಗಾರಮಕ್ಕಿ.
ಉದ್ಘಾಟನೆ : **ಶ್ರೀ ವಿಶ್ವನಾಥ ಎಸ್. ಶೇಟ್,** ಯಕ್ಷಗಾನ ವಿದ್ವಾಂಸರು, ಹಾರ್ಸಿಕಟ್ಟಾ, ಸಿದ್ಧಾಪುರ (ಉ.ಕ.).
ಅಧ್ಯಕ್ಷತೆ : **ಶ್ರೀ ಸುನೀಲ ಬಿ ನಾಯ್ಕ,** ಮಾನ್ಯ ಶಾಸಕರು, ಹೊನ್ನಾವರ–ಭಟ್ಕಳ ವಿಧಾನಸಭಾಕ್ಷೇತ್ರ.
ಮುಖ್ಯ ಅತಿಥಿಗಳು : **ಶ್ರೀಮತಿ ಅನ್ನಪೂರ್ಣಾ ಶಾಸ್ತ್ರಿ,** ಅಧ್ಯಕ್ಷರು, ಗ್ರಾಮ ಪಂಚಾಯತ್ ನಗರಬಸ್ತಿಕೇರಿ.
**ಶ್ರೀ ಮಂಜುನಾಥ ನಾಯ್ಕ,** ಸದಸ್ಯರು, ಗ್ರಾಮ ಪಂಚಾಯತ್ ನಗರಬಸ್ತಿಕೇರಿ.
**ಶ್ರೀ ಸೂರಾಲು ಚಂದ್ರಶೇಖರ ಭಟ್ಟ,** ಅರ್ಚಕರು, ಶ್ರೀ ಸೀಮಾ ಮುಖ್ಯಪ್ರಾಣ ದೇವಸ್ಥಾನ, ಶ್ರೀಕ್ಷೇತ್ರ ಗೋವರ್ಧನಗಿರಿ.
**ಡಾ॥ ಕುಬೇರ ಸಿ.,** ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯಕೇಂದ್ರ, ಗೇರಸೊಪ್ಪಾ.
**ಶ್ರೀ ನಾಗರಾಜ ನಾಯಕ,** ಖ್ಯಾತ ವಕೀಲರು ಹಾಗೂ ಸಮಾಜ ಸೇವಕರು.
**ಶ್ರೀ ಗಣಪತಿ ಶಿರಳಗಿ,** ಪತ್ರಕರ್ತರು, ಸಾಗರ.
ಪ್ರಾಸ್ತಾವಿಕ ನುಡಿ : **ಶ್ರೀ ಸುಬ್ರಹ್ಮಣ್ಯ ಹೆಗಡೆ,** ಚಿಟ್ಟಾಣಿ.
ನಿರೂಪಣೆ : **ಶ್ರೀ ಗೋಪಾಲಕೃಷ್ಣ ನಾಯ್ಕ,** ಕುಮಟಾ.
ಸಹಯೋಗ : ಶ್ರೀ ವೀರಾಂಜನೇಯ ಯಕ್ಷಮಿತ್ರ ಮಂಡಳಿ (ರಿ) ಅಧ್ಯಕ್ಷರು, ಸದಸ್ಯರು ಹಾಗೂ ಸರ್ವ ಕಲಾವಿದರು.

* * * * * * * * * * * * * * * * * * * * * * * * * * * * * * * * *

## ದಿ॥ ವೇ॥ಮೂ॥ ಶ್ರೀ ಗಣೇಶ ಭಟ್ಟರ ಸ್ಮರಣಾರ್ಥ 'ಯಕ್ಷಾಂಜನೇಯ ಪ್ರಶಸ್ತಿ' ಪ್ರಧಾನ ಹಾಗೂ ಯಕ್ಷಪೂರ್ಣಿಮೆ–2019 ರ ಸಮಾರೋಪ

| –: ದಿನಾಂಕ :– | –: ಸ್ಥಳ :– | –: ಸಮಯ :– |
|---|---|---|
| 13–10–2019, ರವಿವಾರ | ಶ್ರೀ ವೀರಾಂಜನೇಯ ಸಭಾಭವನ, ಶ್ರೀಕ್ಷೇತ್ರ ಬಂಗಾರಮಕ್ಕಿ | ರಾತ್ರಿ –9–00 ಗಂಟೆಗೆ |

ಅಧ್ಯಕ್ಷತೆ ಮತ್ತು ದಿವ್ಯ ಸಾನಿಧ್ಯ : **ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು,** ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಬಂಗಾರಮಕ್ಕಿ.
ಮುಖ್ಯ ಅತಿಥಿಗಳು : **ಡಾ॥ ವೆಂಕಟೇಶ ಎಲ್. ನಾಯ್ಕ,** ಅಧ್ಯಕ್ಷರು, ಶ್ರೀ ಮಾರಿಕಾಂಬಾ ದೇವಸ್ಥಾನ, ಸಿರ್ಸಿ (ಉ.ಕ.).
**ಶ್ರೀ ಸುಬ್ರಹ್ಮಣ್ಯ ಎಸ್. ಶಾಸ್ತ್ರೀ,** ಮಾಜಿ ಜಿಲ್ಲಾಪಂಚಾಯತ ಸದಸ್ಯರು.
**ಶ್ರೀ ಗೋವಿಂದ ಎಸ್ ನಾಯ್ಕ,** ಸದಸ್ಯರು, ಗ್ರಾಮ ಪಂಚಾಯತ, ನಗರಬಸ್ತಿಕೇರಿ.
**ಶ್ರೀ ರಾಘವೇಂದ್ರ ನಾಯ್ಕ,** ಸದಸ್ಯರು, ಗ್ರಾಮ ಪಂಚಾಯತ, ನಗರಬಸ್ತಿಕೇರಿ.
**ಶ್ರೀ ಎಸ್. ಆರ್. ಗಜಾನನ,** ಜೈ–ಸಂತೋಷಿ ಮಾತಾ ಮಂದಿರ, ಸರಳಗಿ.
**ಶ್ರೀ ನರಸಿಂಹ ಭಾಗ್ವತ,** ನಿರ್ದೇಶಕರು, ವಿ. ಎಸ್. ಎಸ್., ಹೆಗ್ಗಾರ.

ಪ್ರಶಸ್ತಿ ಪುರಸ್ಕೃತರು : **ಶ್ರೀ ಪ್ರಭಾಕರ ಹೆಗಡೆ ಚಿಟ್ಟಾಣಿ,** ಖ್ಯಾತ ಯಕ್ಷಗಾನ ಕಲಾವಿದರು.
ಪ್ರಾಯೋಜಕತ್ವ : **ಕು॥ ಶ್ರೀರಾಮ,** ಶ್ರೀಕ್ಷೇತ್ರ ಬಂಗಾರಮಕ್ಕಿ.

ನಿರೂಪಣೆ : **ಶ್ರೀ ಗೋಪಾಲಕೃಷ್ಣ ನಾಯ್ಕ,** ಕುಮಟಾ.

**ಸರ್ವರಿಗೂ ಆದರದ ಸ್ವಾಗತ**

**ಸುಂದರಕಾಂಡದ ಸೌಂದರ್ಯ** ಲೇ: ರಾಮಕೃಷ್ಣ ಎನ್. ಹೆಗಡೆ

# ಶ್ರೀ ವೀರಾಂಜನೇಯ

ಸೀತಾಮಾತೆಯ ಅರ್ಥವತ್ತಾದ ಮಾತುಗಳನ್ನು ಕೇಳಿದ ನಂತರ ಆಂಜನೇಯನು ಅವಳಿಗೆ ಹೀಗೆ ಹೇಳಿದನು. ಶ್ರೀರಾಮ ಮತ್ತು ಸುಗ್ರೀವರು ಸಖ್ಯ ಮಾಡಿಕೊಂಡು ನಿನ್ನ ಅನ್ವೇಷಣೆಯಲ್ಲಿ ತೊಡಗಿದ್ದಾರೆ. ಅನೇಕ ಕಪಿವೀರರು ಸುಗ್ರೀವನ ಸೈನ್ಯದಲ್ಲಿದ್ದಾರೆ. ಅವರೆಲ್ಲಾ ನನಗಿಂತ ಹೆಚ್ಚಿನದಾದ ಪರಾಕ್ರಮವುಳ್ಳವರಾಗಿದ್ದಾರೆ. ಅವರೆಲ್ಲಾ ಸುಗ್ರೀವನ ಆಜ್ಞೆಗೆ ಅನುಗುಣವಾಗಿ ಕಾರ್ಯವನ್ನು ಮಾಡುತ್ತಾರೆ. ಅವರ ಪರಾಕ್ರಮವನ್ನು ಹೀಗೆ ವರ್ಣಿಸಲಾಗಿದೆ:

ತಸ್ಯ ವಿಕ್ರಮಸಂಪನ್ನಾಃ ಸತ್ವವಂತೋ ಮಹಾಬಲಾಃ।
ಮನಃ ಸಂಕಲ್ಪ ಸಂಪಾತಾ ನಿದೇಶೀ ಹರಯಃ ಸ್ಥಿತಾಃ॥

ಮಹಾ ಪರಾಕ್ರಶಾಲಿಗಳಾಗಿರುವ ಅವರು ಸುಗ್ರೀವನ ಆಜ್ಞೆಯನ್ನು ತಪ್ಪದೇ ಪಾಲಿಸುವಂಥವರು. ಎಂತಹ ಕಾರ್ಯವನ್ನಾದರೂ ಸುಲಭವಾಗಿ ಸಾಧಿಸಿ ಕೊಡುವಂತವರು. ಅಂತಹ ವಾನರವೀರರು ತಮ್ಮ ಮನಸ್ಸಿನಲ್ಲಿ ಇಲ್ಲಿಗೆ ಬರುವಂತಹ ಸಂಕಲ್ಪ ಸಂಕಲ್ಪ ಉಂಟಾಗುತ್ತಲೇ ಬಂದು ಸೇರುವಂತಹವರಾಗಿದ್ದಾರೆ. ವಾಯುಮಾರ್ಗದಲ್ಲಿ ಸಂಚರಿಸುವಂತಹ ಶಕ್ತಿಯಿರುವ ಅವರುಗಳು ಈ ಭೂಮಂಡಲವನ್ನೇ ಸುತ್ತಿ ಬಂದಂಥವರಾಗಿದ್ದಾರೆ. ಹಾಗೆಯೇ ಎಲ್ಲರೂ ನನಗಿಂತಲೂ ಹೆಚ್ಚಿನ ಪರಾಕ್ರಮವುಳ್ಳವರೇ ಹೊರತು ನನಗಿಂತ ಕಡಿಮೆ ಪರಾಕ್ರಮವುಳ್ಳವರು ಯಾರೂ ಇಲ್ಲ. ಹೀಗೆ ಹನುಮಂತನ ದಾಸ್ಯತ್ವದ ಹಾಗೂ ವಿನಯಯುತವಾದ ಮಾತುಗಳು ಸೀತೆಯಲ್ಲಿ ಭರವಸೆಯನ್ನು ಹುಟ್ಟಿಸಿದವು. ದೂರದ ಪ್ರದೇಶದಲ್ಲಿದ್ದರೂ ನನ್ನನ್ನು ಅನ್ವೇಷಣೆ ಮಾಡಿ ಪತ್ತೆ ಮಾಡಿರುವ ಇವರು ಸಾಮಾನ್ಯದವರಲ್ಲ. ಇವರಲ್ಲಿ ಶಕ್ತಿ ಯುಕ್ತಿಗಳಿವೆ. ಇವರೆಲ್ಲಾ ಜೊತೆಗೂಡಿದರೆ ರಾವಣನು ಏನು ಮಾಡುವುದಕ್ಕೆ ಸಾಧ್ಯ? ಹೀಗೆ ಚಿಂತನೆ ಮಾಡಿದ ಸೀತೆಯು ಖಂಡಿತವಾಗಿಯೂ ಶ್ರೀರಾಮ ಮತ್ತು ಲಕ್ಷ್ಮಣರನ್ನು ಲಂಕೆಯಲ್ಲಿ ನೋಡುವ ಸೌಭಾಗ್ಯ ನನ್ನದಾಗುತ್ತದೆಯೆಂದು ನಂಬಿದಳು. ಹನುಮಂತನ ಮಾತಿನಲ್ಲಿಯೇ ಹೇಳುವುದಾದರೆ:

ಅರಿಘ್ನಂ ಸಿಂಹಸಂಕಾಶಂ ಕ್ಷಿಪ್ರಂ ದ್ರಕ್ಷ್ಯಸಿ ರಾಘವಮ್।
ಲಕ್ಷ್ಮಣಂ ಚ ಧನುಷ್ಪಾಣಿಂ ಲಂಕಾದ್ವಾರಮುಪಸ್ಥಿತಮ್॥

ಶತ್ರುಗಳನ್ನು ದಮನ ಮಾಡುವುದರಲ್ಲಿ ಸಮರ್ಥನಾದ, ಹಾಗೆಯೇ ಶ್ರೇಷ್ಠ ಬಿಲ್ಲುಗಾರನಾಗಿರುವ ಶ್ರೀರಾಮ ಮತ್ತು ಲಕ್ಷ್ಮಣರು ಲಂಕಾದ್ವೀಪದಲ್ಲಿ ಬಂದು ನಿಲ್ಲುವುದನ್ನು ಸೀತೆಯು ಬಹುಬೇಗನೆ ಕಾಣುತ್ತಾಳೆ, ಹೀಗೆ ಸೀತೆಯು ಹನುಮಂತನ ಮಾತಿನಿಂದಾಗಿ ಪುನಃ ಶ್ರೀರಾಮನನ್ನು ಸೇರುವ ವಿಷಯವಾಗಿ ದೃಢವಾದ ನಂಬಿಕೆಯನ್ನು ಹೊಂದುತ್ತಾಳೆ.

**ಮುಂದುವರಿಯುವುದು**

# ಶ್ರೀ ಬಂಗಾರಮಕ್ಕಿ ಕ್ಷೇತ್ರಮಹಾತ್ಮೆ

ಲೇ ॥ ಶ್ರೀ ವನರಾಗ ಶರ್ಮ

– ವಂದನೆ –

ವಂದನೆ ವಂದನೆ ಮಾರುತಿ ಗುರುವಿಗೆ
ಯೋಗಾಧ್ಯಾತ್ಮದ ಸಾಧಕಗೆ.
ಮಾರುತಿದೇವರ ಪೂಜಾನಿರತಗೆ
ಮುಖ್ಯಪ್ರಾಣನ ಕಿಂಕರಗೆ.

ಮಾರುತಿ ಗುರುವಿನ ಪಾದಕೆ ವಂದನೆ
ಲೋಕ ಕಲ್ಯಾಣಕೆ ಹೊರಟವಗೆ.
ವೀರಾಂಜನೇಯನ ಭಕುತಗೆ ವಂದನೆ
ಜನಗಳ ಕಷ್ಟವ ಕಳೆವವಗೆ.

ಬಂಗಾರಮಕ್ಕಿಯ ಕ್ಷೇತ್ರದಿ ನೆಲೆಸಿಹ
ಮಾರುತಿ ಭಕುತ ಮಹಂತನಿಗೆ.
ಜಗತಿಗೆ ದಿವ್ಯದ ಶಕ್ತಿ ಸಂದೇಶವ
ನೀಡುತಲಿರುತಿಹ ಸಂತನಿಗೆ.





ಹಸಿದಿಹರೆಲ್ಲರ ಕ್ಷುಧೆ ತೃಷೆ ತಣಿಸುವ
ನಿತ್ಯ ನಿರಂತರ ದಾಸೋಹ.
ರಕ್ಷಣೆಗಾಗಿ ನವಗೋಶಾಲೆಯು
ಅಲ್ಲಿದೆ ದನಕರು ಸಂದೋಹ!

ಸಂಸ್ಕೃತ ವೇದರ ಪಾಠದಶಾಲೆ
ನೂತನ ವಿದ್ಯೆಗು ಇದೆ ಕೇಂದ್ರ.
ಸಾಹಿತ್ಯ ಸಂಸ್ಕೃತಿ ಧರ್ಮಸಭಾಸಹ
ಬೆಳಗಿವೆ ಜ್ಞಾನದ ರವಿ–ಚಂದ್ರ.

ಕ್ಷೇತ್ರ ಮಹಾತ್ಮೆಯು ಅಪೂರ್ವವಾಗಿದೆ
ಬನ್ನಿರಿ ದರ್ಶನವನು ಪಡೆದು.
ಹೊಂದಿರಿ ಬಾಳಲಿ ಸುಖಶಾಂತಿಯನು
ಎನ್ನುವ ಭಕುತರು ನಾವಿಂದು.



ಥೈಲ್ಯಾಂಡ್‌ನ ಟರ್ಕಿಯ ಪ್ರಮುಖ ಬಂದರು – ಬ್ಯಾಂಕಾಕ್

# ಶರಣೆನ್ನುವೆ

– ಶ್ರೀಮತಿ ಸಾವಿತ್ರಿ ಹೆಗಡೆ, ಬಸವನಬೆಟ್ಟ.

ನಾ ಬಾಗುವೆ ನಾ ಬೇಡುವೆ
ಕೊಡು ಭಕ್ತಿಯಾ ಕೊಡು
ಮುಕ್ತಿಯಾ ಶ್ರೀರಾಮನೇ
ಶರಣೆನ್ನುವೆ....

ದೂರದೂರಿಂದ ನಾ ಬಂದಿರುವೆ
ನಿನ್ನ ಪಾದಕಮಲ ನೋಡಿ
ಮನವ ತಣಿಸಲು ತೋರೋ
ಪಾದವಾ ಶ್ರೀರಾಮನೇ
ಶರಣೆನ್ನುವೆ....



ಶ್ರೀಕರದಲಿ ನಿನ್ನ ಅಂದವು
ಶೋಭಿಸುವ ಪರಿ ನೋಡುತ
ಆನಂದದಿ ನಿನ್ನ ಪಾಡುತ
ಮೈ ಮರೆಯುವೆ ಶ್ರೀರಾಮನೇ
ಶರಣೆನ್ನುವೆ....

ಭಕ್ತಿ ಭಾವದಿ ತಂದಿರುವೆನು
ಪ್ರಕೃತಿ ನೀಡಿದ ವರಕುಸುಮವ
ನಿನಗರ್ಪಿಸಿ ಮುದದಿಂದಲಿ
ಪಾದಕರ್ಪಿಸಿ ಶ್ರೀರಾಮನೇ
ಶರಣೆನ್ನುವೆ....

# ಪದಬಂಧ–48

–ಶ್ರೀ ಗುರು ದಾಸ.

**ಎಡದಿಂದ ಬಲಕ್ಕೆ :–**

1. ರಾಜ್ಯದಲ್ಲಿನ ಅತೀವೃಷ್ಟಿಗೆ ಮಗುವೊಂದು ವ್ಯಥೆಪಡುತ್ತಿದೆ –3
3. ಮೇಲಕ್ಕೆ ಹಾರಿಸುವ ವ್ಯವಸ್ಥಿತ ವ್ಯವಸ್ಥೆ –4
5. ಗಿಡದ ಚಿಗುರನ್ನು ಉಗುರಿನಿಂದ ಕತ್ತರಿಸು – ತಿರುಗಿಸು –3
6. ಮುಸುಕಾಗಿ ಕಾಣುವ ಮುಂಜಾನೆಯ ವೇಳೆ –3
8. ಭಯದಿಂದ ನಡುಗುವುದು ವಿವಿಧ ಬಗೆಯಾಗಿದೆ –4
12. ನಿಜ ವೇಷವನ್ನು ಮರೆಮಾಚಿದೆ –4
13. ಪುಸ್ತಕ ರೂಪದಲ್ಲಿರುವ ದಾಖಲೆಗಳು –3
15. ದಕ್ಷಿಣ ದಿಕ್ಕಿನ ಅಧಿಪತಿ –2
18. ಕುಬೇರನ 17 ಹೆಸರುಗಳಲ್ಲೊಂದು –2
21. ಯಾರಿಗೂ ತಿಳಿಯದಂತೆ ಮಾಹಿತಿ ಸಂಗ್ರಹಿಸುವುದು –4
22. ನಿಮ್ಮ ಪ್ರತಿಭೆಗೆ ಮನ್ನಣೆ ಸಿಕ್ಕಿದೆ –3

| | | | | | | | |
|---|---|---|---|---|---|---|---|
| 1 | | 2 | ■ | 3 | | 4 | |
| | ■ | 5 | | | ■ | | ■ |
| 6 | 7 | | ■ | 8 | 9 | | 10 |
| ■ | | ■ | 11 | ■ | | ■ | |
| 12 | | | | ■ | 13 | 14 | |
| | ■ | ■ | 15 | 16 | ■ | | ■ |
| | ■ | 17 | ■ | 18 | 19 | ■ | 20 |
| 21 | | | | ■ | 22 | | |

**(ಉತ್ತರ ಮುಂದಿನ ಸಂಚಿಕೆಯಲ್ಲಿ)**

**ಮೇಲಿಂದ ಕೆಳಕ್ಕೆ :–**

1. ಏಕಾಗ್ರತೆಯ ಚಿಂತನೆ –3
2. ಹಕ್ಕಿಯೊಂದು ತನ್ನ ಮರಿಗಾಗಿ ತಂದ ತುತ್ತು –3
3. ಒಂದನ್ನು ಖರೀದಿಸಿದ್ದಕ್ಕೆ ಇನ್ನೊಂದಕ್ಕೆ ಹಣ ಪಡೆಯಲಿಲ್ಲ –3
4. ಋತುಗಳ ರಾಜನೆಂದೆ ಕರೆಯಲ್ಪಡುವ ಋತು –3
7. ಅಂದಾಜಿನಲ್ಲಿ ಅಷ್ಟು–ಇಷ್ಟು ಎನ್ನುವುದು –3
9. ಬಟ್ಟೆಗಳನ್ನು ಮಡಿಮಾಡುವವನಿತ –3
10. ಅದನ್ನು ಇಲ್ಲಿ ಹೊರತುಪಡಿಸಲಾಗಿದೆ –3
11. ಕೇವಲ ವಿಷಕ್ಕೆ ಸಂಬಂಧಿಸಿರದ ಸಂಗತಿ –3
12. ವಾಯುವೇಗದಲ್ಲಿ ಕಣ್ಮರೆಯಾಗು –4
14. ಆಲಸ್ಯತನವು ತಿರುಗಿದೆ –2
16. ಮಹಾಭಾರತ ಕಾಲದ ಪ್ರಸಿದ್ಧ ರಾಕ್ಷಸ ವಾಸ್ತುಶಿಲ್ಪಿ –2
17. ದುಷ್ಟತನದಿಂದ ಕೂಡಿದ ವ್ಯಕ್ತಿ –2
19. ತಪ್ಪು ಮಾಡಿದರೂ ತಿದ್ದಿಕೊಳ್ಳಲು ಕೊಡುವ ಅವಕಾಶ –2
20. ಹಗ್ಗಕ್ಕಾಗಿ ದ್ವೇಶ ಸಾಧಿಸಿದ ಬಗೆ –2

ಪದಬಂಧ–47ರ ಉತ್ತರ

**ಎಡದಿಂದ ಬಲಕ್ಕೆ:–** 1.ರಾಮಾಯಣ, 3.ಹೋಬಳಿ, 5.ಸೋಮ, 6.ತಿರುಗು, 8.ನಿಜ, 10.ಗಹನ, 11.ವಾನರರಾಜ, 13.ಘನ, 14.ನಾಕ, 16.ಸರಿಸಮ, 18.ಕಲಹ, 19.ನೆರಳು. ***** **ಮೇಲಿಂದ ಕೆಳಕ್ಕೆ:–** 1.ರಾಜಧಾನಿ, 2.ಯಯಾತಿ, 3.ಹೋಮ, 4.ಳಿವಡಾನ(ನಡಾವಳಿ), 5.ಸೋಗು, 7.ರುಧಿರ, 9.ಜವಾನ, 10.ಗಜ, 12.ರಾಕ್ಷಸ, 13.ಘಟಕ, 15.ಕರುಳು, 16.ಸಹ, 17.ಮನೆ.



ಬಾಂಗ್ಲಾದೇಶದ ಟರ್ಕಿಯ ಪ್ರಮುಖ ಬಂದರು – ಚಿತ್ತಗಾಂಗ್